13 December 2025 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮಗೆ ಕಷ್ಟ ಬಂದಾಗ ದೇವರನ್ನು ದೂರುತ್ತೇವೆ!
ಆದರೆ ಆತನಿಗೆ ನಾವು ಏನು ಕೊಟ್ಟಿವಿ ಎಂದು ಒಂದು ಕ್ಷಣವೂ ಯೋಚಿಸುವುದಿಲ್ಲ!
▶▶ ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಸುಖದ ಸಂಪತ್ತು ಸವಿಯ ಬೇಕೆಂದರೆ ಕಷ್ಟದ ಗಮ್ಮತ್ತನ್ನು ಅರಿತಿರಬೇಕು.
ಮೈಲಾರ ಸಾವಿತ್ರಿಬಾಯಿ

info.varthaman@gmail.com
9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 52 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಮತ್ತೆ ತಾರಕಕ್ಕೇರಿದ ಸಿಎಂ ಕುರ್ಚಿ ದಂಗಲ್ । ಅಧಿವೇಶನ ಸಂದರ್ಭದಲ್ಲಿಯೇ ಬಣ ಬಡಿದಾಟ**

# ಡಿಕೆಶಿ ಬಣದ ಶಕ್ತಿ ಪ್ರದರ್ಶನ

**ಮುಖ್ಯಮಂತ್ರಿ ಕುರ್ಚಿಗಾಗಿ ಬಣ ಬಡಿದಾಟ । ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಸಿಡಿದೆದ್ದ ಬಂಡೆ ಬಣದ ಶಾಸಕರು । ಕಾವೇರಿದ ರಾಜಕೀಯ**




**ಬೆಳಗಾವಿ:** ಮುಖ್ಯಮಂತ್ರಿ ಕುರ್ಚಿಗಾಗಿ ಬಣ ಬಡಿದಾಟ ಮತ್ತೆ ತಾರಕಕ್ಕೇರಿದೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಬಣಗಳ ಶಾಸಕರು 'ಡಿನ್ನರ್ ಮೀಟಿಂಗ್' ಹೆಸರಿನಲ್ಲಿ ಶಕ್ತಿ ಪ್ರದರ್ಶನ ನಡೆಸುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಬಣದ 40ಕ್ಕೂ ಹೆಚ್ಚು ಶಾಸಕರು ಗುರುವಾರ ರಾತ್ರಿ 'ಡಿನ್ನರ್ ಮೀಟಿಂಗ್' ನಡೆಸುವ ಮೂಲಕ ಕಾಂಗ್ರೆಸ್ ಹೈಕಮಾಂಡ್‌ಗೆ ನೇರ ಸಂದೇಶ ನೀಡಿದ್ದಾರೆ.

ಸಿದ್ದರಾಮಯ್ಯ ಬಣದವರಿಗೆ ಆಹ್ವಾನ ನೀಡದೇ ಡಿಕೆಶಿ ಆಪ್ತರು ಮಾತ್ರ ಈ ಡಿನ್ನರ್‌ನಲ್ಲಿ ಪಾಲ್ಗೊಂಡಿದ್ದರು. ತಡರಾತ್ರಿವರೆಗೂ ಸಭೆ ನಡೆದಿದೆ. ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆ ವಿರುದ್ಧ ಡಿಕೆಶಿ ಬಣದ ಶಾಸಕರು ಬಹಿರಂಗವಾಗಿ ವಾಗ್ದಾಳಿ ನಡೆಸಿದರು. ಏನೇ ಆಗಲಿ ಅಧಿವೇಶನ ಮುಗಿದ ತಕ್ಷಣವೇ ಅಧಿಕಾರ ಹಸ್ತಾಂತರಕ್ಕೆ ಪಟ್ಟು ಹಿಡಿಯುವಂತೆ ಬೆಂಬಲಿಗೆ ಶಾಸಕರು ಮತ್ತು ಸಚಿವರು ಡಿಕೆಶಿ ಅವರಿಗೆ ಆಗ್ರಹಿಸಿದ್ದಾರೆ ಎನ್ನಲಾಗಿದೆ.

ಸುವರ್ಣ ಸೌಧದಲ್ಲಿ ಚಳಿಗಾಲ ಅಧಿವೇಶನದ ನಡುವೆಯೇ ರಾಜ್ಯ ಕಾಂಗ್ರೆಸ್ ನಲ್ಲಿ ನಾಯಕತ್ವ ಬದಲಾವಣೆಗೆ ಒತ್ತಡ ಹೆಚ್ಚಾಗುತ್ತಲೇ ಇದೆ. ಬೆಂಗಳೂರಿನಲ್ಲಿ ನಡೆದಿದ್ದ ಬ್ರೇಕ್ ಫಾಸ್ಟ್ ಮೀಟಿಂಗ್ ನಂತರ ಎಲ್ಲವೂ ಸದ್ಯಕ್ಕೆ ತಣ್ಣಗಾಯಿತು ಅಂದುಕೊಳ್ಳುತ್ತಿರುವಾಗಲೇ ಇನ್ನೊಂದು ತಿರುವು ಪಡೆದುಕೊಂಡಿದೆ. ರಾಜ್ಯ ರಾಜಕಾರ ಪುಟ 2ಕ್ಕೆ

### ಡಿಸಿಎಂ ಸಭೆಯಲ್ಲಿದ್ದವರು

ಎಂ.ಸಿ ಸುಧಾಕರ್, ಮಂಕಾಳ ವೈದ್ಯ, ಕೆ.ಎಚ್. ಮುನಿಯಪ್ಪ, ಶರಣಪ್ರಕಾಶ್ ಪಾಟೀಲ್, ಡಿ.ಕೆ.ಸುರೇಶ್, ಎಂಎಲ್‌ಸಿ ಚೆನ್ನರಾಜ್ ಹಟ್ಟಿಹೊಳಿ, ಶಾಸಕ ಬಾಬಾಸಾಹೇಬ್ ಪಾಟೀಲ್, ಶಿವರಾಂ ಹೆಬ್ಬಾರ್, ಸಿ.ಪಿ ಯೋಗೇಶ್ವರ್, ಶ್ರೀನಿವಾಸ್ ಮಾನೆ, ಎನ್‌ಎ ಹ್ಯಾರೀಸ್, ಇಕ್ಬಾಲ್ ಹುಸೇನ್, ಗಣೇಶ್ ಹುಕ್ಕೇರಿ, ಎಸ್.ಟಿ ಸೋಮಶೇಖರ್, ಎಂಎಲ್‌ಸಿ ರವಿ ಸೇರಿದಂತೆ 40ಕ್ಕೂ ಹೆಚ್ಚು ಶಾಸಕರು, ಸಚಿವರು ಭಾಗಿಯಾಗಿದ್ದಾರೆ ಎಂದು ತಿಳಿದುಬಂದಿದೆ.

### ಹೈಕಮಾಂಡ್ ಭೇಟಿಗೆ ಡಿಕೆಶಿ ದೆಹಲಿಗೆ

ಮುಂದಿನ ವಾರ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಹೈಕಮಾಂಡ್ ಕರೆದಿದೆ. ಸಿಎಂ ಬದಲಾವಣೆ ವಿಚಾರ ಡಿನ್ನರ್ ಮೀಟಿಂಗ್‌ನಲ್ಲಿ ಚರ್ಚೆಯಾಗಿದೆ. ಅಗತ್ಯಬಿದ್ದರೆ ಹೈಕಮಾಂಡ್ ಭೇಟಿಗೆ ಹೋಗುತ್ತೇವೆ ಎಂದು ಕೆಲವು ಶಾಸಕರು ಡಿ.ಕೆ ಶಿವಕುಮಾರ್‌ಗೆ ಆಶ್ವಾಸನೆ ನೀಡಿದ್ದಾರೆ. ನಿಮಗೆ ಮುಖ್ಯಮಂತ್ರಿ ಸ್ಥಾನವನ್ನು ಪುಟ 2ಕ್ಕೆ

## ಯತೀಂದ್ರನಿಗೆ ಕಾಮನ್‌ಸೆನ್ಸ್ ಇಲ್ಲ!: ಶಾಸಕ ಬಾಲಕೃಷ್ಣ ನೇರ ವಾಗ್ದಾಳಿ




**ಬೆಳಗಾವಿ:** ಯತೀಂದ್ರ ಸಿದ್ದರಾಮಯ್ಯಗೆ ಮಿನಿಮಮ್ ಕಾಮನ್ ಸೆನ್ಸ್ ಇಲ್ಲ ಎಂದು ಮಾಗಡಿ ಶಾಸಕ ಬಾಲಕೃಷ್ಣ ಶುಕ್ರವಾರ ನೇರವಾಗಿ ವಾಗ್ದಾಳಿ ನಡೆಸಿದ್ದಾರೆ. ಯತೀಂದ್ರ ಹೇಳಿಕೆ ವಿರುದ್ಧ ಬಹಿರಂಗವಾಗಿ ತಿರುಗಿಬಿದ್ದಿದ್ದಾರೆ.

ನಾಯಕತ್ವದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೈಕಮಾಂಡ್ ಸ್ಪಷ್ಟಪಡಿಸಿದೆ ಎಂಬ ಯತೀಂದ್ರ ಹೇಳಿಕೆಗೆ ಸುವರ್ಣ ಸೌಧದಲ್ಲಿ ಪ್ರತಿಕ್ರಿಯಿಸಿದರು. ದೊಡ್ಡವರಿಗೆ ಒಂದು ನ್ಯಾಯ ಚಿಕ್ಕವರಿಗೆ ಒಂದು ನ್ಯಾಯ ಆಗುತ್ತದೆ ಎಂದು ಹೇಳುವ ಮೂಲಕ ಯತೀಂದ್ರಗೆ ನೋಟಿಸ್ ನೀಡದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಈ ರೀತಿ ಆಗುತ್ತಿರುವುದರಿಂದಲೇ ನಮ್ಮ ಇಕ್ಬಾಲ್ ಹುಸೇನ್ ನಾವು ಮಾತನಾಡಿದರೆ ಬಲಾತ್ಕಾರ. ಅವರಿಗೆ ಮಾತನಾಡಿದ್ರೆ ಚಮತ್ಕಾರ ಎಂದು ಅದ್ಭುತವಾಗಿ ಹೇಳಿದ್ದಾರೆ. ಈ ಹಿಂದೆ ಕುರ್ಚಿ ಕಿತ್ತಾಟದ ಸಮಯದಲ್ಲಿ ಡಿಕೆಶಿ ಪರ ಬಹಿರಂಗವಾಗಿ ಹೇಳಿಕೆ ನೀಡಿದ್ದಕ್ಕೆ ಅವರಿಗೆ ಕೆಪಿಸಿಸಿ ಶಿಸ್ತು ಸಮಿತಿ ಶಾಸಕರಿಗೆ ನೋಟಿಸ್ ಜಾರಿ ಮಾಡಿತ್ತು. ಆದರೆ ಈಗ ಸಿಎಂ ಪುತ್ರ ಯತೀಂದ್ರ ಅವರೇ ನೇರವಾಗಿ ತಂದೆಯ ಪರ ಬ್ಯಾಟ್ ಬೀಸಿದ್ದಕ್ಕೆ ಇನ್ನೂ ಯಾಕೆ ನೋಟಿಸ್ ನೀಡಿಲ್ಲ ಎಂದು ಡಿಕೆ ಬೆಂಬಲಿಗ ಶಾಸಕರು ಪ್ರಶ್ನೆ ಮಾಡುತ್ತಿದ್ದಾರೆ.

## ಅಧಿವೇಶನ ಮುಗಿದ ತಕ್ಷಣವೇ ಡಿಕೆಶಿ ಸಿಎಂ: ಇಕ್ಬಾಲ್ ಬಾಂಬ್



**ಬೆಳಗಾವಿ:** ಬೆಳಗಾವಿ ಚಳಿಗಾಲದ ಅಧಿವೇಶನ ಮುಗಿದ ತಕ್ಷಣವೇ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಬಾಂಬ್ ಸಿಡಿಸಿದ್ದಾರೆ.

ಬೆಳಗಾವಿಯಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಇಕ್ಬಾಲ್ ಹುಸೇನ್ ಅವರು, ಅಧಿವೇಶನ ಮುಗಿದ ತಕ್ಷಣ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಲಭಿಸಲಿದೆ. ಅಧಿವೇಶನ ಮುಗಿದ ಬಳಿಕ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಸಿಗುತ್ತದೆ ಎಂಬ ವಿಶ್ವಾಸ ಇದೆ. ಎಲ್ಲದಕ್ಕೂ ಹಣೆ ಬರಹವೇ ಮುಖ್ಯ. ಅವಕಾಶ ಸಿಗದಿದ್ದರೆ ಹಣೆಯ ಬರಹಕ್ಕೆ ಹೊಣೆ ಯಾರು? ಭಗವಂತ ಏನು ಬರೆದಿದ್ದಾರೋ ಅದು ಆಗುತ್ತದೆ ಎಂದರು.

ಡಿಕೆ ಶಿವಕುಮಾರ್ ಅವರ ಹೋರಾಟ, ಶ್ರಮಕ್ಕೆ ಫಲ ಸಿಕ್ಕೇಸಿಗುತ್ತದೆ. ನಾವು ನಮ್ಮ ಅಭಿಪ್ರಾಯಗಳನ್ನು ಈಗಾಗಲೇ ಹೈಕಮಾಂಡ್ ನಾಯಕರ ಮುಂದೆ ಹೇಳಿದ್ದೇವೆ. ವರಿಷ್ಠರು ಕರೆದರೆ ನಾವು ಮತ್ತೊಮ್ಮೆ ದೆಹಲಿಗೆ ಹೋಗುತ್ತೇವೆ ಎಂದು ಅವರು ಹೇಳಿದರು.

ಬೆಳಗಾವಿಯಲ್ಲಿ ನಡೆದ ಡಿ.ಕೆ.ಶಿವಕುಮಾರ್ ಬಣದ ಡಿನ್ನರ್ ಮೀಟಿಂಗ್ ಬಗ್ಗೆ ಪ್ರತಿಕ್ರಿಯಿಸಿದ ಇಕ್ಬಾಲ್ ಹುಸೇನ್, ಪ್ರೀತಿ ವಿಶ್ವಾಸಕ್ಕಾಗಿ ಊಟಕ್ಕೆ ಸೇರುತ್ತೇವೆ. ಅದನ್ನು ಬಣ ರಾಜಕೀಯ, ಶಕ್ತಿ ಪ್ರದರ್ಶನ ಎನ್ನುವುದು ಸರಿಯಲ್ಲ ಎಂದರು.

ಸೌಹಾರ್ದಯುತ ಭೋಜನಕೂಟ. ಊಟಕ್ಕೆ ಯಾರು ಬೇಕಾದರೂ ಬರಬಹುದು. ಇದರಲ್ಲಿ ರಾಜಕೀಯವಿಲ್ಲ. ಕಾಂಗ್ರೆಸ್ ಶಿಸ್ತಿನ ಪಕ್ಷ. ಯಾವುದೇ ನಂಬರ್ ಗೇಮ್‌ಗಳಿಗೆ ಮಹತ್ವ ನೀಡುವುದಿಲ್ಲ. ಹೈಕಮಾಂಡ್ ತೆಗೆದುಕೊಳ್ಳುವ ಅಂತಿಮ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದರು.

## ಕಂದಕಕ್ಕೆ ಉರುಳಿಬಿದ್ದ ಬಸ್: 9 ಮಂದಿ ಸಾವು

**ಹೈದರಾಬಾದ್:** ಭಾರೀ ಮಂಜಿನಿಂದ ದಾರಿ ಕಾಣದೇ ಬಸ್ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಒಂಬತ್ತು ಮಂದಿ ಸಾವನ್ನಪ್ಪಿ 10ಕ್ಕೂ ಹೆಚ್ಚು ಮಂದಿ ಗಾಯಗೊಂಡ ಘಟನೆ ಆಂಧ್ರಪ್ರದೇಶದ ಅಲ್ಲೂರಿ ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ ಭಾರೀ ಮಂಜಿನಿಂದಾಗಿ ಬಸ್ ಚಾಲಕ ನಿಗೆ ಅಪಘಾತ ಸ್ಥಳದಲ್ಲಿ ತಿರುವು ಕಾಣಿಸದ ಕಾರಣ ಈ ದುರಂತ ಸಂಭವಿಸಿರುವ ಸಾಧ್ಯತೆ ಯಿದೆ. ಪುಟ 2ಕ್ಕೆ




## ಎಚ್.ಎಂ.ರೇವಣ್ಣ ಪುತ್ರನ ಕಾರು ಡಿಕ್ಕಿ: ಯುವಕ ಸಾವು



**ರಾಮನಗರ:** ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಪುತ್ರ ಆರ್. ಶಶಾಂಕ್ ಚಲಾಯಿಸುತ್ತಿದ್ದ ಕಾರು ಗುರುವಾರ ತಡರಾತ್ರಿ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಭೀಕರ ಅಪಘಾತದಲ್ಲಿ ಯುವಕ ಸಾವನ್ನಪ್ಪಿದ್ದಾರೆ.

ಮಾಗಡಿ ತಾಲೂಕು ಗುಡೇಮಾರನಹಳ್ಳಿ ಗ್ರಾಮದ ಬಳಿ ಅಪಘಾತ ಸಂಭವಿಸಿದೆ. ಮಾಗಡಿ ತಾಲೂಕಿನ ಬೆಳಗುಂಬದ ನಿವಾಸಿ ರಾಜೇಶ್ (27) ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಕಾರು ಡಿಕ್ಕಿಯಾದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಕಾರು ಆರ್.ಶಶಾಂಕ್ ಹೆಸರಿನಲ್ಲಿರುವುದು ದೃಢಪಟ್ಟಿದೆ. ಪುಟ 2ಕ್ಕೆ

## ನಮ್ಮ ಜಾಗದಲ್ಲಿ ಯೂನಿಟಿ ಮಾಲ್ ನಿರ್ಮಾಣ ಸರಿಯಲ್ಲ: ಪ್ರಮೋದಾದೇವಿ



**ಮೈಸೂರು:** ನಗರದಲ್ಲಿ ಯೂನಿಟಿ ಮಾಲ್ ನಿರ್ಮಾಣಕ್ಕೆ ನನ್ನ ವಿರೋಧ ಇಲ್ಲ. ಆದರೆ, ನಮ್ಮ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡುವುದು ಸರಿಯಲ್ಲ. ಹೀಗಾಗಿ ನ್ಯಾಯಾಲಯದಲ್ಲಿ ಇದೇ ವಿಚಾರದಲ್ಲಿ ಪ್ರಕರಣ ದಾಖಲಿಸಿದ್ದೇನೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ಯೂನಿಟಿ ಮಾಲ್ ನಿರ್ಮಾಣಕ್ಕೆ ತಡೆಯಾಜ್ಞೆ ತಂದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬಹಿರಂಗ ಮತ್ತು ಅಂತರಂಗ ಜಗಳ ವಿಚಾರವೂ ಇಲ್ಲಿ ಇಲ್ಲ. ಕರ್ನಾಟಕ ಸರ್ಕಾರವು ಮಾಲ್ ಸ್ಥಾಪಿಸಲಿ ಅದಕ್ಕೆ ನನ್ನ ವಿರೋಧ ಇಲ್ಲ. ಆದರೆ ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಹಂಚಿಕೆ ಮಾಡಲಿ. ಅದರ ಬದಲು ಈ ನಿರ್ದಿಷ್ಟ ಖಾಸಗಿ ಆಸ್ತಿಯನ್ನು ಹಂಚಿಕೆ ಮಾಡುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಮೈಸೂರು ಕಸಬಾ ಹೋಬಳಿಯ ಸರ್ವೆ ನಂ.1 ರಲ್ಲಿರುವ ದೊಡ್ಡಕೆರೆ ಟ್ಯಾಂಕ್ ಬೆಡ್ ಭೂಮಿಯಲ್ಲಿ ರಾಜ್ಯದ ಕರಕುಶಲ ವಸ್ತುಗಳು ಮತ್ತು ಜಿಐ ಟ್ಯಾಗ್ ಮಾಡಲಾದ ಉತ್ಪನ್ನಗಳನ್ನು ಪ್ರದರ್ಶಿಸುವುದಕ್ಕೆ ನನ್ನ ಪುಟ 2ಕ್ಕೆ

## ಜನಗಣತಿಗೆ 11,718 ಕೋಟಿ

**ನವದೆಹಲಿ:** ದೇಶದಾದ್ಯಂತ ನಡೆಯಲಿರುವ 2027ರ ಜನಗಣತಿಗೆ 11,718 ಕೋಟಿ ಅನುದಾನ ನೀಡಲು ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ವೈಷ್ಣವ್, ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯೊಂದಿಗೆ ಎರಡು ಹಂತಗಳಲ್ಲಿ ಜನಗಣತಿ ನಡೆಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

2026ರ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ನಡೆಯುವ ಮೊದಲ ಹಂತದ ವೇಳೆ ಮನೆಗಳ ಗಣತಿ ಮಾಡಲಾಗುವುದು. 2027ರ ಫೆಬ್ರುವರಿಯಲ್ಲಿ ಜನರ ಗಣತಿ ಪ್ರಕ್ರಿಯೆ ನಡೆಯಲಿದೆ. 2027ರ ಜನಗಣತಿ ಮೊದಲ ಡಿಜಿಟಲ್ ಗಣತಿಯಾಗಲಿದೆ. ದತ್ತಾಂಶ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಜನಗಣತಿ ಪ್ರಕ್ರಿಯೆಯ ಡಿಜಿಟಲ್ ವಿನ್ಯಾಸವನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಜನಗಣತಿ ಕಾರ್ಯದ ಜವಾಬ್ದಾರಿ ವಹಿಸಿಕೊಳ್ಳಲು ಅಗತ್ಯವಾಗಿರುವ ಅಧಿಕಾರಿಗಳ ನೇಮಕಾತಿಯನ್ನು ಜನವರಿ ಪುಟ 2ಕ್ಕೆ

## ಪ್ರೀತಿಯಿಂದ ಊಟಕ್ಕೆ ಕರೆದರೆ ಬೇಡ ಎನ್ನಲೇ?

**ಒಂದೊಂದು ದಿನ ಒಂದೊಂದು ಕಡೆ ಊಟಕ್ಕೆ ಹೋಗುತ್ತೇವೆ: ಡಿಕೆಶಿ ತಿರುಗೇಟು**

**ಬೆಳಗಾವಿ:** ನಮ್ಮ ಶಾಸಕರು ಪ್ರೀತಿಯಿಂದ ಊಟಕ್ಕೆ ಕರೆಯುತ್ತಾರೆ. ಬೇಡ ಎನ್ನಲು ಸಾಧ್ಯವೇ? ಅದಕ್ಕೆ ಒಂದೊಂದು ದಿನ ಒಂದೊಂದು ಕಡೆ ಊಟಕ್ಕೆ ಹೋಗುತ್ತೇವೆ. ಇದು ಯಾವ ಔತಣಕೂಟವೂ ಅಲ್ಲ, ಏನೂ ಅಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ಬೆಳಗಾವಿಯ ಸರ್ಕಿಟ್ ಹೌಸ್ ಬಳಿ ಶುಕ್ರವಾರ ಮಾಧ್ಯಮಗಳ ಜೊತೆ ಮಾತನಾಡಿದ ಶಿವಕುಮಾರ್ ಅವರು, ದಿನ ಒಬ್ಬೊಬ್ಬ ಸ್ಥಳೀಯರು ಪ್ರೀತಿಯಿಂದ ಊಟ ತಂದು ಕೊಡುತ್ತಿದ್ದಾರೆ. ಊಟವನ್ನು ಬೇಡ ಎನ್ನಲು ಆಗುತ್ತದೆಯೇ? ನನ್ನ ಕ್ಷೇತ್ರದ ಹುಡುಗನೊಬ್ಬ ಇಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಮನೆಯಿಂದ ಇವತ್ತು ಮುದ್ದೆ, ಉಪ್ಸಾರು ಊಟ ಮಾಡಿ ಕಳಿಸುತ್ತೇವೆ ಎನ್ನುತ್ತಿದ್ದಾನೆ. ಹೀಗೇ ಅವರು ಪ್ರೀತಿಯಿಂದ ಹೇಳಿದಾಗ, ಕರೆದಾಗ ಪುಟ 2ಕ್ಕೆ

### ಕುರ್ಚಿಗಾಗಿ 'ಡಿನ್ನರ್ ಪಾರ್ಟಿ'

**ಬೆಳಗಾವಿ:** ಕಾಂಗ್ರೆಸ್ ನಾಯಕರು ಕುರ್ಚಿ ಉಳಿಸಿಕೊಳ್ಳಲು ಅಧಿವೇಶನದ ಸಂದರ್ಭದಲ್ಲಿಯೂ 'ಡಿನ್ನರ್ ಪಾರ್ಟಿ' ನಡೆಸುತ್ತಿರುವುದು ನಾಡಿನ ಜನತೆ ಮತ್ತು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ. ನಿವಿಲ್ಲಿ ಅಧಿವೇಶನಕ್ಕೆ ಬಂದಿದ್ದೀರೋ ಡಿನ್ನರ್ ಪಾರ್ಟಿಗೆ ಬಂದಿದ್ದೀರೋ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ನಿಮ್ಮ ನಾಯಕತ್ವದ ಸಮಸ್ಯೆ ಬಗೆಹರಿಸಿಕೊಂಡ ನಂತರ ಬೆಳಗಾವಿ ಅಧಿವೇಶನಕ್ಕೆ ಬರಬೇಕು ಎಂದು ನಾವು ಮೊದಲೇ ಹೇಳಿದ್ದೆವು.

ನೀವೇನು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಅಲ್ಲ. ಇಡೀ ರಾಜ್ಯದ ಮುಖ್ಯಮಂತ್ರಿ. ಇಷ್ಟೊಂದು ಗೊಂದಲ ಇಟ್ಟುಕೊಂಡು ಕಾಟಾಚಾರಕ್ಕೆ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಸುವುದು ಬೇಡ ಎಂದು ವಾಗ್ದಾಳಿ ನಡೆಸಿದರು.

## ಬಿಜೆಪಿಗೆ ಡಿಕೆಶಿ ಸೆಳೆಯುವ ಯತ್ನ

**ಅಮಿತ್ ಶಾ ನಿರಾಕರಣೆ । ಶಾಸಕ ಯತ್ನಾಳ್ ಸ್ಫೋಟಕ ಹೇಳಿಕೆ**




**ಬೆಳಗಾವಿ:** ಡಿ.ಕೆ.ಶಿವಕುಮಾರ್ ಅವರನ್ನ ಬಿಜೆಪಿಗೆ ಸೆಳೆಯುವ ಪ್ರಯತ್ನ ನಡೆದಿತ್ತು. ಆದರೆ ಇದಕ್ಕೆ ಅಮಿತ್ ಶಾ ಅವರು ಒಪ್ಪಿಗೆ ನೀಡಲಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಬೆಳಗಾವಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನನ್ನನ್ನ ಪಕ್ಷದಿಂದ ಉಚ್ಚಾಟನೆ ಮಾಡಿದ ಸಂದರ್ಭದಲ್ಲಿ ದೆಹಲಿಯಲ್ಲಿ ಡಿ.ಕೆ.ಶಿವಕುಮಾರ್ ಅವರನ್ನ ಆಪರೇಷನ್ ಮಾಡುವ ಪ್ರಯತ್ನ ನಡೆದಿತ್ತು. ನಾನು ಪಕ್ಷದಲ್ಲಿದ್ದರೆ ಇದು ಆಗಲ್ಲ ಅಂತ ಉಚ್ಚಾಟನೆ ಬಳಿಕ ಪ್ರಯತ್ನ ನಡೆದಿತ್ತು ಎಂದು ಹೇಳಿದರು.

ವಿಜಯೇಂದ್ರ ಅವರು ತಾವು ಡಿಸಿಎಂ ಆಗಲು ದೆಹಲಿಯಲ್ಲಿ ಡಿ.ಕೆ.ಶಿವಕುಮಾರ್ ಅವರನ್ನ ಪುಟ 2ಕ್ಕೆ

### ಹುದ್ದೆ ಕೊಟ್ಟರೆ ವಾಪಸ್!

ಆರ್.ಅಶೋಕ್ ಕೊಠಡಿಯಲ್ಲಿ ಯತ್ನಾಳ್ ಜೊತೆ ಸುನೀಲ್ ಕುಮಾರ್ ಮತ್ತಿತರರು ನಡೆಸಿದ ಕ್ಲೋಸ್ ಡೋರ್ ಮೀಟಿಂಗ್ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಮೊನ್ನೆ ಬಿಜೆಪಿಯ ಕೆಲವು ಶಾಸಕರು ನನ್ನ ಜೊತೆ ಮಾತಾಡಿದರು. ಬಿಜೆಪಿಗೆ ನೀವು ಬನ್ನಿ ಎಂದು ಕರೆದರು. ನಿಮ್ಮಂಥ ನಾಯಕರ ಅಗತ್ಯ ಇದೆ ಅಂದರು. ನಾನು ಹಾಗೇ ಬರಲ್ಲ ದೊಡ್ಡ ಸ್ಥಾನ ಕೊಡಿ ಅಂದಿದ್ದೇನೆ. ದೊಡ್ಡ ಸ್ಥಾನ ಅಂದರೆ ರಾಜ್ಯಾಧ್ಯಕ್ಷ ಹುದ್ದೆ ಅಥವಾ ವಿಪಕ್ಷ ನಾಯಕನ ಹುದ್ದೆ ಕೇಳಿದ್ದೇನೆ. ನಾನು ಶಾಸಕನಾಗಿಯೇ ಬಿಜೆಪಿಗೆ ವಾಪಾಸ್ ಹೋಗಲ್ಲ. ಸ್ಥಾನ ಕೊಟ್ಟರೆ ಹೋಗ್ತೇನೆ ಅಂತ ಹೇಳಿರುವುದಾಗಿ ತಿಳಿಸಿದರು.

## ರೈತರ ಮದುವೆಯಾದರೆ 5 ಲಕ್ಷ ಕೊಡಿ!



**ಮಂಡ್ಯ:** ಯುವ ರೈತರನ್ನು ಮದುವೆಯಾಗುವ ಯುವತಿಯರಿಗೆ 5 ಲಕ್ಷ ರೂ. ಪ್ರೋತ್ಸಾಹ ನೀಡಬೇಕು ಎಂದು ಬಿಜೆಪಿ ಕಾರ್ಯಕರ್ತರು ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ಮೂಲಕ ಸರ್ಕಾರಕ್ಕೆ ಶುಕ್ರವಾರ ಮನವಿ ಸಲ್ಲಿಸಿದರು.

ಸರ್ಕಾರ ಜಾರಿಗೆ ತಂದಿರುವ ಶಾದಿ ಭಾಗ್ಯದ ಮಾದರಿಯಲ್ಲಿ ರೈತರನ್ನು ಮದುವೆಯಾಗುವ ಯುವತಿಯರಿಗೆ ಸರ್ಕಾರದಿಂದ ರೈತರ ಮದುವೆಗೆ ಪ್ರೋತ್ಸಾಹಿಸುವ ಕೆಲಸ ಆಗಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಸರ್ಕಾರಿ ಕೆಲಸಕ್ಕೆ ಪುಟ 2ಕ್ಕೆ

## ಮೇಕೆದಾಟು ಅನುಷ್ಠಾನಕ್ಕೆ ತಂಡ ರಚನೆ

**ರಾಮನಗರದಲ್ಲಿ ಕೇಂದ್ರ ಕಚೇರಿ । ಕೆಇಆರ್ ಎಸ್ ನಿರ್ದೇಶಕರಿಗೆ ಜವಾಬ್ದಾರಿ**



**ಬೆಂಗಳೂರು:** ಸುಪ್ರೀಂ ಕೋರ್ಟ್ ಕರ್ನಾಟಕದ ಪರ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಮೇಕೆದಾಟು ಸಮತೋಲಿತ ಜಲಾನಯನ ಯೋಜನೆ ತ್ವರಿತ ಅನುಷ್ಠಾನಕ್ಕೆ ಕೆಇಆರ್‌ಎಸ್ (ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ) ನಿರ್ದೇಶಕರ ನೇತೃತ್ವದಲ್ಲಿ ತಂಡ ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರವನ್ನು ಕೇಂದ್ರ ಸ್ಥಾನವಾಗಿಟ್ಟುಕೊಂಡು ತಂಡ ಕೆಲಸ ನಿರ್ವಹಿಸಲಿದೆ. ರಾಮನಗರದಲ್ಲೇ ಮೇಕೆದಾಟು ಯೋಜನೆ ಕಚೇರಿ ಸ್ಥಾಪಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ತಂಡವು ಉಪ ಮುಖ್ಯ ಇಂಜಿನಿಯರ್ ಹಾಗೂ ಸಿಬ್ಬಂದಿ ಒಳಗೊಂಡಿದೆ.

ಆದರೆ ಹೊಸದಾಗಿ ಕಚೇರಿ ಸ್ಥಾಪನೆ ಹಾಗೂ ಹುದ್ದೆಗಳ ನೇಮಕಕ್ಕೆ ಆರ್ಥಿಕ ಇಲಾಖೆ ಅನುಮತಿ ಅಗತ್ಯವಾಗಿದ್ದು, ಇದಕ್ಕೆ ಬಹಳಷ್ಟು ಸಮಯಾವಕಾಶ ಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ಯೋಜನೆ ಜಾರಿಯ ಜವಾಬ್ದಾರಿಯನ್ನು ಕೆಇಆರ್ ಎಸ್ ನಿರ್ದೇಶಕರಿಗೆ ವಹಿಸಿದೆ. ಕೆಇಆರ್ ಎಸ್ ಸಂಸ್ಥೆ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ನೌಕರರನ್ನು ಒಳಗೊಂಡು ತಂಡವನ್ನು ರಚಿಸಿ ಮೇಕೆದಾಟು ಯೋಜನೆಯ ಜಾರಿ ಜವಾಬ್ದಾರಿಯನ್ನು ನೀಡಲಾಗಿದೆ.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಕಡತ, ಪತ್ರ ವ್ಯವಹಾರ, ಹಾಗೂ ಪುಟ 2ಕ್ಕೆ

# ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಿಗೆ

**▶▶ 283 ಸೈಟ್ ಅಕ್ರಮ ಹಂಚಿಕೆಗೆ 22.47 ಕೋಟಿ ಲಂಚ ಪಡೆದ ದಿನೇಶ್ ಕುಮಾರ್**



**ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾನೂನು ಬಾಹಿರ ಚಟುವಟಿಕೆಗಳು ಬಗೆದಷ್ಟೂ ಬೆಳಕಿಗೆ ಬರುತ್ತಿವೆ. ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅಧಿಕಾರಾವಧಿಯಲ್ಲಿ 140 ಕೋಟಿ ರೂ. ಮೌಲ್ಯದ 283 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡುವ ಮೂಲಕ 22.47 ಕೋಟಿ ರೂ. ಲಂಚ ಪಡೆದಿದ್ದಾರೆ ಎಂದು ಇಡಿ ತನಿಖೆಯಲ್ಲಿ ಬಹಿರಂಗವಾಗಿದೆ.

ಇಡಿಯಿಂದ 2002ರ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ನಡೆಸಲಾದ ತನಿಖೆಯಲ್ಲಿ ಸುಮಾರು 700 ಕೋಟಿ ರೂ. ಮೌಲ್ಯದ 1,095 ಅಕ್ರಮ ನಿವೇಶನಗಳನ್ನು ಮಾರಾಟ ಮಾಡಿರುವುದು ಬಹಿರಂಗವಾಗಿದೆ. 1,095 ನಿವೇಶನಗಳ ಪಟ್ಟಿಯನ್ನು ಮುಡಾ ಆಯುಕ್ತರು ಪರಿಶೀಲನೆ ಸಮಯದಲ್ಲಿ ಇಡಿಗೆ ಸಲ್ಲಿಸಿದ್ದಾರೆ.




ಮಾಜಿ ಆಯುಕ್ತ ದಿನೇಶ್ ಕುಮಾರ್ ಅವರನ್ನು 'ಹಗರಣಗಳ ಸೂತ್ರಧಾರಿ'ಗಳಲ್ಲಿ ಒಬ್ಬರು ಎಂದು ಇಡಿ ಹೇಳಿದೆ. ಅಕ್ರಮ ಹಂಚಿಕೆ ಮಾಡಿದ್ದಕ್ಕಾಗಿ ಅವರು ನಗದು, ಚರ ಮತ್ತು ಸ್ಥಿರ ಆಸ್ತಿಗಳ ರೂಪದಲ್ಲಿ ಪ್ರತಿಫಲವನ್ನು ಪಡೆದಿದ್ದಾರೆ. ಅವ್ಯವಹಾರದ ಆದಾಯ ಸಂಪಾದನೆ ಮರೆಮಾಚುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಉದ್ದೇಶಪೂರ್ವಕವಾಗಿ ಸಹಾಯ ಮಾಡಲು ಮಾಜಿ ಆಯುಕ್ತರು ಪ್ರಯತ್ನಿಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

ದಿನೇಶ್ ಕುಮಾರ್ ಪಡೆದ 22.47 ಕೋಟಿ ರೂ. ಲಂಚದಲ್ಲಿ 34.65 ಲಕ್ಷ ರೂ. ನಗದು ಪಡೆದಿದ್ದಾರೆ. ಹೆಚ್ಚಿನ ಭದ್ರತಾ ಬಾಂಡ್ ಪೇಪರ್ ದುರುಪಯೋಗಪಡಿಸಿಕೊಂಡು 8.28 ಕೋಟಿ ರೂ. ಗಳಿಸಿದ್ದಾರೆ, ಚಾಮುಂಡೇಶ್ವರಿ ನಗರ ಸರ್ವೋದಯ ಸಂಘದ ಸದಸ್ಯರ ಮೂಲಕ 5.86 ಕೋಟಿ ರೂ., ಅಬ್ದುಲ್ ವಹೀದ್ ಅವರಿಂದ 3.62 ಕೋಟಿ ರೂ., ಕ್ಯಾಥೆಡ್ರಲ್ ಪ್ಯಾರಿಷ್ ಸೊಸೈಟಿಯಿಂದ 1.70 ಕೋಟಿ ರೂ., ನಿಂಗಮ್ಮ ಅವರಿಂದ 1.13 ಕೋಟಿ ರೂ., ಜೆಎಸ್‌ಎಸ್ ಮಹಾವಿದ್ಯಾಪೀಠ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ 1.02 ಕೋಟಿ ರೂ. ಮತ್ತು ನಿಂಗಮ್ಮ ಅವರಿಂದ 49 ಲಕ್ಷ ರೂ.ಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಪರಿಹಾರ ನಿವೇಶನಗಳಿಗೆ ಲಂಚ ಪಡೆದಿದ್ದಾರೆ ಎಂದು ಇಡಿ ಆರೋಪ ಮಾಡಿದೆ.

ಈ ಅಕ್ರಮದಿಂದ ಬಂದ ಆದಾಯವನ್ನು ಕಾಪಾಡಿಕೊಳ್ಳಲು ದಿನೇಶ್ ಕುಮಾರ್ ಸಂಕೀರ್ಣ ವಿಧಾನವನ್ನು ಪುಟ 2ಕ್ಕೆ

ಮೊದಲ ಪುಟದಿಂದ

## ಡಿಕೆಶಿ ಬಣದ ಶಕ್ತಿ ಪ್ರದರ್ಶನ

ಬೆಳಗಾವಿಗೆ ಶಿಫ್ಟ್ ಆಗಿದೆ. ಸಿಎಂ-ಡಿಸಿಎಂ ಬಣಗಳಿಂದ ಡಿನ್ನರ್ ಮೀಟಿಂಗ್ ಏರ್ಪಟ್ಟಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದ ಬೆನ್ನಲ್ಲೇ ಡಿಸಿಎಂ ಡಿ.ಕೆ ಶಿವಕುಮಾರ್ ಅವರೂ ತಮ್ಮ ಆಪ್ತರ ಜೊತೆ ಕಳೆದ ತಡರಾತ್ರಿ ಡಿನ್ನರ್ ಸಭೆ ನಡೆಸಿದ್ದಾರೆ. ಮಾಜಿ ಶಾಸಕ ಫಿರೋಜ್ ಸೇಠ್ ಅವರ ನಿವಾಸದಲ್ಲಿ ನಡೆದ ಭೋಜನ ಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ವಲಯದ ಕೆಲವು ಸಚಿವರು ಮತ್ತು ಶಾಸಕರು ಭಾಗವಹಿಸಿದ್ದರು. ಡಿ.ಕೆ.ಶಿವಕುಮಾರ್ ಅವರು ತಮ್ಮ ಆಪ್ತ, ಗಣಿ ಉದ್ಯಮಿ ದೊಡ್ಡಣ್ಣವರ್ ಅವರ ಫಾರ್ಮ್ ಹೌಸ್‌ನಲ್ಲಿ ಗುರುವಾರ ರಾತ್ರಿ ಆಪ್ತ ಸಚಿವರು, ಶಾಸಕರ ಜೊತೆ ತಡ ರಾತ್ರಿವರೆಗೂ ಸಭೆ ನಡೆಸಿದ್ದಾರೆ. ಡಿಕೆಶಿ ಸಹೋದರ ಡಿ.ಕೆ.ಸುರೇಶ್ ಅವರು ಈ ಡಿನ್ನರ್ ವ್ಯವಸ್ಥೆ ಮಾಡಿದ್ದರು ಎನ್ನಲಾಗಿದೆ. ಈ ಡಿನ್ನರ್ ಸಭೆ ಯಲ್ಲಿ ಐದಕ್ಕೂ ಹೆಚ್ಚು ಸಚಿವರು, 35ಕ್ಕೂ ಹೆಚ್ಚು ಶಾಸಕರು ಸೇರಿದಂತೆ ಆಪ್ತರು ಭಾಗಿಯಾಗಿದ್ದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

## ಡಿಕೆಶಿ ದೆಹಲಿಗೆ

**ಕೊಡಲೇಬೇಕು. ಈ ಬಗ್ಗೆ ಹೈಕಮಾಂಡ್‌ಗೆ ಮನವಿ ಮಾಡ್ಕೊಳ್ಳುತ್ತೇವೆ ಎಂದು ಶಾಸಕರು ಒಕ್ಕೊರಲಿನಿಂದ ಅಭಿಪ್ರಾಯ ಹೊರಹಾಕಿದ್ದಾರೆ ಎಂದು ತಿಳಿದುಬಂದಿದೆ.**

## ಜನಗಣತಿಗೆ 11,718 ಕೋಟಿ

15ರೊಳಗೆ ಪೂರ್ಣಗೊಳಿಸಬೇಕು ಎಂದು ಭಾರತೀಯ ನೋಂದಣಿಯ ಮಹಾನಿರ್ದೇಶನಾಲಯವು (ಆರ್‌ಜಿಐ) ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮೊನ್ನೆಯಷ್ಟೆ ನಿರ್ದೇಶನ ನೀಡಿತ್ತು.

## ಮದುವೆಯಾದರೆ 5 ಲಕ್ಷ ಕೊಡಿ!

ನೇಮಕಾತಿ ಆಗುವುದು ತೀರಾ ವಿಳಂಬವಾಗಿದೆ. ಇದರಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಸರ್ಕಾರದ ನೀತಿಯಿಂದಾಗಿ ಖಾಸಗಿ ಕಂಪನಿಗಳು ಕರ್ನಾಟಕಕ್ಕೆ ಉದ್ಯಮ ಸ್ಥಾಪನೆಗಾಗಿ ಬರುತ್ತಿಲ್ಲ ಎಂದು ಆರೋಪಿಸಿದರು. ಯುವ ರೈತರಿಗೆ ಹೆಣ್ಣು ಸಿಗುತ್ತಿಲ್ಲ. ಇದರಿಂದ ಯುವ ರೈತರಿಗೆ ಬದುಕಿನ ಗ್ಯಾರಂಟಿ ಇಲ್ಲವಾಗಿದೆ ಎಂದು ವಿಷಾದಿಸಿದರು. ಮುಖಂಡರಾದ ಸಿ.ಟಿ.ಮಂಜುನಾಥ್, ಹೊಸಹಳ್ಳಿ ಶಿವು, ಶಿವಲಿಂಗಯ್ಯ, ಮಾದರಾಜು, ವೈರಮುಡಿ, ಆನಂದ ಕೆಂಪಯ್ಯನದೊಡ್ಡಿ, ನದೀಶ್ ಭಾಗವಹಿಸಿದ್ದರು.

## ಡಿಕೆಶಿ ಸೆಳೆಯುವ ಯತ್ನ

ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಬಿಜೆಪಿಯವರೇ ಈ ಮಾತು ನನಗೆ ಹೇಳಿದ್ದರು. ಅನಂತರ ಜೋಷಿಯವರು ಅಮಿತ್ ಶಾ ಅವರ ಸೂಚನೆ ಮೇರೆಗೆ ನಾವು ಯಾರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳಲ್ಲ ಎಂದು ಹೇಳಿದರು. ಆದರೆ ನಿಜವಾಗಿಯೂ ಡಿಕೆಶಿಯನ್ನ ಬಿಜೆಪಿಗೆ ಕರೆತರುವ ಪ್ರಯತ್ನ ನಡೆದಿತ್ತು ಎಂದು ಹೇಳಿದರು. ಡಿಸೆಂಬರ್ 19ಕ್ಕೆ ಕಾಂಗ್ರೆಸ್‌ನವರು ದೆಹಲಿಗೆ ಹೋಗ್ತಿದ್ದಾರೆ. ಈಗ ಇಲ್ಲಿ ಗುಂಪು ಸಭೆಗಳು, ಡಿನ್ನರ್ ಸಭೆಗಳು ನಡೀತಿವೆ. ಬೆಂಬಲ ಯಾಚನೆ ಮಾಡಲು ಪ್ರತ್ಯೇಕ ಸಭೆಗಳು ನಡೀತಿವೆ. ಇನ್ನರ್ ಮತ್ತು ಡಿನ್ನರ್ ಸಭೆಗಳು ನಡೀತಿವೆ ಎಂದರು.

## ಊಟಕ್ಕೆ ಕರೆದರೆ ಬೇಡ ಎನ್ನಲೇ?

ಬೇಡ ಎನ್ನಲು ಆಗುತ್ತದೆಯೇ? ಎಂದು ಪ್ರಶ್ನಿಸಿದರು.

ನಾಳೆಯ್ದು ನಮ್ಮ ಆಸೀಫ್ ಸೇಠ್, ಫಿರೋಜ್ ಸೇಠ್ ಅವರು ಊಟಕ್ಕೆ ಕರೆದಿದ್ದಾರೆ. ದೊಡ್ಡಣ್ಣನವರು ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷರು. ನನ್ನ ಸ್ನೇಹಿತರೂ ಹೌದು. ಅವರದು ದೊಡ್ಡ ಕುಟುಂಬ. ಕಳೆದ 15 ವರ್ಷಗಳಿಂದ ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ನಮ್ಮ ಕಾಂಗ್ರೆಸ್ ಕುಟುಂಬದವರನ್ನು ಮರೆಯಲು ಆಗುತ್ತದೆಯೇ? ಹೀಗಾಗಿ ನಾನೂ ಸೇರಿದಂತೆ ಒಂದಷ್ಟು ಜನರು ಊಟಕ್ಕೆ ಹೋಗಿದ್ದೆವು, ಅಷ್ಟೇ. ಅದರಲ್ಲಿ ಯಾವ ಔತಣಕೂಟವು ಇಲ್ಲ, ಏನೂ ಇಲ್ಲ ಎಂದು ಹೇಳಿದರು.

ಬೆಂಗಳೂರಿನ ಗೌರವ ಉಳಿಸಲು ನಾವು ಅಗತ್ಯ ಕ್ರಮ ಕೈಗೊಂಡಿದ್ದೇವೆ. ಮುಂದೆ ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಿದ್ದೇವೆ ಎಂದು ತಿಳಿಸಿದರು. ಮುಂಜಾಗ್ರತಾ ಕ್ರಮಗಳ ಜವಾಬ್ದಾರಿಯನ್ನು ಗೃಹ ಸಚಿವ ಪರಮೇಶ್ವರ್ ಅವರಿಗೆ ವಹಿಸಲಾಗಿದೆ ಎಂದು ತಿಳಿಸಿದರು.

## ನಮ್ಮ ಜಾಗದಲ್ಲಿ ಯೂನಿಟಿ ಮಾಲ್ ನಿರ್ಮಾಣ ಸರಿಯಲ್ಲ

ವಿರೋಧವಿಲ್ಲ. ಭಾರತ ಸರ್ಕಾರ ಮತ್ತು ಅಂದಿನ ರಾಜ್ಯ ಸರ್ಕಾರದ ನಡುವೆ ರಾಜ್ಯಗಳ ವಿಲೀನದ ಸಮಯದಲ್ಲಿ, ನಂತರದ ಒಪ್ಪಂದದ ದಿನಾಂಕವಾದ ಜನವರಿ 23, 1950ರಂದು ಇತ್ಯರ್ಥವಾಗಿದೆ. ನನ್ನ ಪೂರ್ವಜರ ಭೂಮಿಯನ್ನು ಉಳಿಸಿಕೊಳ್ಳುವುದು ಮತ್ತು ರಕ್ಷಿಸುವುದು ನನ್ನ ಜವಾಬ್ದಾರಿಯಾಗಿದ್ದು ಆ ಕೆಲಸವನ್ನು ನಾನು ಮಾಡಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ನಾನು ಸಲ್ಲಿಸಿದ ಅರ್ಜಿಯಲ್ಲಿ ನನ್ನ ನಿಲುವನ್ನು ದೃಢೀಕರಿಸಲು ಸಂಬಂಧಿತ ದಾಖಲೆಗಳನ್ನು ಸಲ್ಲಿಸಲಾಗಿದೆ. ಸರ್ಕಾರದ ಪ್ರತಿಕ್ರಿಯೆ ಮುಂದಿನ ವಿಚಾರಣೆಗಾಗಿ ಕರ್ನಾಟಕದ ಹೈಕೋರ್ಟ್ ಮುಂದೆ ಬರಲಿದೆ ಎಂದು ತಿಳಿಸಿದ್ದಾರೆ.

## ಕಂದಕಕ್ಕೆ ಉರುಳಿಬಿದ್ದ ಬಸ್: 9 ಮಂದಿ ಸಾವು

ಅರಣ್ಯದ ತಿರುವಿನಲ್ಲಿ ಸಂಚರಿಸುವಾಗ ನಿಯಂತ್ರಣ ತಪ್ಪಿ ಕಂದಕಕ್ಕೆ ಬಿದ್ದಿದೆ. ಬಸ್ಸಿನಲ್ಲಿ 35 ಪ್ರಯಾಣಿಕರು, ಇಬ್ಬರು ಚಾಲಕರು ಮತ್ತು ಒಬ್ಬ ಕ್ಲೀನರ್ ಇದ್ದರು. ಒಂಬತ್ತು ಜನರು ಸಾವನ್ನಪ್ಪಿದ್ದಾರೆ. ಏಳು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿತ್ತೂರಿನಿಂದ ತೆಲಂಗಾಣದ ಭದ್ರಾಚಲಂನಲ್ಲಿರುವ ಶ್ರೀರಾಮ ದೇವಸ್ಥಾನಕ್ಕೆ ಪ್ರಯಾಣಿಕರು ತೆರಳುತ್ತಿದ್ದರು.


## ಮುಡಾ ಭ್ರಷ್ಟಾಚಾರ

ಬಳಸಿದ್ದಾರೆ ಎಂದು ಅಧಿಕಾರಿ ಕುಮಾರ್ ತಿಳಿಸಿದ್ದಾರೆ. ಕುಮಾರ್ ಮೇ 4, 2022ರಿಂದ ಜುಲೈ 2, 2024ರವರೆಗೆ 26 ತಿಂಗಳು ಮುಡಾ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. ಅವ್ಯವಹಾರದ ಒಟ್ಟಾರೆ ಆದಾಯವನ್ನು ಪತ್ತೆಹಚ್ಚಲು ಕುಮಾರ್ ಮತ್ತು ಭಾಗಿಯಾಗಿರುವ ಇತರ ವ್ಯಕ್ತಿಗಳ ಕೈಯಲ್ಲಿ ಹಣ ವರ್ಗಾವಣೆಯ ಅಪರಾಧದ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಲು ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ಅಕ್ರಮ ನಿವೇಶನ ಹಂಚಿಕೆ ಮತ್ತು ಅವುಗಳ ಮಾರಾಟದ ಮೂಲಕ ಬಂದ ಅನೈತಿಕ ಆದಾಯವನ್ನು ಹಲವಾರು ರಿಯಲ್ ಎಸ್ಟೇಟ್ ಉದ್ಯಮಿಗಳು ಅಥವಾ ದಲ್ಲಾಳಿಗಳು ಪಡೆದಿದ್ದಾರೆ ಎಂದು ಇಡಿ ತನಿಖೆಯಿಂದ ಬಹಿರಂಗವಾಗಿದೆ. ಎಫ್‌ಐಆರ್‌ನಲ್ಲಿ ಐಪಿಸಿ, ಭ್ರಷ್ಟಾಚಾರ ತಡೆ ಕಾಯ್ದೆ, ಬೇನಾಮಿ ವಹಿವಾಟು ಕಾಯ್ದೆ ಮತ್ತು ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ದೂರು ದಾಖಲಿಸಿದ ನಂತರ, ಜಾರಿ ನಿರ್ದೇಶನಾಲಯವು ದಿನೇಶ್ ಕುಮಾರ್ ಅವರನ್ನು ಬಂಧಿಸಿ ದೆ. ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ.

## ಮೇಕೆದಾಟು ಅನುಷ್ಠಾನಕ್ಕೆ ತಂಡ

ಇನ್ನಿತರೆ ದಾಖಲೆಗಳನ್ನು ಕೆಇಆರ್ ಎಸ್ ನಿರ್ದೇಶಕರಿಗೆ ಹಸ್ತಾಂತರಿಸುವಂತೆ ಕೆಎನ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ತಂಡಕ್ಕೆ ಇಬ್ಬರು ಕಾರ್ಯಪಾಲಕ ಇಂಜಿನಿಯರ್, ಮೂವರು ತಾಂತ್ರಿಕ ಸಹಾಯಕರು, ಆರು ಸಹಾ ಯಕ ಇಂಜಿನಿಯರ್, ಓರ್ವ ಸಹಾಯಕ ಆಡಳಿತಾಧಿಕಾರಿ, ಓರ್ವ ಲೆಕ್ಕಾಧೀಕ್ಷಕರು, ಅಧೀಕ್ಷಕರು, ಪ್ರಥಮ ದರ್ಜೆ ಲೆಕ್ಕ ಸಹಾಯಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಓರ್ವ ದ್ವಿತಿಯ ದರ್ಜೆ ಲೆಕ್ಕ ಸಹಾಯಕರು, ನಾಲ್ವರು ದ್ವಿತೀಯ ದರ್ಜೆ ಸಹಾಯಕರು, ಓರ್ವ ಶೀಘ್ರಲಿಪಿ ಗಾರರು, ನಾಲ್ವರು ಬೆರಳಚ್ಚುಗಾರರು, ಓರ್ವ ವಾಹನ ಚಾಲಕರ, ಇಬ್ಬರು ಗ್ರೂಪ್ ಡಿ ಸಿಬ್ಬಂದಿ, 1 ಕಾವಲುಗಾರನನ್ನು ನೇಮಿಸಲಾಗಿದೆ.

# ಡಾ.ಸಹನಾ ಪಿಂಜಾರಗೆ ರಂಗರತ್ನ ಪ್ರಶಸ್ತಿ




ಮೈಸೂರು: ಸಮತೆಂತೋ ರಂಗ ಸಂಭ್ರಮದಿಂದ ಕಲಾಮಂದಿರದ ಕಿರುರಂಗಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗಕಲಾವಿದೆ ಮತ್ತು ನಿರ್ದೇಶಿಕಿ ಡಾ.ಸಹನಾ ಪಿಂಜಾರ ಅವರಿಗೆ ರಂಗರತ್ನ 2025ರ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

ಪ್ರಶಸ್ತಿ ಪ್ರಧಾನ ಮಾಡಿದ ಶಿವಮೊಗ್ಗ ಕುವೆಂಪು ವಿವಿಯ ಕುಲಪತಿ ಡಾ.ಯು.ಎ.ಶರತ್ ಅನಂತಮೂರ್ತಿ ಮಾತನಾಡಿ, ಡಾ.ನ.ರತ್ನ ಅವರು ಅತ್ಯಂತ ಸರಳ ವ್ಯಕ್ತಿಯಾಗಿದ್ದರು. ಸದಾ ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಮನಸ್ಸು ಅವರದ್ದಾಗಿತ್ತು. ಆ ಕಾರಣಕ್ಕಾಗಿ ಅನೇಕರನ್ನು ಗುರುತಿಸಿ ಪ್ರೋತ್ಸಾಹಿಸಿದರು. ಮೈಸೂರಿಗೆ ಮಾತು ಮತ್ತು ಶ್ರವಣ ಸಂಸ್ಥೆ ತರುವಲ್ಲಿಯೂ ಪ್ರಮುಖ ಪಾತ್ರವಹಿಸಿದ್ದಾರೆ. ಅವರ ಸಮಾಜ ಹಾಗೂ ರಂಗಭೂಮಿ ಸೇವೆ ಸ್ಮರಣೀಯವಾಗಿದೆ. ಇಡೀ ಬದುಕನ್ನು ಸರಳವಾಗಿ ನಡೆಸಿದ ಅವರೂ ಎಲ್ಲರಿಗೂ ಮಾದರಿಯಾಗಿದ್ದಾರೆಂದರು.

ಇದೇ ವೇಳೆ ಡಾ.ನ.ರತ್ನ ಅವರು ರಚಿಸಿದ "ಅಯಾನ್ ಶಾಂತಿ ಕುಟೀರ" ನಾಟಕದ ಇಂಗ್ಲೀಷ್ ಅನುವಾದ ಪುಸ್ತಕವನ್ನು ಹಿರಿಯ ರಂಗಕರ್ಮಿ ಪ್ರೊ. ರಾಮೇಶ್ವರಿ ವರ್ಮ ಬಿಡುಗಡೆಗೊಳಿಸಿ ಮಾತನಾಡಿ, ತಮ್ಮ ಇಳಿ ವಯಸ್ಸಿನಲ್ಲಿ ನ.ರತ್ನ "ಅಯಾನ್ ಶಾಂತಿ ಕುಟೀರ" ನಾಟಕ ಮಾಡಬೇಕೆಂದಾಗ ಅವರ ಪತ್ನಿಯ ಬಳಿ ಹೋಗಿ ಕೇಳಿದೇವು. ಮಾಡೋಣ ಎಂದು ಅವರು ಕೊಟ್ಟ ಛಲದಿಂದ ಇಳಿವಯಸ್ಸಿನಲ್ಲಿಯೂ ಅದ್ಭುತವಾಗಿ ನಾಟಕ ಮೂಡಿಬಂದಿತು. ಅದೇ ಅವರೊಟ್ಟಿಗೆ ಕೊನೆಯ ಒಡನಾಟವಾಯಿತೆಂದು ಸ್ಮರಿಸಿಕೊಂಡರು.

ಕೆನಡಾದ ಬೆಲ್ಲಿ ಧ್ಯಾನ ಮಾಸ್ಟರ್ ತರ್ನೀವ್, ಅಭಿಯಂತರ ಎನ್.ಎಸ್.ಆನಂದ್ ಇನ್ನಿತರರು ಉಪಸ್ಥಿತರಿದ್ದರು. ಬಿ.ಆರ್.ರವೀಶ್ ನಿರ್ವಹಣೆಯಲ್ಲಿ ರಂಗಸಂಗೀತ ಮೂಡಿ ಬಂದಿತು. ಟಿ.ಪಿ.ಕೈಲಾಸಂ ಅವರ ಫುಲ್‌ಫಿಲ್ ಮೆಂಟ್ ಕನ್ನಡ ಅನುವಾದದ ಗುರಿಮುಟ್ಟು ನಾಟಕ ಪ್ರದರ್ಶನ ಕಂಡಿತು.

# 2 ದಿನಗಳ ಕೈಗಾರಿಕಾ ತರಬೇತಿಗೆ ಚಾಲನೆ



ಮೈಸೂರು: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಏರ್ಪಡಿಸುತ್ತಿರುವ ತರಬೇತಿ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಉದ್ದಿಮೆದಾರರು ಭಾಗವಹಿಸಿ ಮಾಹಿತಿಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ರ್ಯಾಂಪ್ ಯೋಜನೆಯಡಿ ವ್ಯಾಪಾರ ಸ್ವೀಕಾರಾರ್ಹ ರಿಯಾಯಿತಿ ವ್ಯವಸ್ಥೆ(ಟ್ರೇಡ್) ಹಾಗೂ ಪರಿಸರ ಮತ್ತು ಸಾಮಾಜಿಕ ನಿರ್ವಹಣೆ(ಇಎಸ್‌ಎಂ) 2ದಿನದ ತರಬೇತಿ ಕಾರ್ಯಕ್ರಮವನ್ನು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಚಾಲನೆ ನೀಡಿದರು. ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಆಯೋಜಿಸಿರುವ ತರಬೇತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಉದ್ದಿಮೆದಾರರು ಭಾಗವಹಿಸಬೇಕು. ಆಗ ಮಾತ್ರವೇ ಇಲಾಖೆಯಲ್ಲಿನ ಎಲ್ಲಾ ಅಂಶಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಆಗ ಮಾತ್ರವೇ ಯಶಸ್ವಿ ಉದ್ಯಮಿ ಆಗಲು ಸಾಧ್ಯವಾಗುತ್ತದೆ. ಇಲ್ಲಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳುವ ಕೆಲಸ ಮಾಡಬೇಕಿದೆ ಎಂದರು.

ಬೆಂಗಳೂರು ಟೆಕ್ಸಾಕ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದರಾಜು ಮಾತನಾಡಿ, ಕೈಗಾರಿಕಾ ಘಟಕಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅವಶ್ಯವಿರುವ ಮಾಹಿತಿಗಳನ್ನು ಸದರಿ ತರಬೇತಿಗಳಲ್ಲಿ ಪಡೆದು ಉದ್ದಿಮೆದಾರರು ಲಾಭ ಗಳಿಸುವತ್ತಾ ಗಮನ ಹರಿಸಲು ತಿಳಿಸಿದರು. ಸಂಪನ್ಮೂಲ ವ್ಯಕ್ತಿಯಾದ ಕೃಷ್ಣಮೂರ್ತಿ ಟ್ರೇಡ್ಸ್ ಕುರಿತು ಹಾಗೂ ಕಣ್ಣನ್ ಅವರು ಇಎಸ್‌ಎಂ ವಿಷಯದ ಕುರಿತು ಉದ್ದಿಮರದಾರರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ.ಜಾತಿ/ಪಂಗಡಗಳ ಉದ್ದಿಮೆದಾರರ ಸಂಘ ಅಧ್ಯಕ್ಷ ವಿಜಯಶಂಕರ್, ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕ ದಿನೇಶ್ ಇನ್ನಿತರರು ಉಪಸ್ಥಿತರಿದ್ದರು.

# ಶೀಘ್ರ ಧರ್ಮಿಷ್ಠ ತೆರೆಗೆ

ಮೈಸೂರು: ಗೋಲ್ಡನ್ ಸುರೇಶ್ ಫಿಲಂಸ್ ನಿರ್ಮಿಸಿರುವ ಜ್ಯೂನಿಯರ್ ರಾಜ್‌ಕುಮಾರ್ ಎಂದೇ ಖ್ಯಾತರಾಗಿರುವ ಅಜಿತ್ ಕುಮಾರ್ ನಾಯಕ ನಟರಾಗಿರುವ ಧರ್ಮಿಷ್ಠ ಚಲನ ಚಿತ್ರ ಸೆನ್ಸಾರ್ ಮಂಡಳಿ ಪ್ರಮಾಣಪತ್ರ ಪಡೆದುಕೊಂಡಿದ್ದು, ಶೀಘ್ರದಲ್ಲೇ ತೆರೆ ಕಾಣಲಿದೆ ಎಂದು ಪಾಲಿಕೆ ಮಾಜಿ ಸದಸ್ಯ ಎಂ.ಟಿ. ಪಾರ್ಥಸಾರಥಿ ತಿಳಿಸಿದರು.


ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಚಿತ್ರದಲ್ಲಿ ಬಹುತೇಕ ಹೊಸ ಮುಖಗಳಿಗೆ ಆದ್ಯತೆ ನೀಡಲಾಗಿದೆ. ಲಯನ್ ಗೋಲ್ಡನ್ ಸುರೇಶ್ ನಿರ್ಮಿಸಿದ್ದು, ಎಚ್.ವಿ. ಪುಟ್ಟಸ್ವಾಮಿ ನಿರ್ದೇಶಿಸಿದ್ದಾರೆ. ಇದು ಸಾಂಸಾರಿಕ ಚಿತ್ರವಾಗಿದ್ದು, ಭಾಸ್ಕರ್ ಕೃಷ್ಣ ನೀತಿ ಧರ್ಮ ಪಾಲನೆ ಬಗ್ಗೆ ತಿಳಿವಳಿಕೆ ನೀಡುವ ಸಂಭಾಷಣೆ, ಚಿತ್ರಕತೆ ಬರೆದಿದ್ದಾರೆ, ರವಿಶಂಕರ್ ಸಂಗೀತ ನೀಡಿದ್ದಾರೆಂದರು. ಲಯನ್ ಗೋಲ್ಡನ್ ಸುರೇಶ್, ನಾಯಕ ನಟ ಅಜಿತ್ ಕುಮಾರ್, ಲಯನ್ ಎಸ್. ಪ್ರಮೀಳಾ, ಎನ್. ಸರಸ್ವತಿ ಇದ್ದರು.



ದೊಡ್ಡಕಾನ್ಯ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟನೆ

# ಜನರ ನಂಬಿಕೆಗೆ ತಕ್ಕಂತೆ ಕೆಲಸ ಮಾಡುವೆ: ಜಿಟಿಡಿ



ಮೈಸೂರು: ಗ್ರಾಮಾಂತರ ಪ್ರದೇಶದಲ್ಲಿ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸದೆ ಕಡ್ಡಾಯವಾಗಿ ಸರ್ಕಾರಿ ಶಾಲೆಗಳಿಗೆ ಸೇರಿಸಬೇಕು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾದ ಸೇವೆ ಸಲ್ಲಿಸುತ್ತಿದ್ದೇನೆ. ಜನರು ಇಟ್ಟಿರುವ ನಂಬಿಕೆಗೆ ತಕ್ಕಂತೆ ಕೆಲಸ ಮಾಡುವೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ತಾಲ್ಲೂಕಿನ ದೊಡ್ಡಕಾನ್ಯ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಪೋಷಕರು ಕಡ್ಡಾಯವಾಗಿ ಸರ್ಕಾರಿ ಶಾಲೆಗೆ ಕಳುಹಿಸಬೇಕು. ಮಕ್ಕಳಿಗೆ ಸುಸಂಸ್ಕೃತವಾದ ಸಂಸ್ಕಾರ ಶಿಕ್ಷಣ, ಹಿರಿಯರ ಗೌರವಿಸುವ ಮನೋಭಾವನೆ ಬೆಳೆಸಿಕೊಳ್ಳಿ. ಶಿಕ್ಷಣದ ಜತೆಗೆ ಸಂಸ್ಕಾರ ಕಲಿಸಿದರೆ ಪ್ರತಿಭಾವಂತ, ಉತ್ತಮ ನಾಗರಿಕ ಪ್ರಜೆಗಳಾಗುತ್ತಾರೆ. ಗ್ರಾಮದಲ್ಲಿ ಇಂದು ಮಾಡಿದ ಕಾರ್ಯಕ್ರಮವನ್ನು ನನ್ನ ಗ್ರಾಮ,ಮನೆಯ ಹಬ್ಬದಂತೆ ಆಚರಣೆ ಮಾಡಿರುವುದು ಸಂತಸ ತರಿಸಿದೆ ಎಂದರು.

ಟಿವಿಎಸ್ ಕಂಪೆನಿಯವರು ಶೌಚಾಲಯ, ಅಂಗನವಾಡಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಾಣ ಮಾಡಿ ಎಲ್ಲರ ಆರೋಗ್ಯವಾಗಿರಬೇಕೆಂದು ಬಯಸಿದ್ದಾರೆ. ಅತ್ಯಂತ ಪ್ರೀತಿಯಿಂದ ಸೇವೆ ಮಾಡಿಕೊಂಡು ಬಂದಿದ್ದಾರೆ. ಜೆ.ಪಿ.ನಗರದಿಂದ ದೊಡ್ಡಕಾನ್ಯ ಗ್ರಾಮಕ್ಕೆ ಸೇರುವ ಮಾರ್ಗದ ರಸ್ತೆಯು ಹಾಳಾಗಿದ್ದರಿಂದ 13 ಕೋಟಿ ರೂಪಾಯಿ ಮಂಜೂರು ಮಾಡಿಸಿ ರಸ್ತೆ ನಿರ್ಮಾಣ ಮಾಡಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನಕ್ಕೆ 60 ಲಕ್ಷ ರೂ, ಬಸವ ಭವನ ನಿರ್ಮಾಣಕ್ಕೆ 10 ಲಕ್ಷ ರೂಪಾಯಿ ನೀಡಿದ್ದೇನೆ. ಗ್ರಾಮದ ಪ್ರತಿಯೊಂದು ಸಿಸಿ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗಿದೆ ಎಂದು ಹೇಳಿದರು.

ಆಸ್ತಿ ಮಾರಿ ಮಗಳ,ಮಗನ ಅದ್ದೂರಿ ಮದುವೆ ಮಾಡಿ ಕಳುಹಿಸುತ್ತಾರೆ. ಇರುವ ಒಂದು ಎಕರೆ ಜಮೀನು ಮಾರಿ ಎಷ್ಟು ಹೊತ್ತಿಗೆ ಮದುವೆ ಮಾಡಲಿ ಎನ್ನುವಂತೆ ಯೋಚಿಸುತ್ತಿದ್ದಾರೆ. ಮುಂದಿನ ಯೋಚನೆ ಮಾಡದೆ ಜಮೀನು ಕಳೆದುಕೊಳ್ಳುತ್ತಿದ್ದಾರೆ. ನನ್ನ ಮಗ, ಮಗಳ ಮದುವೆಯನ್ನು ತಿರುಪತಿಯಲ್ಲಿ ಮಾಡಿದೆ. ಸರಳ ಮದುವೆ ಮಾಡಿ ಇರುವ ಜಮೀನನ್ನು ಮಗಳ ಹೆಸರಿಗೆ ಬರೆದರೆ ನೆಮ್ಮದಿಯಾಗಿ ಬದುಕುತ್ತಾರೆ. ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಬೇಕು. ಆರೋಗ್ಯವಾಗಿದ್ದರೆ ಕುಟುಂಬ ಚೆನ್ನಾಗಿರುತ್ತದೆ ಎಂದರು.

ಟಿವಿಎಸ್ ಕಂಪೆನಿಯ ಶಶಿಕಾಂತ್, ಮಾಜಿ ಅಧ್ಯಕ್ಷ, ಕೃಷ್ಣ, ಗ್ರಾಪಂ ಅಧ್ಯಕ್ಷ ಶಿವರುದ್ರಮ್ಮ, ಉಪಾಧ್ಯಕ್ಷ ಅಬ್ದುಲ್ ರೆಹಮಾನ್, ಉಮಾಪತಿ, ಡೈರಿ ಮಹ ದೇವಪ್ಪ, ಮಹದೇವಯ್ಯ, ಶಿವನಂಜು, ರಾಮಯ್ಯ, ಉಮೇಶ್,ಶಿವಯ್ಯ, ವಿಜಯಮ್ಮ, ಮಹೇಶ್,ನಂಜಪ್ಪ, ಪಿಡಿಒ ಶಿವಕುಮಾರ್, ಬಸವರಾಜು, ಅಚಲಾ, ವಿಜಯಮಣ್ಣಿ, ನಂಜುಂಡಸ್ವಾಮಿ, ಪಾಪಣ್ಣ, ಶ್ರೀಕಂಠಾ ಚಾರ್, ಮಹದೇವಶೆಟ್ಟಿ, ಗೀತಾ, ಪೃಥ್ವಿ, ವಿಜಯಕುಮಾರ್ ಹಾಜರಿದ್ದರು.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪತ್ರ ಬರಹಗಾರರ ಪ್ರತಿಭಟನೆ




ಮೈಸೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ನಗರ ಮತ್ತು ತಾಲೂಕು ಪತ್ರ ಬರಹಗಾರರ ಒಕ್ಕೂಟ ಮೈಸೂರು ಉತ್ತರ ಉಪನೋಂದಣಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿ ನಂತರ ಜಿಲ್ಲಾ ಉಪನೋಂದಣಾಧಿಕಾರಿ ಹಾಗೂ ಮೈಸೂರು ತಾಲೂಕು ತಹಶೀಲ್ದಾರ್ ಗೆ ಮನವಿ ಸಲ್ಲಿಸಿದರು.

ಮುದ್ರಾಂಕ ಹಾಗೂ ನೋಂದಣಿ ಇಲಾಖೆಯು ಈಗಾಗಲೇ ಕಾವೇರಿ 2.0 ತಂತ್ರಾಂಶದ ಮೂಲಕ ದಾಖಲಾತಿಗಳನ್ನು ರವಾನಿಸುವ ಬಗ್ಗೆ ಕ್ರಮ ಕೈಗೊಂಡಿದ್ದು, ಈ ಸಂಬಂಧ ಆಗಿದ್ದಾಂಗ್ಲೆ ಸುಧಾರಣೆ ವಿಷಯದಲ್ಲಿ ಹಲವಾರು ಬದಲಾವಣೆಗಳನ್ನು ತಂದಿರುವುದು ತಿಳಿದಿರುವ ಸಂಗತಿಯಾಗಿರುತ್ತದೆ. ಸುಧಾರಣೆಗಳಿಂದಾಗಿ ಜನಸಾಮಾನ್ಯರ ನೋಂದಣಿ ಪ್ರಕ್ರಿಯೆಯ ವೇಗ ಕುಂಠಿತವಾಗುತ್ತಿದ್ದು, ಪತ್ರಬರಹಗಾರರಾದ ನಾವುಗಳು ಸಹಾ ಸಮರ್ಪಕ ಸೇವೆಯನ್ನು ಜನ ಸಾಮಾನ್ಯರಿಗೆ ನೀಡುವುದು ದುಸ್ಸಾಹಸವಾಗಿದೆ. ನೋಂದಣಿ ಪ್ರಕ್ರಿಯೆಯಲ್ಲಿ ಈಗಾಗಲೇ ವಿಭಾಗ ಪತ್ರ. ದಾನಪತ್ರ ಹಾಗೂ ಇನ್ನಿತರೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು ಸಹಾ ಸಾಧ್ಯವಾಗದ ಕಾರಣ ಜನಸಾಮಾನ್ಯರು ತಮ್ಮ ಕುಟುಂಬದ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಕೊಳ್ಳುವುದು ಸಾಧ್ಯವಿಲ್ಲದಂತಾಗಿದೆ. ಸುಧಾರಣೆಯ ನೆಪದಲ್ಲಿ ಪತ್ರಬರಹಗಾರರು, ವಕೀಲರು ಹಾಗೂ ಜನಸಾಮಾನ್ಯರಿಗೆ ಯಾವುದೇ ರೀತಿಯಲ್ಲಿ ವಿಷಯಗಳು ತಿಳಿಯದ ಕಾರಣ ಇಲಾಖೆಯಿಂದ ರಹದಾರಿ ಪಡೆದಿರುವ ಪತ್ರ ಬರಹಗಾರರು ಹಾಗೂ ಜನಸಾಮಾನ್ಯರು ತೀರ್ವ ತೊಂದರೆಯನ್ನು ಅನುಭವಿಸುವಂತಾಗಿದೆ. ಆದ ಕಾರಣ ಮಾನ್ಯ ಅಧಿಕಾರಿಗಳು ಈ ಮೇಲ್ಕಂಡ ವಿಚಾರವನ್ನು ಇಲಾಖೆಯ ಉನ್ನತ ಅಧಿಕಾರಿಗಳು ಹಾಗೂ ಸಚಿವರಿಗೆ ಮನದಟ್ಟು ಮಾಡುವ ಮೂಲಕ ಜನಸಾಮಾನ್ಯರ ನೋಂದಣಿ ಪ್ರಕ್ರಿಯೆಯನ್ನು ಪತ್ರ ಬರಹಗಾರರು ಸುಲಲಿತವಾಗಿ ನಡೆಸಲು ಅನುವು ಮಾಡಿಕೊಡಬೇಕೆಂದು ಪ್ರತಿಭಟನೆಕಾರರು ಒತ್ತಾಯಿಸಿದರು

ಇದೇ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷ ನಿಸಾರ್ ಅಹಮದ್ ಖಾನ್, ಉಪಾಧ್ಯಕ್ಷ ಎಂ.ಎಸ್.ಧನಂಜಯ್, ಕಾರ್ಯದರ್ಶಿ ಕೆ.ಆರ್. ಉದಯ್ ಕುಮಾರ್, ಖಜಾಂಜಿ ಎಂ.ಎಸ್.ನರಸಿಂಹಮೂರ್ತಿ, ಸಂಚಾಲಕ ಎಂ. ಗಣೇಶ್, ನಿರ್ದೇಶಕರಾದ ಕೆ.ಆರ್.ಸತ್ಯನಾರಾಯಣ್, ಎಂ.ಎನ್.ದೇವರಾಜು, ನಾಗಭೂಷಣ ಆರಾಧ್ಯ, ಮಹಾದೇವ್, ಕುಮಾರ್, ಪಣಿರಾಜ್, ಚಂದ್ರಶೇಖರ್, ಎನ್ ದಿನೇಶ್ ಕುಮಾರ್, ಎಸ್. ಎಸ್.ವೇಣು, ಜಯಲಕ್ಷ್ಮಿ ಇನ್ನಿತರರು ಇದ್ದರು.

# ಕಳಪೆ ಕೀಟನಾಶಕ: ಲಕ್ಷಾಂತರ ರೂ. ಮೌಲ್ಯದ ಶುಂಠಿ ಹಾಳು



ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಕೊಪ್ಪ ಗ್ರಾಮದ ಖಾಸಗಿ ಕೀಟನಾಶಕ ಮಾರಾಟ ಮಳಿಗೆಯಲ್ಲಿ ಶುಂಠಿ ಬೆಳೆಗೆ ಖರೀದಿಸಿದ ಕ್ರಿಮಿನಾಶಕ ನಕಲಿಯಾಗಿದ್ದು, 15ಲಕ್ಷ ರೂ. ಬೆಲೆಬಾಳುವ ಶುಂಠಿ ಹಾಳಾಗಿದೆ. ಈ ಬಗ್ಗೆ ಪಿರಿಯಾಪಟ್ಟಣ ಸಹಾಯಕ ಕೃಷಿ ನಿರ್ದೇಶಕರಿಗೆ ಮತ್ತು ಮೈಸೂರಿನ ಜಂಟಿ ಕೃಷಿ ನಿರ್ದೇಶಕರಿಗೆ ದೂರು ನೀಡಲಾಗಿದ್ದು, ಕ್ರಿಮಿನಾಶಕ ಮಾರಾಟಗಾರನ ಅಂಗಡಿ ಲೈಸೆನ್ಸ್ ರದ್ದು ಮಾಡಿ ಆತನ ವಿರುದ್ಧ ಕಾನೂನು ಕ್ರಮ ಜರುಗಿಸಿ ರೈತನಿಗೆ ಪರಿಹಾರ ಒದಗಿಸಬೇಕೆಂದು ಕರ್ನಾಟಕ ರಾಜ್ಯ ರೈತಸಂಘದ(ರೈತಬಣ) ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಒತ್ತಾಯಿಸಿದ್ದಾರೆ.

ಶುಕ್ರವಾರ ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿ ಎದುರು ಮಾಧ್ಯಮದವರೊಂದಿಗೆ ಅವರು ಮಾತನಾಡಿ, ಕಳೆದ 6 ತಿಂಗಳ ಹಿಂದೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಚೆನ್ನಕಲ್ ಕಾವಲ್ ಗ್ರಾಮದ ರೈತರಾದ ಮಣಿ, ಸಿ.ಪಿ, ಎಂಬವರು ಸರ್ವೇ ನಂ.30ರ ಮೂರು ಎಕರೆಯ ಗುತ್ತಿಗೆ ಜಮೀನಿನಲ್ಲಿ ಶುಂಠಿ ಬೆಳೆಯನ್ನು ನಾಟಿ ಮಾಡಿದ್ದು, ಜಮೀನಿಗೆ ಬೆಳೆಯ ಪೋಷಣೆ ಮತ್ತು ಸಸ್ಯ ಸಂರಕ್ಷಣೆಗೆ ಜೂ.25ರಂದು ಪಿರಿಯಾಪಟ್ಟಣ ತಾಲ್ಲೂಕು ಕೊಪ್ಪ ಗ್ರಾಮದ ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಅವರಿಂದ ವಿವಿಧ ಉತ್ಪನ್ನಗಳನ್ನು ಖರೀದಿಸಿ ಮಾರಾಟಗಾರರ ಶಿಫಾರಸಿನಂತೆಯೇ ಜೂನ್ 26 ರಂದು ಕೀಟನಾಶಕ ಸಿಂಪಡಣೆ ಮಾಡಿರುತ್ತಾರೆ, ಸಿಂಪಡಣೆ ಮಾಡಿದ ನಂತರ 2ದಿನದಲ್ಲಿ ಎಲೆಗಳು ಸುಟ್ಟಂತಾಗಿ ಬೆಳೆಯು ಹಾಳಾಗಿರುತ್ತದೆ.

ಈ ವಿಚಾರವನ್ನು ರೈತರು. ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲೀಕರ ಗಮನಕ್ಕೆ ತಂದಿದ್ದು, ಅವರ ಪ್ರತಿನಿಧಿಗಳು ಸಹ ಜಮೀನಿಗೆ ಭೇಟಿ ನೀಡಿ, ಪರಿಶೀಲನೆ ಮಾಡಿ, ರೈತರಿಗೆ ಉಚಿತವಾಗಿ ಬೇರೆ ಉತ್ಪನ್ನಗಳನ್ನು ನೀಡಿ, ಇವುಗಳನ್ನು ಸಿಂಪಡಿಸಿ 12 ದಿನಗಳಲ್ಲಿ ಸರಿಹೋಗುತ್ತದೆ ಎಂದು ಸೂಚಿಸಿರುತ್ತಾರೆ. ತದನಂತರ ಅವರು ಬೆಳೆಯು ಚೇತರಿಕೆಯಾಗುವುದಿಲ್ಲ. ಇದೀಗ ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲೀಕ ರೈತನಿಗೆ ಸಬೂಬು ಹೇಳುತ್ತಿದ್ದಾನೆ. ಕೂಡಲೇ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲೀಕನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು, ಆತನ ಲೈಸೆನ್ಸ್ ರದ್ದು ಮಾಡಿ, ರೈತನಿಗೆ ಪರಿಹಾರ ಕೊಡಿಸಬೇಕು ಇಲ್ಲದಿದ್ದಲ್ಲಿ ಪಿರಿಯಾಟಪಟ್ಟಣ ಕೃಷಿ ಇಲಾಖೆ ಎದುರು ಬೃಹತ್ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ ರೈತ ಮಣಿ ಮಾತನಾಡಿ, ಕಳೆದ ಆರು ತಿಂಗಳಿನಿಂದಲೂ ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಅಂಗಡಿ ಮಾಲೀಕರು ನಮಗೆ ಪರಿಹಾರ ನೀಡುವುದಾಗಿ ಹೇಳಿ ಅಲೆದಾಡಿಸಿ ಇದೀಗ ಪರಿಹಾರ ನೀಡಲು ನಿರಾಕರಣೆ ಮಾಡುತ್ತಿದ್ದಾರೆ. ಕೂಡಲೇ ಕೃಷಿ ಅಧಿಕಾರಿಗಳು ಮಧ್ಯ ಪ್ರವೇಶಿಸಿ ನಮಗೆ ಪರಿಹಾರ ಕೊಡಿಸಬೇಕು. ನಾನು ಲಕ್ಷಾಂತರ ರೂ ಸಾಲ ಮಾಡಿ, ಜಮೀನು ಗುತ್ತಿಗೆಗೆ ಪಡೆದು ಅದರಲ್ಲಿ ಮತ್ತೆ ಲಕ್ಷಾಂತರ ರೂ ಖರ್ಚು ಮಾಡಿ ಕೃಷಿ ಮಾಡಿದ್ದೇನೆ. ರೈತರಿಗೆ ಉತ್ತಮ ಗುಣಮಟ್ಟದ ಕೀಟನಾಶಕ ಕೊಡುವ ಬದಲು ಕಳಪೆ ಕೀಟನಾಶಕ ನೀಡಿ ನನ್ನ ಬೆಳೆ ಹಾಳಾಗಲು ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲಿಕರು ಮತ್ತು ಕಳಪೆ ಗುಣಮಟ್ಟದ ಕೀಟನಾಶಕ ಮಾರಾಟ ಮಾಡುತ್ತಿದ್ದರೂ ಅದನ್ನು ಪರಿಶೀಲಿಸದೆ ಅವರ ಅಕ್ರಮಕ್ಕೆ ಕೃಷಿ ಅಧಿಕಾರಿಗಳೂ ಬೆಂಬಲ ನೀಡಿದ್ದು, ಅವರ ವಿರುದ್ಧವೂ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಮೈಸೂರು ಜಿಲ್ಲಾ ಅಧ್ಯಕ್ಷ ಮಾಲಿಕ್ ಆವರ್ತಿ, ಅರಸಿನಕೆರೆ ಕೆಂಪರಾಜು, ಪಿರಿಯಾಪಟ್ಟಣದ ಮಂಜುನಾಥ್, ಚಂಗಪ್ಪ, ಸತೀಶ, ಬೆಣಗಾಲು ಮಣಿ, ಚನ್ನಕಲ್ ಷಣ್ಮುಖ, ಕಾವೇರಿ, ಮೋಹನ, ಸಿ.ಆರ್.ಪ್ರಕಾಶ್ ಮತ್ತಿತರರು ಇದ್ದರು.

ಮೊದಲ ಪುಟದಿಂದ

# ಎಚ್.ಎಂ.ರೇವಣ್ಣ ಪುತ್ರನ ಕಾರು ಡಿಕ್ಕಿ: ಯುವಕ ಸಾವು

ಘಟನೆ ವೇಳೆ ರೇವಣ್ಣ ಪುತ್ರ ಶಶಾಂಕ್ ಕಾರು ಚಲಾಯಿಸುತ್ತಿದ್ದರು ಎನ್ನಲಾಗಿದೆ. ಈ ಆರೋಪವನ್ನು ನಿರಾಕರಿಸಿದ ರೇವಣ್ಣ, ನನ್ನ ಪುತ್ರನ ಕಾರು ಅಪಘಾತವಾಗಿರುವುದು ನಿಜ. ಆದರೆ ಚಾಲಕ ಕಾರು ಚಲಾಯಿಸುತ್ತಿದ್ದರು ಎಂದು ತಿಳಿಸಿದ್ದಾರೆ. ಈ ಸಂಬಂಧ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


**ಮೈಸೂರು ಅರಮನೆ ಮಂಡಳಿ, ಮೈಸೂರು**
**ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ, ಮೈಸೂರು**

ಸಂ.: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ: 13/2025-26 ದಿನಾಂಕ: 10.12.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ **ರೂ. 11.00 ಲಕ್ಷಗಳ ಅರಮನೆ ವಿದ್ಯುತ್ ಉಪ-ವಿಭಾಗಕ್ಕೆ ಸಂಬಂಧಿಸಿದ ಒಟ್ಟು 02 ಸಂಖ್ಯೆ ದುರಸ್ಥಿ ಕಾಮಗಾರಿ 01 ಸಂಖ್ಯೆ ವಾರ್ಷಿಕ ನಿರ್ವಾಹಣೆ ಹಾಗೂ 01 ಸಂಖ್ಯೆ ಖರೀದಿಗೆ ಸಂಬಂಧಿಸಿದ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೋಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ/ ನೋಂದಾಯಿತ ಏಜೆನ್ಸಿಯವರಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 24.12.2025 ಸಂಜೆ 4:00 ಗಂಟೆಯವರೆಗೆ. (2)** ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ: 26.12.2025 ಸಂಜೆ 4:00 ಗಂಟೆಯವರೆಗೆ. (3)** ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 19.12.2025 ಸಂಜೆ 4.00 ಗಂಟೆಯವರೆಗೆ. (4)** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 19.12.2025ರ ಸಂಜೆ 4.30 ಗಂಟೆಗೆ. (5)** ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ. 4.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ. 2.00 ಲಕ್ಷಗಳು.** ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕು ಉಪ-ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದ್ದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ, ಆನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/-
**ಉಪ ನಿರ್ದೇಶಕರು**
ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/MYS/1357/SA/2025-26

# ಚೆಂಡು ಹೂವು ಫ್ಯಾಕ್ಟರಿ ಬಂದ್ ಮಾಡುವಂತೆ ಬೈಕ್ ರ್‍ಯಾಲಿ




ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನಲ್ಲಿರುವ ಚೆಂಡು ಹೂವು ಫ್ಯಾಕ್ಟರಿಯಿಂದ ರೈತರು ಹಾಗೂ ಜಮೀನುಗಳಿಗೆ ತೊಂದರೆಯಾಗುತ್ತಿದ್ದು, ಇದನ್ನು ಕೂಡಲೇ ಬಂದ್ ಮಾಡುವಂತೆ ಒತ್ತಾಯಿಸಿ, ನಗರದಲ್ಲಿ ರೈತ ಸಂಘದಿಂದ ಬ್ಯಾಕ್ ರ್‍ಯಾಲಿ ನಡೆಯಿತು.

ಗುಂಡ್ಲುಪೇಟೆ ತಾಲೂಕಿನ ಸಿಂಡನಪುರದ ಹತ್ತಿರದಲ್ಲಿರುವ ಚೆಂಡು ಹೂ ಫ್ಯಾಕ್ಟರಿ ಬಳಿ ರೈತ ಸಂಘಟನೆಗಳು ಮುಖಂಡರು ಸಮಾವೇಶ ಗೊಂಡು ಫ್ಯಾಕ್ಟರಿಯನ್ನು ಪರಿಶೀಲನೆ ನಂತರ ಅಲ್ಲಿಂದಲೇ ಸಂಘಟನೆಗೊಂಡು ಬೈಕ್ ರ್‍ಯಾಲಿ ಮೂಲಕ ಮಧ್ಯಾಹ್ನ 2 ಗಂಟೆಗೆ ಜಿಲ್ಲಾಡಳಿತ ಭವನ ತಲುಪಿದರು. ಮಾರ್ಗ ಮಧ್ಯೆ ದಲ್ಲಿರುವ ಅರಣ್ಯ ಇಲಾಖೆ ಕಚೇರಿ, ಸೆಸ್ಕಾಂ ಕಚೇರಿಯ ಬಳಿಕ ಕೆಲ ಹೊತ್ತು ಪ್ರತಿಭಟನೆ ನಡೆಸಿದರು.

ಅಲ್ಲಿಂದ ಬಿ. ರಾಚಯ್ಯ ಜೋಡಿ ರಸ್ತೆ ಮಾರ್ಗವಾಗಿ ಜಿಲ್ಲಾಡಳಿತ ಭವನ ತಲುಪಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡರು ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಸಿಂಡನಪುರದ ಹತ್ತಿರದಲ್ಲಿ ನಿರ್ಮಾಣವಾಗಿರುವ ಚೆಂಡು ಮಲ್ಲಿಗೆ ಕಾರ್ಖಾನೆ ರೈತರ ವಿರೋಧಿಯಾಗಿದ್ದು. ಈ ಪ್ರದೇಶ ಸುತ್ತಲು ದುರ್ವಾಸನೆ ಬೀರುತ್ತದೆ. ಜೊತೆಗೆ ಚೆಂಡು ಹೂವು ಸಂಸ್ಕರಣೆ ಮಾಡುವ ಕೊಳಚೆ ನೀರನ್ನು ಹೊರ ಬಿಡಲಾಗುತ್ತಿದೆ. ಇದರಿಂದ ಸುತ್ತಮುತ್ತಲಿನ ರೈತರ ಜಮೀನುಗಳಲ್ಲಿ ಇತರೇ ಫಸಲು ಬರುತ್ತಿಲ್ಲ ಎಂದು ದೂರಿದರು.

ಸಾಮೂಹಿಕ ನೇತೃತ್ವದ ರೈತ ಸಂಘ ಅಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಸಿಂಡನಪುರದಲ್ಲಿ ಆರಂಭವಾಗಿರುವ ಚೆಂಡು ಮಲ್ಲಿಗೆ ಹೂ ಫ್ಯಾಕ್ಟರಿ ರೈತರು ಹಾಗೂ ಸುತ್ತಮುತ್ತಲಿನ ಗ್ರಮಗಳಿಗೆ ಮಾರಕವಾಗಿದೆ. ಫ್ಯಾಕ್ಟರಿಯಲ್ಲಿ ಸಂಸ್ಕರಿಸುವ ಹೂವು ದುರ್ವಾಸನೆಯನ್ನು ಬೀರುತ್ತದೆ. ಅಲ್ಲದೇ ಈ ನೀರನ್ನು ಅಲ್ಲೇ ಶೇಖರಣೆ ಮಾಡುವುದಿದಿಂದ ಅಕ್ಕಪಕ್ಕದ ಜಮೀನುಗಳ ರೈತರು ಬೋರ್ ವೇಲ್ ಕೊರೆಸಿದರೆ, ಕಲುಷಿತ ನೀರು ಬೋರ್ವೆಲ್‌ನಲ್ಲು ಬರುತ್ತಿದೆ. ಇದು ಕೃಷಿ ಯೋಗ್ಯವಲ್ಲ ಎಂದು ಈಗಾಗಲೇ ಪರಿಸರ ಮಾಲಿನ್ಯ ಅಧಿಕಾರಿಗಳು ವರದಿಯನ್ನು ನೀಡಿದ್ದಾರೆ. ಇಷ್ಟಾದರು ಸಹ ಈ ಫ್ಯಾಕ್ಟರಿ ಕಾರ್ಯಾರಂಭ ಮಾಡುತ್ತಿದೆ. ಇದರಿಂದ ಜನ ಜಾನುವಾರುಗಳು ಅನಾರೋಗ್ಯಕ್ಕೀಡಾಗುತ್ತಿದೆ. ಇದನ್ನು ಕೂಡಲೇ ಜಿಲ್ಲಾಡಳಿತ ಬಂದ್ ಮಾಡಿಸಬೇಕೆಂದು ಒತ್ತಾಯಿಸಿದರು. ಸ್ಥಳಕ್ಕಾಗಮಿಸಿದ ಅಪರ ಜಿಲ್ಲಾಧಿಕಾರಿ ಜವರೇಗೌಡರಿಗೆ ಮನವಿ ಪತ್ರ ಸಲ್ಲಿಸಿದರು. ಅಲ್ಲದ ಇತರೇ ಇಲಾಖೆಗಳಿಗೆ ಸಂಬಂಧ ರೈತರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸುವಂತೆ ಜಿಲ್ಲಾಡಳಿತವನ್ನು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಹೊನ್ನೂರು ಪ್ರಕಾಶ, ರೈತ ಮುಖಂಡರಾದ ಮಾಡ್ರಹಳ್ಳೀ ಪಾಪಣ್ಣ, ಬರಗಿ ಮಹೇಶ್, ಬೆಟ್ಟದಮಾದಹಳ್ಳಿ ಷಣ್ಮುಖ, ಬೇರಂಬಾಡಿ ಶಶಿ, ಹೊನ್ನೆಗೌಡನಹಳ್ಳಿ ಗುರು, ಸಿಂಡನಪುರ ಹಾಗು ಕೆಲಸೂರುಪುರ ಭಾಗದ ರೈತರು ಭಾಗವಹಿಸಿದ್ದರು.

**▸▸ ಗುಂಡ್ಲುಪೇಟೆಯಿಂದ ಚಾ.ನಗರದವರೆಗೆ ಬೈಕ್ ನಲ್ಲಿ ಆಗಮಿಸಿ ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆ**

## ಕೃಷ್ಣ ವಂದನ



**ಸ್ನೇಹಾ ಆನಂದ್**



### ಹೇ ಕೃಷ್ಣಾ !

ಕೃಷ್ಣ ತಾನೇ ಬಂದ ನೋಡಿ ಬಾಗಿಲು ತೆಗೆಯಿರಿ,
ಕದಲಾರತಿಯನೇ ಎತ್ತಿ ದೃಷ್ಟಿ ತೆಗೆಯಿರಿ!

ಮುತ್ತು ಮುತ್ತನು ಜೋಡಿ ಮಾಡಿ ಮಣಿಯ ಹೆಣೆಯಿರಿ!
ಅದರ ಮೇಲೆ ಕುಳ್ಳಿರಿಸಿ ಕರವ ಮುಗಿಯಿರಿ!

ಹಣೆಗೆ ಚೆಂದದಿ ತಿಲಕವಿಟ್ಟು ಚಂದನ ಹಚ್ಚಿರಿ!
ಬಟ್ಟ ಮುತ್ತಿನ ಪದಕ ಹಾರವ ಕೊರಳಿಗ್ಹಾಕಿರಿ!

ಅಂಗನೆಯರೆಲ್ಲ ಸೇರಿ ಕೃಷ್ಣಗೆ ಚಿನ್ನದಾರುತಿ ಎತ್ತಿರಿ!
ನಗು ಮೊಗದ ಯಾದವ ಕಂದಗೆ ಹೂ ಮಳೆಗೆರೆಯಿರಿ!

ಭರಭರನೇ ಮೃಷ್ಟಾನ್ನ ಮಾಡಿ ಹೇಮಗಿರೀಶನ ಕರೆಯಿರಿ,
ರುಚಿಯಾದ ನೈವೇದ್ಯ ಇಟ್ಟು ಕೃಷ್ಣನ ವರವ ಬೇಡಿರಿ!

# ವಿದ್ಯಾರ್ಥಿ ದೆಸೆಯಿಂದಲೇ ಸಹಕಾರಿ ರಂಗದ ಬಗ್ಗೆ ಅಸಕ್ತಿ ಮುಖ್ಯ

## ಜಿಲ್ಲಾ ಸಹಕಾರ ಒಕ್ಕೂಟದಿಂದ ಜಿಲ್ಲಾ ಮಟ್ಟದ ಚರ್ಚಾ ಹಾಗೂ ಪ್ರಬಂಧ ಸ್ಪರ್ಧೆ ಆಯೋಜನೆ: ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್ ಕರೆ

ಚಾಮರಾಜನಗರ, ಸಹಕಾರ ಕ್ಷೇತ್ರದ ಬೆಳವಣ ಗೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಚಿಕ್ಕ ವಯಸ್ಸಿನಿಂದಲೇ ಸಹಕಾರ ಕ್ಷೇತ್ರದ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಸಲುವಾಗಿ ನಮ್ಮ ಸರ್ಕಾರ ಈಗಾಗಲೇ ಪಠ್ಯದಲ್ಲಿ ಸಹಕಾರ ಕ್ಷೇತ್ರದ ವಿಚಾರವನ್ನು ಸೇರ್ಪಡೆ ಮಾಡಲು ಮುಂದಾಗಿದೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರು ಆದ ಚಾಮುಲ್ ನಿರ್ದೇಶಕ ಎಚ್. ಎಸ್. ನಂಜುಂಡಪ್ರಸಾದ್ ತಿಳಿಸಿದರು.

ನಗರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಂಡಲ, ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಹಾಗೂ ಸರ್ಕಾರಿ ಪದವಿ ಕಾಲೇಜು ಸಹಯೋಗದಲ್ಲಿ ನಡೆದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಚರ್ಚಾಸ್ಪರ್ಧೆ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಹಕಾರ ಚಳವಳಿಗೆ ನೂರು ವರ್ಷಗಳ ಇತಿಹಾಸವಿದೆ. ಕರ್ನಾಟಕದಲ್ಲಿ ಸಹಕಾರ ಸಂಘಗಳನ್ನು ಉತ್ತರ ಕರ್ನಾಟಕ ಭಾಗದ ಗದಗನಲ್ಲಿ ಸಿದ್ದೇನಗೌಡ ಪಾಟೀಲ್ ಸ್ಥಾಪನೆ ಮಾಡಿದ್ದರು. ರೈತರು ಮತ್ತು ಬಡ ಮತ್ತು ಮಧ್ಯಮ ವರ್ಗಗಳ ಅಭಿವೃದ್ಧಿಗೆ ಪೂರಕವಾಗಿರುವ ಸಹಕಾರಿ ಕ್ಷೇತ್ರವನ್ನು ಮತ್ತಷ್ಟು ಬಲಗೊಳಿಸುವ ಮೂಲಕ ದೇಶಧ ಪ್ರಗತಿಯನ್ನು ಕಾರಣ ಬೇಕಾಗಿದೆ ಎಂದರು.



ಎಲ್ಲಾ ವಿಭಾಗ ಳಲ್ಲಿ ಸಹಕಾರ ಕ್ಷೇತ್ರದ ಮುನ್ನಡೆಯುತ್ತಿದೆ. ಸಹಕಾರ ಸಂಘಗಳು ಇತರೇ ಕಾರ್ಪೋರೇಟ್ ಕಂಪನಿಗಳಿಗೆ ಪೈಪೋಟಿ ನಿಡುವ ನಿಟ್ಟಿನಲ್ಲಿ ಬೃಹತ ಕಾರವಾಗಿ ಬೆಳೆದು ನಿಂತಿನೆ. ನಮ್ಮ ಕೆಎಂಎಫ್, ನಂದಿನಿ ಬ್ರಾಂಡ್ ಕಾರಣವಾಗಿದೆ.

ಈ ನಿಟ್ಟಿನಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಸಹಕಾರ ಕ್ಷೇತ್ರಗಳ ಪ್ರಾಮುಖ್ಯತೆ ಮತ್ತು ಅವುಗಳ ಬಲವರ್ಧನೆ ಬಗ್ಗೆ ಒತ್ತು ನೀಡಿ, ಇಂಥ ಚರ್ಚೆ ಹಾಗೂ ಪ್ರಬಂದ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿದೆ. ಇದ ರಿಂದ ವಿದ್ಯಾರ್ಥಿಗ ಳಿಗೆ ಈ ಕ್ಷೇತ್ರದ ಬಗ್ಗೆ ಹೆಚ್ಚು ಅಸಕ್ತಿ ಮೂಡಲಿದೆ ಎಂದು ಹೇಳಿದರು. ಸಹಕಾರ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಶಿವಕುಮಾರ್ ಮಾತನಾಡಿ, ಭಾರತ ದೇಶದ ರೈತಾಪಿ ವರ್ಗವನ್ನು ಹೆಚ್ಚು ಹೊಂದಿರುವ ಅಭಿವೃದ್ಧಿ ಹೊಂದಿದಿರುವ ದೇಶ ವಾಗಿದೆ. ಸಹಕಾರ ಕ್ಷೇತ್ರದ ಮೂಲಕ ರೈತರ ಹಾಗೂ ಬಡ ವರ್ಗದವ ಪ್ರಗತಿಗೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ. ಸಹಕಾರಿ ಸಂಘಗಳ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ, ಕೃಷಿ ಉಪಕರಣದ ಮಾರಾಟ , ಹಾಲು ಉತ್ಪಾದಕರ ಸಹಕಾರ ಸಂಘ ಸೇರಿದಂತೆ ಬಹಳಷ್ಟು ಸಹಕಾರ ಸಂಘಗಳು ನಮ್ಮ ವ್ಯಾಪ್ತಿಯಲ್ಲಿವೆ. ಅವುಗಳ ಕಾರ್ಯವ್ಯಾಪ್ತಿ ವಿಸ್ತಾರಗೊಳ್ಳುವ ಮೂಲಕ ಕೋಟಿ ಕೋಟಿ ರೂ.ಗಳ ವಹಿವಾಟು ನಡೆಸುತ್ತಿದ್ದೆ. ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡುವುದೇ ಸಹಕಾರವಾಗಿದೆ ಎಂದು ತಿಳಿಸಿದರು. ಒಕ್ಕುಟದ ನೋಡಲ್ ಅಧಿಕಾರಿ ಶಿವಕುಮಾರ್, ಉಪನ್ಯಾಸಕ ನಂದೀಶ್ ತೀರ್ಪುಗಾರರಾಗಿದ್ದರು.

ಒಕ್ಕೂಟ ನಿರ್ದೇಶಕರಾದ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ. ಬಸವಣ್ಣ, ಮಾಜಿ ಅಧ್ಯಕ್ಷ ಮಲೆಯೂರು ನಾಗರಾಜು, ಕಾಲೇಜಿನ ಪ್ರಾಂಶುಪಾಲೆ ಅಶ್ವಿನಿ, ಉಪನ್ಯಾಸಕ ಲಿಂಗ ಕೆಂಡಗಣ್ಣ, ವಿದ್ಯಾರ್ಥಿಗಳು ಶಿಕ್ಷಕರು ಉಪಸ್ಥಿತರಿದ್ದರು.

### ಪ್ರಬಂಧ ಸ್ಪರ್ಧೆ ವಿಭಾಗದಲ್ಲಿ

**ಗುಂಡ್ಲುಪೇಟೆ ಅದರ್ಶ ವಿದ್ಯಾಲೆಯ ದಸ ವಿದ್ಯಾರ್ಥಿ ಸುರಕ್ಷಾ ಪ್ರಥಮ ಸ್ಥಾನ, ಗುಂಡ್ಲುಪೇಟೆ ಸರ್ಕಾರಿ ಶಾಲೆಯ ಅನುಷಾ ದ್ವಿತೀಯ ಸ್ಥಾನ ಹಾಗೂ ಚಾ.ನಗರ ತಾಲೂಕಿನ ಮಂಗಲ ಸರ್ಕಾರಿ ಪ್ರೌಢಶಾಲೆಯ ಹರ್ಷಿತಾ ತೃತೀಯ ಸ್ಥಾನವನ್ನು ಹಾಗೂ ಗುಂಡ್ಲುಪೇಟೆ ತಾಲೂಕಿನ ಭೀಮನಬೀಡು ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಮಮತ ಸಮಾಧಾನ ಬಹುಮಾನ ಪಡೆದುಕೊಂಡರು.**

### ಚರ್ಚಾ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ

**ಚಾ.ನಗರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕಾವ್ಯ (ಪ್ರಥಮ ) ಯಳಂದೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ವಿದ್ಯಾ (ದ್ವಿತಿಯ) ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕುದೇರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ರಮ್ಯ ( ತೃತೀಯ) ಹಾಗೂ ಚಾ.ನಗರ ಜೆಎಸ್ಎಸ್ ಕಾಲೇಜಿನ ಚಿಂಟು ಸಮಾಧಾನ ಬಹುಮಾನವನು ಪಡೆದುಕೊಂಡರು.**

## 2ರಂದು ರಾಜ್ಯಮಟ್ಟದ ನೆಟ್ ಬಾಲ್ ಪಂದ್ಯಾವಳಿ

ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ನೆಟ್ ಬಾಲ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯದಲ್ಲಿ 14 ಮತ್ತು 17 ವರ್ಷ ವಯೋಮಿತಿಯ ಬಾಲಕ ಬಾಲಕಿಯರ ರಾಜ್ಯಮಟ್ಟದ ನೆಟ್ ಬಾಲ್ ಪಂದ್ಯಾವಳಿಯು ಡಿಸೆಂಬರ್ 12 ರಿಂದ 14 ರವರೆಗೆ ನಡೆಯಲಿದ್ದು, ಇದರ ಉದ್ಘಾಟನಾ ಸಮಾರಂಭವು ಡಿಸೆಂಬರ್ 12ರಂದು ಮಧ್ಯಾಹ್ನ 3 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರಿಡಾಂಗಣದಲ್ಲಿ ನಡೆಯಲಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಸಿ. ಮಧುಬಂಗಾರಪ್ಪ ಘನ ಉಪಸ್ಥಿತಿ ವಹಿಸುವರು. ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಧ್ವಜಾರೋಹಣ ನೆರವೇರಿಸುವರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ತಂಡಗಳ ಪರಿಚಯ ಮಾಡಿಕೊಡುವರು. ಶಾಸಕರಾದ ಹೆಚ್.ಎಂ. ಗಣೇಶ್ ಪ್ರಸಾದ್ ಕ್ರೀಡಾಧಿಕಾರಿಗಳ ಪರಿಚಯ ಮಾಡಿಕೊಡುವರು. ಶಾಸಕರಾದ ಎಂ.ಆರ್. ಮಂಜುನಾಥ್ ಕ್ರೀಡಾ ವಂದನೆ ಸ್ವೀಕರಿಸುವರು.

ಶಾಸಕರಾದ ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು. ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ (ಮುನ್ನ) ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಹಾಗೂ ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

## ಕೌಟಿಲ್ಯದಿಂದ ಕಿರಿಯರ ಕೀರ್ತಿಗೆ ಹಿರಿಯರ ಸ್ಫೂರ್ತಿ

ಮೈಸೂರು: ಕನಕದಾಸ ನಗರದಲ್ಲಿನ ಕೌಟಿಲ್ಯ ವಿದ್ಯಾಲಯದವತಿಯಿಂದ ಡಿ.13ರ ಬೆಳಗ್ಗೆ 9ಕ್ಕೆ ಕನಾಟಕ ರಾಜ್ಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ವಿದ್ಯಾರ್ಥಿಗಳಿಗಾಗಿ ಕಿರಿಯರ ಕೀರ್ತಿಗೆ ಹಿರಿಯರ ಸ್ಫೂರ್ತಿ ಕಾರ್ಯಕ್ರಮ ಆಯೋ ಜಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ. ಜಯಶ್ರೀ ಮುರಳೀಧರ್ ತಿಳಿಸಿದರು.

ನಗರದಲ್ಲಿ ಸುದ್ದಿ ಗಾರರೊಡನೆ ಮಾತ ನಾಡಿ, ಕೈಗಾರಿಕೋದ್ಯಮಿ ಡಾ.ಎಂ. ಜಗನ್ನಾಥ್ ಶೆಣೈ, ಆರ್.ವಿ. ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ರಾಮ್‌ಕುಮಾರ್ ಕಕನಿ ಅತಿಥಿಗಳಾಗಿರುವರು. ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಟಿ. ಬಾಬು ಅಧ್ಯಕ್ಷತೆ ವಹಿಸುವರು. ಈ ಕಾರ್ಯಕ್ರಮದಲ್ಲಿ ಹಿರಿಯರು ತಮ್ಮ ಮಕ್ಕಳೊಂದಿಗೆ ಹೆಜ್ಜೆ ಹಾಕುವುದು ವಿಶೇಷ ಎಂದರು.

ಮಧ್ಯಾಹ್ನ 3ಕ್ಕೆ ಶಾಲಾ ವಾರ್ಷಿಕೋತ್ಸವ ನಡೆಯಲಿದೆ. ಪ್ರಾದೇಶಿಕ ಆಯುಕ್ತ ನಿತೇಶ್ ಪಾಟಿಲ್, ಪರಿಸರ ವಾದಿ ರೇವತಿ ಕಾಮತ್, ಮಾಜಿ ಎಂಎಲ್ಸಿ ಅಶೋಕ್ ಖೇಣಿ, ಆರ್.ವಿ. ಡೆಂಟಲ್ ಕಾಲೇಜಿನ ಅಧ್ಯಕ್ಷ ಎಂ.ಎಸ್. ಪ್ರಕಾಶ್ ಬಾಬು ಅತಿಥಿಗಳಾಗಿರುವರು. ಸಂಸ್ಥೆಯ ಅಧ್ಯಕ್ಷ ಟಿ. ಬಾಬು ಅಧ್ಯಕ್ಷತೆ ವಹಿಸುವರೆಂದರು ತಿಳಿಸಿದರು.

ಇದೇ ವೇಳೆ ಈ ವಿದ್ಯಾ ಸಂಸ್ಥೆಯಲ್ಲಿ ಪ್ರಶಂಸನೀಯ ಸೇವೆ ಸಲ್ಲಿಸಿದ ಶಿಕ್ಷಕ ಹಾಗೂ ಶಿಕ್ಷಕೇತರರಿಗೆ ಕೌಟಿಲ್ಯ ವಿದ್ಯಾರತ್ನ ಪ್ರಶಸ್ತಿ ಪ್ರದಾನ, ಕಳೆದ ಸಾಲಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಕಾರ್ಯಕ್ರಮ ಸಹಾ ನಡೆಯಲಿದೆ ಎಂದರು. ಮೊಹಮ್ಮದ್ ಗೌಸ್, ಸಮ್ಯುದ್ವತ ಇದ್ದರು.



ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ವಚನ ಕಲ್ಯಾಣ ಮಹೋತ್ಸವ



ಗುಂಡ್ಲುಪೇಟೆ: ಮೂಡುಗೂರು ಶ್ರೀ ಉದ್ದಾನೇಶ್ವರ ವಿರಕ್ತಮಠದಲ್ಲಿ " ವಚನ ಕಲ್ಯಾಣ ಮಹೋತ್ಸವ " ಬಸವಣ್ಣನವರ ಆಶಯದಂತೆ ಅಷ್ಟಾವರಣದ ಕ್ರಮದಲ್ಲಿ ಪೂಜ್ಯ ಇಮ್ಮಡಿ ಉದ್ದಾನಸ್ವಾಮಿಗಳ ಉಪಸ್ಥಿತಿಯಲ್ಲಿ ನಡೆಯಿತು.

ತಾಲ್ಲೂಕಿನ ಶ್ಯಾನಾಡ್ರಹಳ್ಳಿಯ ವಧು ವರರಾದ ಚೇತನ್ ಹಾಗೂ ನಂದಿನಿ ತಮ್ಮ ಕುಟುಂಬಗಳ ಸದಸ್ಯರು ,ಸ್ನೇಹಿತರು, ಗುರು ಹಿರಿಯರುಗಳ ಸಮ್ಮುಖದಲ್ಲಿ ದಂಪತಿಗಳಾದರು. ವಚನ ಸಾಹಿತ್ಯದ ಮೂಲಕ ನಡೆಯುವ ಈ ವಿವಾಹದ ನಿರೂಪಣೆ ಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶೈಲಕುಮಾರ್ ನಡೆಸಿದರೆ, ಕಟ್ನವಾಡಿಯ ಭಜನಾ ತಂಡದ ಮಲೆಮಾದಪ್ಪ,ರಮೇಶ್, ದೇವಪ್ಪನವರು ವಚನಗಳಿಗೆ ಧ್ವನಿಯಾದರು. ವೀರಶೈವ ಲಿಂಗಾಯತ ಮಹಾಸಭಾದ ನಿರ್ದೇಶಕರಾದ ಎಸ್,ಎಂ. ಮಲ್ಲಿಕಾರ್ಜುನಪ್ಪ, ಕಬ್ಬಹಳ್ಳಿ ಕೆ,ಎಸ್.ಮಹೇಶ್, ಮೃತ್ಯುಂಜಯಪ್ಪ, ಪೂಜ್ಯರಾದ ರಾಜೇಂದ್ರಸ್ವಾಮಿಗಳು, ಶಿವಪ್ಪದೇವರು ಕಬ್ಬಹಳ್ಳಿ ಗುರುಸಿದ್ದಸ್ವಾಮಿಗಳು ಉಪಸ್ಥಿತರಿದ್ದರು ಈ ಕಾರ್ಯಕ್ರಮದಲ್ಲಿ ಹೂರದ ಹಳ್ಳಿ ಪ್ರಸಾದ್ ಸ್ವಾಗತಿಸಿದರು ಸರಳ ಸುಂದರವಾದ ಈ ವಚನ ಮಾಂಗಲ್ಯ ಶ್ರೀ ಮಠದಲ್ಲಿ ನಡೆದ 8 ನೆಯದಾಗಿದೆ. ಇಂತಹ ವಿವಾಹಗಳು ಜನರಿಗೆ ಆರ್ಥಿಕ ಹೊರೆತರದೆ ಆಧ್ಯಾತ್ಮಿಕ ಬೆಳಕು ತರುತ್ತದೆಂದು ಇಮ್ಮಡಿ ಉದ್ದಾನಸ್ವಾಮಿಗಳು ತಿಳಿಸಿದರು.

## ಮೊರಾರ್ಜಿ ದೇಸಾಯಿ ಶಾಲೆಗೆ ಪ್ರಶಸ್ತಿ



**ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಸ್ಪರ್ಧೆ**

ಗುಂಡ್ಲುಪೇಟೆ: ತಾಲ್ಲೂಕಿನ ತೆರಕಣಾಂಬಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳು ಇದೇ 10ರಂದು ನಡೆದ ಹೋಬಳಿ ಮಟ್ಟದ ಪ್ರತಿಭಾಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಗಳಲ್ಲಿ ಜಯಗಳಿಸಿ ಸಮಗ್ರ ಪ್ರಶಸ್ತಿ ಗಳಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ನಡೆದ ಚರ್ಚಾಸ್ಪರ್ಧೆ,ಭಾಷಣ, ಆಶು ಭಾಷಣ, ನೃತ್ಯ, ಗಾಯನ ಸ್ಪರ್ಧೆಗಳಲ್ಲಿ ಜಯಶಾಲಿಗಳಾಗಿ ಮುಂದಿನ ಸುತ್ತಿಗೆಆಯ್ಕೆಆಗಿದ್ದಾರೆ.ಮಕ್ಕಳ ಈ ಸಾಧನೆಗೆ ಪ್ರಾಂಶುಪಾಲರಾದ ಮಹದೇವ ಪ್ರಸಾದ್ ಹಾಗೂ ಸಿಬ್ಬಂದಿವರ್ಗದವರು ಅಭಿನಂ ದಿಸಿದ್ದಾರೆ. ಕಾರ್ಯಕ್ರಮದಲ್ಲಿ ವನ್ಯಜೀವಿ ಛಾಯಾ ಗ್ರಾಹಕ ಆರ್ ಕೆ ಮಧು, ಡಾ॥ ಸರೋಜ, ವಿವಿಧ ಶಾಲೆಯ ಮುಖ್ಯಶಿಕ್ಷಕರು, ಶಿಕ್ಷಣ ಇಲಾಖೆಯ ಶಿಕ್ಷಕರು, ಸಿಬ್ಬಂದಿ ವರ್ಗದವರು, ಸಿಆರ್ ಪಿ ಶಿವಕುಮಾರ ರವರು ಹಾಗೂ ವಿವಿಧ ಶಾಲಾ ಮಕ್ಕಳು ಭಾಗವಹಿಸಿದ್ದರು.

**ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆ । ನಾಗರಿಕರ ಸಹಭಾಗಿತ್ವದಲ್ಲಿ ಕನ್ನಡ ಹಬ್ಬ, ಕೆ.ಶೇಷಾದ್ರಿ ಕರೆ**

# ರಾಮನಗರದಲ್ಲಿ ಡಿ.22ರಂದು ರೇಷ್ಮೆನಾಡ ಕನ್ನಡ ಹಬ್ಬ ಆಚರಣೆ

ರಾಮನಗರ: ಇದೇ ಡಿ.22ರ ಸೋಮವಾರ ನಗರಸಭೆವತಿಯಿಂದ "ರೇಷ್ಮೆನಾಡ ಕನ್ನಡ ಹಬ್ಬ" ಎಂಬ ಶೀರ್ಷಿಕೆಯಡಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಉದ್ಯಮಿಗಳು, ವ್ಯಾಪಾರಸ್ಥರು, ಸಂಘ–ಸಂಸ್ಥೆಗಳು ಹೀಗೆ ಸಮಾಜದ ಪ್ರತಿಯೊಬ್ಬರು ಈ ಹಬ್ಬದಲ್ಲಿ ಪಾಲ್ಗೊಳ್ಳಬೇಕು ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ನಗರದ ನಾಗರೀಕರಿಗೆ ಮನವಿ ಮಾಡಿದ್ದಾರೆ.

ನಗರಸಭೆಯ ಸಭಾಂಗಣದಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು. ನವೆಂಬರ್‌ನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಬೇಕಿತ್ತು. ಆದರೆ ಕಾರಣಾಂತರಗಳಿಂದ ಈಗ ಆಚರಿಸುತ್ತಿದ್ದೇವೆ. ನಗರ ವ್ಯಾಪ್ತಿಯ ಎಲ್ಲ ನಾಗರೀಕರ ಸಹಭಾಗಿತ್ವದಲ್ಲಿ ಈ ಹಬ್ಬವನ್ನು ಆಚರಿಸಲು ಉದ್ದೇಶಿಸದೆ. ಹೀಗಾಗಿ ಎಲ್ಲ ನಾಗರೀಕರು ತಮ್ಮ ತನು–ಮನ–ಧನ ಅರ್ಪಿಸಿ ಕನ್ನಡ ಹಬ್ಬವನ್ನು ಯಶಸ್ವಿಯಾಗಿ ನಡೆಸಬೇಕು ಎಂದು ಕರೆ ನೀಡಿದ ಅವರು, ಕನ್ನಡ ನಾಡು, ನುಡಿ, ಜಲದ ವಿಚಾರಗಳನ್ನು ಒಳಗೊಂಡಂತೆ ಈ ಹಬ್ಬದ ಆಚರಣೆ



ಇರಲಿದೆ ಎಂದರು.

**ಭುವನೇಶ್ವರಿ ಅಮ್ಮನವರ ಮೆರವಣಿಗೆ**

ಡಿ.22ರಂದು ಮಧ್ಯಾಹ್ನ 3 ಗಂಟೆ ವೇಳೆಗೆ ಕನ್ನಡ ತಾಯಿ ಭುವನೇಶ್ವರಿಯ ಮೂರ್ತಿಯ ಭವ್ಯ ಮೆರವಣಿಗೆ ಏರ್ಪಡಿಸಲಾಗಿದೆ. ನಗರದ ಮಿನಿ ವಿಧಾನಸೌಧದಿಂದ ಆರಂಭವಾಗುವ ಮೆರವಣಿಗೆ ಹಳೇ ಬಸ್ ನಿಲ್ದಾಣ, ಮುಖ್ಯ ರಸ್ತೆ, ಎಂ.ಜಿ.ರಸ್ತೆ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣವನ್ನು ತಲುಪಲಿದೆ. ಮೆರವಣಿಗೆಯಲ್ಲಿ ಜಾನಪದ ಕಲಾ ತಂಡಗಳು, ನಗರ ಸಭೆವತಿಯಿಂದ ಟ್ಯಾಬ್ಲೊಗಳ ಆಕರ್ಷಣೆ ಇರಲಿದೆ ಎಂದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆಯಲ್ಲಿ ರೇಷ್ಮೆನಾಡು ಕನ್ನಡ ಹಬ್ಬವನ್ನು ಆಚರಿಸಲಾಗುವುದು. ಹೆಸರಾಂತ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವರು. ಜಾತಿ, ಧರ್ಮ, ಪಕ್ಷಾತೀತವಾಗಿ ನಡೆಯುವ ಕನ್ನಡ ಹಬ್ಬಕ್ಕೆ ಗಣ್ಯರನ್ನು ಆಹ್ವಾನಿಸಲಾಗುವುದು ಎಂದು ಮಾಹಿತಿ ನೀಡಿದರು.

**ಸಿಂಗಾರಗೊಳ್ಳಲಿದೆ ರಾಮನಗರ**

ರೇಷ್ಮೆನಾಡ ಕನ್ನಡ ಹಬ್ಬದ ಅಂಗವಾಗಿ ನಗರವನ್ನು ವಿದ್ಯುತ್ ದೀಪಗಳು ಮತ್ತು ತಳಿರು ತೋರಣಗಳಿಂದ ಸಿಂಗರಿಸಲಾಗುವುದು. ಮಿನಿ ದಸೆಯ ಮಾದರಿಯಲ್ಲಿ ಸಿಂಗರಿಸಲು ಉದ್ದೇಶಿಸಲಾಗಿದೆ. ನಾಗರೀಕರು ಸಹ ತಮ್ಮ ಮನೆ, ಅಂಗಡಿಗಳ ಕಟ್ಟಡಗಳನ್ನು ಸಿಂಗರಿಸಿ, ಇಡೀ ನಗರವನ್ನು ಕನ್ನಡಮಯವನ್ನಾಗಿಸಿ, ಮನೆಯಲ್ಲಿ ನಡೆಯುವ ಹಬ್ಬದಂತೆ ನಾಡ ಹಬ್ಬವನ್ನು ಆಚರಿಸಿ ಎಂದು ನಗರದ ಸಮಸ್ತ ನಾಗರೀಕರಿಗೆ ಅವರು ಮನವಿ ಮಾಡಿದರು. ನಗರದ ಪ್ರಮುಖರಾದ ಕೆ.ವಿ.ಉಮೇಶ್, ಆರ್.ವಿ.ಸುರೇಶ್, ಲಕ್ಷ್ಮಣ್, ಪಿ.ಶಿವಾನಂದ, ಉದಯ್, ಪ್ರದೀಪ್, ವೆಂಕಟೇಶ್, ಹರೀಶ್‌ಬಾಲು, ರಾ.ಶಿ.ಬಸವರಾಜ್, ನಾಗರಾಜ್ (ಬೆಂಕಿ) ಮುಂತಾದವರು ತಮ್ಮ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ವ್ಯಕ್ತಪಡಿಸಿದರು. ಬಿ.ಎಂ.ಶ್ರೀನಿವಾಸ್ ಮತ್ತು ಲಕ್ಷ್ಮಣ್ ಅವರು ತಮ್ಮ ವೈಯಕ್ತಿಕವಾಗಿ ಆರ್ಥಿಕ ಸಹಕಾರವನ್ನು ಘೋಷಿಸಿದರು.

ವೇದಿಕೆಯಲ್ಲಿ ನಗರಸಭಾ ಸದಸ್ಯರುಗಳಾದ ಸೋಮಶೇಖರ್ (ಮಣಿ), ಗ್ಯಾಬ್ರಿಯಲ್, ಗೋವಿಂದರಾಜು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

### ಸಿ.ಎಂ.ಲಿಂಗಪ್ಪಗೆ ಪೌರ ಸನ್ಮಾನ

ರಾಮನಗರ ಕ್ಷೇತ್ರದ ಶಾಸಕರಾಗಿ, ವಿಧಾನಪರಿಷತ್ ಸದಸ್ಯರಾಗಿ, 1968ರಿಂದ ರಾಜಕೀಯ ಕ್ಷೇತ್ರದಲ್ಲಿ ಜನಸೇವೆ ಮಾಡಿದ 84 ವರ್ಷದ ಸಿ.ಎಂ.ಲಿಂಗಪ್ಪರವರಿಗೆ ಪೌರ ಸನ್ಮಾನಕ್ಕೆ ನಗರಸಭೆಯ ಕೌನ್ಸಿಲ್ ಸಭೆ ನಿರ್ಣಯಿಸಿದೆ. ಶಾಸಕರಾಗಿ ಸಿ.ಎಂ.ಲಿಂಗಪ್ಪ ಅವರು ಸುಮಾರು 2000ಕ್ಕೂ ಹೆಚ್ಚು ಆಶ್ರಯ ನಿವೇಶನಗಳನ್ನು ವಿತರಿಸಿದ್ದಾರೆ. ಮಿನಿ ವಿಧಾನಸೌಧ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ. ಹೀಗೆ ಹತ್ತು ಹಲವು ಅತ್ಯುತ್ತಮ ಯೋಜನೆಗಳನ್ನು ಯಶಸ್ವಿಯಾಗಿಸಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಪೌರ ಸನ್ಮಾನ ಮಾಡಲಾಗುತ್ತಿದೆ ಎಂದರು.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸಹ ಗುರುತಿಸಿ ಗೌರವಿಸಿ ಪ್ರಶಸ್ತಿ ನೀಡಲಾಗುವುದು ಎಂದು ತಿಳಿಸಿದರು.

# ಸೌರಶಕ್ತಿ ಸಂಸ್ಥೆಗೆ ಟೊಯೋಟಾ ಮಿರೈ ಹಸ್ತಾಂತರ

ರಾಮನಗರ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಕಂಪನಿ ತಯಾರಿಸಿರುವ ಹೈಡ್ರೋಜನ್ ಇಂಧನ ಕೋಶ ಹೊಂದಿರುವ ವಿದ್ಯುತ್ ಚಾಲಿತ ಟೊಯೋಟಾ ಮಿರೈ ಕಾರನ್ನು ನವದೆಹಲಿಯಲ್ಲಿರುವ ರಾಷ್ಟ್ರೀಯ ಸೌರಶಕ್ತಿ ಸಂಸ್ಥೆಗೆ ಹಸ್ತಾಂತರಿಸಿದೆ.

ನವದೆಹಲಿಯ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಅಡಿಯಲ್ಲಿ ಬರುವ ರಾಷ್ಟ್ರೀಯ ಸೌರಶಕ್ತಿ ಸಂಸ್ಥೆ ಜೊತೆ ಇದೇ ವೇಳೆ ಟೊಯೋಟಾ ಕಿರ್ಲೋರ್ ಸ್ಕರ್ ಮೋಟಾರ್ ಕಂಪನಿ ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಿಕೊಂಡಿದೆ. ಭಾರತದ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಮತ್ತು ದೀರ್ಘಕಾಲೀನ ಇಂಗಾಲ-ತಟಸ್ಥತೆಯ ಮಹತ್ವಾಕಾಂಕ್ಷೆಗಳಿಗೆ ಗಮನಾರ್ಹ ಉತ್ತೇಜನ ವನ್ನು ನೀಡಲಿದೆ ಎಂದು ಹೇಳಲಾಗಿದೆ. ಟೊಯೋಟಾ ಮಿರೈ ವಾಹನ ನಿಜವಾದ ಭಾರತೀಯ ಚಾಲನೆ ಮತ್ತು ಹವಾಮಾನ ಪರಿಸ್ಥಿತಿಗಳಲ್ಲಿ ಪರೀಕ್ಷಿಸಲಾಗುತ್ತದೆ ಎಂದರು.



**ಪರೀಕ್ಷೆಗಾಗಿ ಹಸ್ತಾಂತರ – ಪ್ರಹ್ಲಾದ ಜೋಶಿ**

ವಿನಿಮಯ ಸಮಾರಂಭವನ್ನುದ್ದೇಶಿಸಿ ಭಾರತ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಮತ್ತು ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವರಾದ ಪ್ರಹ್ಲಾದ್ ಜೋಶಿ ಮಾತನಾಡಿ ಶುದ್ಧ ಇಂಧನದತ್ತ ಭಾರತದ ನಡೆ ಈಗ ಕೇವಲ ಯೋಜನೆಯಾಗಿ ಉಳಿದಿಲ್ಲ, ಬದಲಾಗಿ ಕಾರ್ಯರೂಪಕ್ಕೆ ಬರುತ್ತಿದೆ. ರಾಷ್ಟ್ರೀಯ ಸೌರಶಕ್ತಿ ಸಂಸ್ಥೆ ಮತ್ತು ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ನಡುವಿನ ಒಪ್ಪಂದ, ಪರೀಕ್ಷೆಗಾಗಿ ಹೈಡ್ರೋಜನ್ ಇಂಧನ-ಕೋಶ ವಾಹನವನ್ನು ಹಸ್ತಾಂತರಿಸುವುದರ ಜೊತೆಗೆ, ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್‌ನಲ್ಲಿ ಒಂದು ಪ್ರಮುಖ ಹೆಜ್ಜೆಯನ್ನು ಗುರುತಿಸುತ್ತದೆ ಎಂದರು. ಈ ವೇಳೆ ನೂತನ ಮತ್ತು ನವೀಕರಿಸಬಹುದಾದ ಇಂಧನ ಮತ್ತು ವಿದ್ಯುತ್ ಖಾತೆ ರಾಜ್ಯ ಸಚಿವರಾದ ಶ್ರೀಪಾದ ಯೆಸ್ಸೊ ನಾಯಕ್, ನೂತನ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ, ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್‌ನ ಮಿಷನ್ ನಿರ್ದೇಶಕರಾದ ಅಭಯ್ ಬಕ್ರೆ, ಮತ್ತು ರಾಷ್ಟ್ರೀಯ ಸೌರಶಕ್ತಿ ಸಂಸ್ಥೆಯ ಮಹಾನಿರ್ದೇಶಕ ಡಾ. ಮೊಹಮ್ಮದ್ ರಿಹಾನ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡದಲ್ಲಿಯೇ ವ್ಯವಹರಿಸಿ ಗ್ರಾಹಕರ ವಿಶ್ವಾಸಗಳಿಸಿ

ಚಾಮರಾಜನಗರ, ಬ್ಯಾಂಕುಗಳಲ್ಲಿ ಸ್ಥಳೀಯ ಕನ್ನಡ ಭಾಷೆಯಲ್ಲಿ ವ್ಯವಹರಿಸಿದಾಗ ಗ್ರಾಹಕರು ಹಾಗೂ ಅಧಿಕಾರಿ ಸಿಬ್ಬಂದಿ ನಡುವಿನ ವಿಶ್ವಾಸಾರ್ಹತೆ ಹೆಚ್ಚಲಿದೆ. ಹೀಗಾಗಿ ಕನ್ನಡ ಬಾರದ ಅಧಿಕಾರಿ ಸಿಬ್ಬಂದಿ ಕನ್ನಡ ಭಾಷೆ ಕಲಿಯುವ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆಯ ಕೆಡಿಪಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಲೀಡ್ ಬ್ಯಾಂಕ್ (ಮಾರ್ಗದರ್ಶಿ ಬ್ಯಾಂಕ್) ಸಹಯೋಗದೊಂದಿಗೆ ಬ್ಯಾಂಕ್ ಅಧಿಕಾರಿ ಸಿಬ್ಬಂದಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಕನ್ನಡ ಕಲಿಕೆ ತರಬೇತಿ ಶಿಬಿರವನ್ನು ಬಿಳಿ ಬೋರ್ಡ್ ಮೇಲೆ ಕನ್ನಡ ಕಲಿಯಿರಿ ಎಂದು ಬರೆಯುವ ಮೂಲಕ ಉದ್ಘಾಟಿಸಿದರು. ಯಾವುದೇ ಸಂಸ್ಥೆ, ಕಚೇರಿಗಳಲ್ಲಿ ಸಾರ್ವಜನಿಕರೊಂದಿಗೆ ಸಂವಹನ ನಡೆಸಲು ಭಾಷೆ ಪರಿಣಾಮಕಾರಿ ಪಾತ್ರ ವಹಿಸಲಿದೆ. ಸ್ಥಳೀಯ ಭಾಷೆಗಳಲ್ಲಿ ವ್ಯವಹರಿಸಿದಾಗ ಅಧಿಕಾರಿ ಸಿಬ್ಬಂದಿ ಸಾರ್ವಜನಿಕರು ಗ್ರಾಹಕರ ನಡುವೆ ವಿಶ್ವಾಸ, ನಂಬಿಕೆ ವೃದ್ಧಿಯಾಗಲಿದೆ. ಹೀಗಾಗಿ ದಿನನಿತ್ಯದ ವ್ಯವಹಾರಗಳಲ್ಲಿ ಕನ್ನಡ ಭಾಷೆಗೆ ಪ್ರಾಧನ್ಯತೆ ನೀಡಬೇಕು



ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಬ್ಯಾಂಕುಗಳಲ್ಲಿ ಕನ್ನಡ ಬಾರದ ಅಧಿಕಾರಿಗಳು ಸಿಬ್ಬಂದಿಯಿಂದ ವ್ಯವಹರಿಸಲು ತೊಡಕಾಗುತ್ತಿದೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬರುತ್ತಿತ್ತು. ಅನೇಕ ಸಾರ್ವಜನಿಕ, ರೈತ ಮುಖಂಡರ ಸಭೆಗಳಲ್ಲಿಯೂ ಬ್ಯಾಂಕ್ ಗಳಲ್ಲಿ ಗ್ರಾಹಕರೊಂದಿಗೆ ಕನ್ನಡದಲ್ಲಿ ವ್ಯವಹರಿಸಬೇಕು ಎಂಬ ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಹೀಗಾಗಿ ಕನ್ನಡ ಭಾಷೆ ತಿಳಿಯದ ಅಧಿಕಾರಿಗಳಿಗೆ ಜಿಲ್ಲಾಡಳಿತವು ಶಿಕ್ಷಣ ಇಲಾಖೆ ಹಾಗೂ ಲೀಡ್ ಬ್ಯಾಂಕ್ ಸಹಕಾರದೊಂದಿಗೆ ಕನ್ನಡ ಕಲಿಸುವ ವಿನೂತನ ಕಾರ್ಯಕ್ರಮವನ್ನು ಆರಂಭಿಸಿದೆ ಎಂದರು.

ಸ್ಥಳೀಯ ಭಾಷೆಯಲ್ಲಿ ವ್ಯವಹರಿಸಿದಾಗ ಗ್ರಾಹಕರು ಹಾಗೂ ಅಧಿಕಾರಿ ಸಿಬ್ಬಂದಿ ಮಧ್ಯೆ ಗೊಂದಲಗಳು ಏರ್ಪಡುವುದು ತಪ್ಪಲಿದೆ. ಕನ್ನಡ ಭಾಷೆಯನ್ನೇ ಬಳಸಿದಾಗ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗಲಿದೆ. ಸ್ಥಳೀಯ ಗ್ರಾಹಕರು ಪೂರ್ಣಪ್ರಮಾಣದಲ್ಲಿ ಎಲ್ಲ ಮಾಹಿತಿಯನ್ನು ತಿಳಿದುಕೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿದರು.

ಕನ್ನಡ ಬಾರದಿರುವವರಿಗೆ ಕನ್ನಡ ಕಲಿಸುವ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುವುದು. ಸರಳವಾಗಿ ಸಂಭಾಷಿಸಲು ಸೂಕ್ತ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳು ನೀಡಲಿದ್ದಾರೆ. ಕಾರ್ಯನಿರ್ವಹಣೆಯಲ್ಲಿ ಸುಗಮ ಹಾಗೂ ದಕ್ಷತೆಗೆ ಪೂರಕವಾಗಿರುವ ಎಲ್ಲ ನೆರವು ಸಹಕಾರವನ್ನು ಜಿಲ್ಲಾಡಳಿತ ಒದಗಿಸಲು ಸಿದ್ದವಿದೆ. ಕಲಿಕಾ ತರಬೇತಿ ಶಿಬಿರದ ಪ್ರಯೋಜನವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಸುರೇಖಾ, ಶಾಲಾ ಶಿಕ್ಷಣ ಇಲಾಖೆ ಉನಿರ್ದೇಶಕರಾದ ಚಂದ್ರಕಾಂತ್ ಪಾಟೀಲ್, ಜಿಲ್ಲಾ ಸಮಾಲೋಚಕರಾದ ಮಧು ಕೇಶ್, ಇನ್ನಿತರರು ಉಪಸ್ಥಿತರಿದ್ದರು.

# ಸಭೆಗೆ ಗೈರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ

## ದಲಿತ ಮುಖಂಡರ ಒತ್ತಾಯ | ಎಸ್‌ಸಿ ಎಸ್‌ಟಿ ಹಿತರಕ್ಷಣಾ ಸಮಿತಿ ಸಭೆ

ಗುಂಡ್ಲುಪೇಟೆ: ಎಸ್ಸಿ,ಎಸ್ಟಿ ಹಿತರಕ್ಷಣಾ ಸಭೆ ನಡೆದು ಒಂದು ವರ್ಷಗಳು ಕಳೆದಿದ್ದು ಸರ್ಕಾರದ ಆದೇಶದಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶಿಷ್ಟ ಜಾತಿ ಮತ್ತು ವರ್ಗದ ಸಭೆ ನಡೆಸುವಂತೆ ಹಾಗೂ ಸಭೆಗೆ ಗೈರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದಲಿತ ಮುಖಂಡರು ಒತ್ತಾಯಿಸಿದ್ದರು



ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ತಹಸೀಲ್ದಾರ್ ಎಂ.ಎಸ್.ತನ್ಮಯ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು ಎಸ್‌ಸಿ ಎಸ್‌ಟಿ ಹಿತರಕ್ಷಣಾ ಸಮಿತಿ ಸಭೆಯನ್ನು ತಾಲೂಕು ಮಟ್ಟದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿಲ್ಲ. ದಲಿತರು ಕೆಲಸ ಕಾರ್ಯಗಳನ್ನು ಬದಿಗಿಟ್ಟು ಸಭೆಗೆ ಬಂದರೂ ಅಧಿಕಾರಿಗಳು ಬಾರದಿರುವುದು ಬೇಸರದ ವಿಚಾರ. ಎಂದರು ಅಧಿಕಾರಿಗಳಿಗೆ ದಲಿತರ ಬಗ್ಗೆ ತಾತ್ಸಾರ ಮನೋಭಾವ ಇದ್ದಂತೆ ಕಾಣುತ್ತಿದ್ದೆ ಎಂದು ಆಕ್ರೋಶ ವ್ಯಕ್ತಪಡಿಸಿದರು

ಕಳೆದ ಬಾರಿ ನಡೆದ ಪರಿಶಿಷ್ಟ ಜಾತಿ ಮತ್ತು ವರ್ಗದ ಹಿತರಕ್ಷಣಾ ಸಭೆಗೆ ಗೈರು ಹಾಜರಿಯಾಗಿದ್ದ ಎಂಟು ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡಿರುವ ಮಾಹಿತಿ ಹಾಗೂ ಇಂದಿನ ಸಭೆಗೆ ಹಾಜರಾಗದ ಅಧಿಕಾರಿ ಗಳ ವಿರುದ್ಧ ನೋಟಿಸ್ ನೀಡುವಂತೆ ಒತ್ತಾಯಿ ಸಿದರು. ಇದಕ್ಕೆ ಉತ್ತರಿಸಿದ ತಹಸೀಲ್ದಾರ್ ತನ್ಮಯ್ ಕಳೆದ ಬಾರಿ ಗೈರಾದ ಅಧಿಕಾರಿಗಳು ನೋಟಿಸ್ ಗೆ ಉತ್ತರ ನೀಡಿದ್ದಾರೆ ಎಂದು ತಿಳಿಸಿದರು.

ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲು ಮಾಡಿ ಸಂಬಂಧ ಪಟ್ಟ ಇಲಾಖೆಯ ಕಾರ್ಯದರ್ಶಿಗಳಿಗೆ ವರದಿ ಸಲ್ಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಹಾಗೂ ತಾಲೂಕಿನಲ್ಲಿ ಜಾಗೃತಿ ಸಮಿತಿ ರಚನೆಯಾಗಬೇಕು ಎಂದು ವಕೀಲ ಕಾಂತರಾಜು ಒತ್ತಾಯಿಸಿದರು.

ಇದೇ ಸಂಧರ್ಭದಲ್ಲಿ ಇತ್ತೀಚಿಗೆ ನಿಧನರಾದ ಎಸ್ಸಿ ಎಸ್ಟಿ ಹಿತರಕ್ಷಣಾ ಸಮಿತಿಯ ಸದಸ್ಯರಾದ ರಾಘವಾಪುರ ಶ್ರೀನಿವಾಸ್ ಮತ್ತು ಸಿದ್ದಪ್ಪಾಜಿರವರಿಗೆ ಮೌನಾಚರಣೆ ಸಲ್ಲಿಸಲಾಯಿತು.

ವಕೀಲ ರಾಜೇಶ್ ರವರು ಮಾತನಾಡಿ ಆದಿ ಜಾಂಬವ ನಿಗಮದಿಂದ ವಕೀಲರ ಕಚೇರಿ ತೆರೆಯುವುದಕ್ಕೆ ಶಾಸಕರ ಕೋಟಾದಡಿ ಫಲಾನುಭವಿಯಾಗಿ ಆಯ್ಕೆಯಾಗಿದ್ದು ಒಂದೂವರೆ ವರ್ಷ ಕಳೆದರೂ ಲೀಡ್ ಬ್ಯಾಂಕ್ ಮತ್ತು ನಿಗಮದ ಅಧಿಕಾರಿಗಳ ನಿರ್ಲಕ್ಷತನದಿಂದ ಸಾಲ ದೊರೆಯದಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು ವಕೀಲರಿಗೆ ಹೀಗಾದರೆ ಸಾಮಾನ್ಯ ಜನಗಳ ಸ್ಥಿತಿ ಏನಾಗಬೇಕು ಎಂದು ಪ್ರಶ್ನಿಸಿದರು

ಸಭೆಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಸುರೇಖಾ, ತಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಷಣ್ಮುಗಂ, ಪುರಸಭೆ ಮುಖ್ಯಾಧಿಕಾರಿ ಶರವಣ, ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಅಲೀಂಪಾಷ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್, ತೋಟಗಾರಿಕೆ ಇಲಾಖೆಯ ಭಾಸ್ಕರ್, ಮೀನುಗಾರಿಕೆ ಸಹಾಯಕ ನಿರ್ದೇಶಕ ವಿವೇಕ್, ಪಿಎಸ್‌ಐ ಸಾಹೇಬಗೌಡ, ಮುಖಂಡರಾದ, ಸುಭಾಷ್ ಮಾಡ್ರಹಳ್ಳಿ, ನಂಜುಂಡ ಸ್ವಾಮಿ ಹುನಸಿಪುರ .ರಂಗಸ್ವಾಮಿ, ಅರ್ ಸೋಮಣ್ಣ, ಕಾಂತರಾಜು, ಎನ್. ಕುಮಾರ್, ಮುತ್ತಣ್ಣ, ಅರ್ ಡಿ.ಉಲ್ಲಾಸ್, ಶಂಕರ್, ವಕೀಲ ರಾಜೇಶ್, ಸಿದ್ದಯ್ಯ ಹಸಗೂಲಿ ಮಲ್ಲಿಕಾರ್ಜುನ, ಎನ್ ಕುಮಾರ್, ಗೋವಿಂದನಾಯಕ್, ಸುರೇಶ ನಾಯಕ.ರಮೇಶ್ ನಾಯಕ್, ಶ್ರೀನಿವಾಸ್ ನಾಯಕ. ಉಮೇಶ್, ಶಿವು, ಮಲ್ಲಿಕಾರ್ಜುನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಕುವೆಂಪು ಜನ್ಮದಿನಾಚರಣೆ ಪೂರ್ವಭಾವಿ ಸಭೆ

## ಅಧಿಕಾರಿಗಳ ಗೈರಿಗೆ ಕನ್ನಡ ಸಂಘಟನೆಗಳ ಮುಖಂಡರ ಆಕ್ರೋಶ



ಚಾಮರಾಜನಗರ, ರಾಷ್ಟಕವಿ ಕುವೆಂಪು ಜನ್ಮ ದಿನಾಚರಣೆ ಆಚರಣೆಯ ಬಗ್ಗೆ ಚರ್ಚಿಸಲು ಶುಕ್ರವಾರ ಅಪಾರ ಜಿಲ್ಲಾಧಿಕಾರಿ ಟಿ.ಜವರೇಗೌಡ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಕನ್ನಡ ಚಳವಳಿಗಾರರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜು ಅವರ ನಡುವೆ ಕೆಲಕಾಲ ಮಾತಿನ ಚಕಮಕಿ, ವಾಗ್ವಾದ ನಡೆದು ಸಭೆಯಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಯಿತು. . ಸಭೆ ಆರಂಭವಾಗುತ್ತಿದ್ದಂತೆ ಕನ್ನಡ ಹೋರಾಟಗಾರ ಚಾ. ರಂ.ಶ್ರೀನಿವಾಸಗೌಡ ಮಾತನಾಡಿ ಪೂರ್ವಭಾವಿ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಕನ್ನಡ ಪರ ಸಂಘಟನೆಗಳ ಮುಖಂಡರು ಹಾಜರಾಗಿಲ್ಲ ಆದ್ದರಿಂದ ಸಭೆಯನ್ನು ಮುಂದೂಡುವಂತೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿ ರಾಜು ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮಹೇಶ್ ಗೌಡ, ಪಣ್ಯದ ಹುಂಡಿ ರಾಜು ಸೇರಿದಂತೆ ಇನ್ನಿತರರು ಧ್ವನಿಗೂಡಿಸಿದರು. ಕನ್ನಡ ಪರ ಸಂಘಟನೆಗಳು ತಮ್ಮ ವಿರುದ್ಧ ಆರೋಪ ಮಾಡುತ್ತಿದ್ದಂತೆ, ತಿರುಗಿ ಬಿದ್ದ ಅಧಿಕಾರಿ ರಾಜು ಏರು ಧ್ವನಿಯಲ್ಲಿ ವಾಗ್ವಾದ ನಡೆಸಿದರು. ಗದ್ದಲ ಹೆಚ್ಚುತ್ತಿದ್ದಂತೆ ಅಪರ ಜಿಲ್ಲಾಧಿಕಾರಿ ಜವರೇಗೌಡ ಮಧ್ಯಪ್ರವೇಶಿಸಿ ಅಧಿಕಾರಿಗೆ ಬುದ್ಧಿವಾದ ಹೇಳಿದರು ಅಲ್ಲದೆ ಮುಂದೆ ಈ ರೀತಿಯ ಘಟನೆ ನಡೆಯದಂತೆ ನೋಡಿಕೊಳ್ಳುವ ಭರವಸೆ ನೀಡಿ ಸಭೆಯನ್ನು ಮುಂದುವರಿಸಿದರು.

ನಂತರ ನಡೆದ ಪೂರ್ವಭಾವಿ ಸಭೆಯಲ್ಲಿ ಡಿ. 29 ರಂದು ರಾಷ್ಟಕವಿ ಕುವೆಂಪು ಜನ್ಮ ದಿನಾಚರಣೆಯನ್ನು ಅದ್ದೂರಿಯಾಗಿ ನಡೆಸಲು ತೀರ್ಮಾನಿಸಲಾಯಿತು. ಯಾವುದೇ ಲೋಪಗಳಿಗೆ ಅವಕಾಶವಿಲ್ಲದಂತೆ ಅಚ್ಚುಕಟ್ಟಾಗಿ ವೇದಿಕೆ ಕಾರ್ಯಕ್ರಮ ನಡೆಸುವಂತೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು. ಈ ಸಂದರ್ಭದಲ್ಲಿ ಅಂತರಾಷ್ಟ್ರೀಯ ಜನಪದ ಗಾಯಕ ಸಿಎಂ ನರಸಿಂಹಮೂರ್ತಿ, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ ಬಂಗಾರು. ಕನ್ನಡ ಚಳುವಳಿಗಾರ ಲಿಂಗರಾಜು. ರಾಜಪ್ಪ. ಬಸವಣ್ಣ ಸೇರಿದಂತೆ ಕೆಲ ಅಧಿಕಾರಿಗಳು ಹಾಜರಿದ್ದರು.

# ಅಕ್ರಮವಾಗಿ ಬೆಳೆದಿದ್ದ 20 ಗಾಂಜಾ ಗಿಡಗಳ ವಶ

ಚಾಮರಾಜನಗರ ಜಿಲ್ಲೆಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆ, ಮಾರಾಟ ಮಾಡುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಕವಿತ ಬಿ.ಟಿ ಐಪಿಎಸ್ ರವರು ನಿರ್ದೇಶನ ನೀಡಿದ್ದು, ಮತ್ತು ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಶಶಿಧರ್.ಹೆಚ್ ಮತ್ತು ಕೊಳ್ಳೇಗಾಲ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಧರ್ಮೇಂದ್ರ ರವರ ಮಾರ್ಗದರ್ಶನದಲ್ಲಿ ರಾಮಾಪುರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾದ ಶ್ರೀ. ಚಿಕ್ಕರಾಜ್ ಶೆಟ್ಟಿ.ಬಿ ರವರಿಗೆ ದಿನಾಂಕ: 11-12-2025 ರಂದು ಬೆಳಿಗ್ಗೆ 9-00 ಗಂಟೆಯಲ್ಲಿ ದೊರೆತ ಮಾಹಿತಿ ಮೇರೆಗೆ ಕಾರಪ್ರವೃತ್ತರಾಗಿ ಕೊಳ್ಳೇಗಾಲ ಉಪವಿಭಾಗದ ಪೊಲೀಸ್ ಡಿವೈಎಸ್‌ಪಿ ರವರ ಅನುಮತಿ ಆದೇಶ ಪಡೆದು ತಮ್ಮ ಸಿಬ್ಬಂದಿಗಳೊಡನೆ ಆರೋಪಿತ ನಾಗರಾಜು @ ರಾಜ ಬಿನ್ ಲೇಟ್ ಸಿದ್ದುನಾಯ್ಕ, 45 ವರ್ಷ, ಲಂಬಾಣಿ ಜಾತಿ, ವ್ಯವಸಾಯ ವೃತ್ತಿ, ದೊಮ್ಮನಗದ್ದೆ ಗ್ರಾಮ, ಹಾಲಿ ವಾಸ: ಜಮೀನು ಮನೆ ವಾಸ, ಪುದುನಗರ ಗ್ರಾಮ, ಹನೂರು ತಾಲ್ಲೂಕು ರವರು ವ್ಯವಸಾಯ ಮಾಡಿಕೊಂಡಿರುವ ಪುದುನಗರ ಗ್ರಾಮದ ಹೊರವಲಯದಲ್ಲಿರುವ ಉಡುತೊರೆ ಹಳ್ಳದ ಪಕ್ಕದಲ್ಲಿ ಆರೋಪಿತ ವ್ಯವಸಾಯ ಮಾಡಿಕೊಂಡಿರುವ ಜಮೀನಿಗೆ ದಾಳಿ ಮಾಡಿ ಆಸಾಮಿ ನಾಗರಾಜು @ ರಾಜ ರವರು ಕಾನೂನು ಬಾಹಿರವಾಗಿ ಪೋಷಿಸಿ ಬೆಳೆಸಿದ್ದ 20 ಗಾಂಜಾ ಗಿಡಗಳನ್ನು (20 ಕೆ.ಜಿ 500 ಗ್ರಾಂ ತೂಕ, ಅಂದಾಜು ಮೌಲ್ಯ 5,25,000/-ರೂ) ಅಮಾನತ್ತುಪಡಿಸಿಕೊಂಡು




ರಾಮಾಪುರ ಪೊಲೀಸ್ ಠಾಣಾ ಮೊ.ನಂ: 180/2025, ಕಲಂ: 20 (ಎ) (1) ಎನ್‌ಡಿಪಿಎಸ್ ಆಕ್ಟ್-1985 ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಈ ದಾಳಿಯಲ್ಲಿ ಪಾಲ್ಗೊಂಡಿದ್ದ ರಾಮಾಪುರ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ & ಸಿಬ್ಬಂದಿಗಳಾದ ಚಿಕ್ಕರಾಜ್ ಶೆಟ್ಟಿ.ಬಿ ಇನ್ಸ್‌ಪೆಕ್ಟರ್, ಲೋಕೇಶ್.ಎಸ್ ಪಿಎಸ್‌ಐ (ಅ), ಮಹೇಂದ್ರಸಿ ಸಿಹೆಚ್‌ಸಿ-161, ರಘು ಸಿಪಿಸಿ-141, ರಾಜು 194, ಅಮಗೊಂಡ ಬಿರಾದಾರ್ ಸಿಪಿಸಿ-203, ಲಿಯಾಖತ್ ಅಲಿಖಾನ್ ಸಿಪಿಸಿ-260, ರಾಮಪ್ಪ ಹಕ್ಕಲ್ ಸಿಪಿಸಿ-378 ರವರ ತಂಡದ ಕಾರ್ಯಕ್ಕೆ ಮಾನ್ಯ ಪೊಲೀಸ್ ಅಧೀಕ್ಷಕರಾದ ಡಾ. ಕವಿತಾ, ಬಿ.ಟಿ, ಐಪಿಎಸ್., ರವರು ಪ್ರಶಂಸನೆ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿಯೂ ಸಹ ಇನ್ನೂ ಹೆಚ್ಚಿನ ಅಕ್ರಮಗಳನ್ನು ಪತ್ತೆ ಹೆಚ್ಚಿನ ನಿಗ್ರಹಿಸುವಂತೆ ಸೂಚನೆಗಳನ್ನು ನೀಡಿರುತ್ತಾರೆ.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಚಾಮರಾಜನಗರ, ಹರದನಹಳ್ಳಿ ಮತ್ತು ಬೇಗೂರು ಉಪವಿಭಾಗಗಳ ವ್ಯಾಪ್ತಿಯಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಡಿಸೆಂಬರ್ 13 ರಂದು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕೋಡಿಮೋಳೆ, ಚಾಮರಾಜನಗರ ಟೌನ್-1, ಜಿಲ್ಲಾಧಿಕಾರಿಗಳ ಕಚೇರಿ, ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ರೈಲ್ವೆ ಬಡಾವಣೆ, ಕೆ.ಹೆಚ್.ಬಿ. ಕಾಲೋನಿ, ಪೊಲೀಸ್ ಕ್ವಾರ್ಟಸ್, ಜೂನಿಯರ್ ಕಾಲೇಜ್, ಗುಂಡ್ಲುಪೇಟೆ ರಸ್ತೆ, ಮಾದಾಪುರ, ದೊಡ್ಡರಾಯಪೇಟೆ, ಮಂಗಲ, ಕಾಗಲವಾಡಿ, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ರಾಮಸಮುದ್ರ, ಕರಿನಂಜನಪುರ, ಕೋರ್ಟ್ ರಸ್ತೆ, ಗೂಳಿಪುರ, ಹೊಂಗನೂರು ಹಾಗೂ ಕಬ್ಬಳ್ಳಿ, ಸೋಮಳ್ಳಿ, ಪಡಗೂರು, ಬಲಚವಾಡಿ, ನಿಟ್ರೆ, ಅಗತಗೌಡನಹಳ್ಳಿ ಮತ್ತು ಮೂಡ್ನಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ಕಲ್ಪುರ, ದೇವಲಾಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ದೂ.ಸಂ 1912 ಗೆ ಕರೆ ಮಾಡುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುಂಡ್ಲುಪೇಟೆ: ಸಿಡಿಮದ್ದು ಸಿಡಿದು ಹಸುವಿನ ಬಾಯಿ ಛಿದ್ರ



ಗುಂಡ್ಲುಪೇಟೆ: ತಾಲ್ಲೂಕಿನ ಸೋಮಹಳ್ಳಿ ಗ್ರಾಮದಲ್ಲಿ ಸಿಡಿಮದ್ದು ಸಿಡಿದು ಹಸುವಿಗೆ ಮಾರಣಾಂತಿಕ ಗಾಯ ಸೋಮಹಳ್ಳಿ ಗ್ರಾಮದ ನಂಜುಂಡಪ್ಪನವರಿಗೆ ಸೇರಿದ ಹಸು ನಂಜುಂಡಪ್ಪನವರ ಹಸು ಜಮೀನಿನಲ್ಲಿ ಮೇಯುವ ಸಂದರ್ಭದಲ್ಲಿ ಸಿಡಿಮದ್ದು ಸಿಡಿದು ಸಂಪೂರ್ಣ ಬಾಯಿ ಸೀಳಿಹೋಗಿ ಛಿದ್ರವಾಗಿರುವ ಘಟನೆ ನಡೆದಿದೆ.

ಸಿಡಿಮದ್ದು ಸಿಡಿದು ಹಸುವಿನ ಬಾಯಿ ಸಂಪೂರ್ಣ ಸಿಡಿದಿದ್ದು ಅದು ಬದುಕುಳಿಯುವುದು ಕಷ್ಟಕರವಾಗಿದೆ ಅಗಾಗಿ ಸಂಬಂಧ ಪಟ್ಟ ಇಲಾಖೆ ಇದರ ಬಗ್ಗೆ ಕ್ರಮ ವಹಿಸಬೇಕು ಹಾಗೂ ರೈತನಿಗೆ ಸೂಕ್ತ ಪರಿಹಾರ ನೀಡಬೆಕು ಎಂದು ಮುಖಂಡ ಮದುಶಂಕರ್ ಒತ್ತಾಯಿಸಿದರು.

# ದಸ್ತಾವೇಜು ಪತ್ರ ಬರಹಗಾರರ ಪ್ರತಿಭಟನೆ

ಕೆ.ಆರ್.ಪೇಟೆ, ತಾಲ್ಲೂಕು ದಸ್ತಾವೇಜು ಪತ್ರ ಬರಹಗಾರರ ಸಂಘದ ಸದಸ್ಯರು ಕೆ.ಆರ್.ಪೇಟೆ ಪಟ್ಟಣದ ಉಪ ನೊಂದಣಾಧಿಕಾರಿಗಳ ಕಚೇರಿಯ ಮುಂದೆ ಲೇಖನಿ ಸ್ಥಗಿತ ಮುಷ್ಕರ ನಡೆಸಿದರು.



ಕರ್ನಾಟಕ ರಾಜ್ಯ ದಸ್ತಾವೇಜು ಪತ್ರ ಬರಹಗಾರರ ಒಕ್ಕೂಟದ ಕರೆಯ ಮೇರೆಗೆ ಲೇಖನಿ ಸ್ಥಗಿತ ಮಾಡಿ ಬೆಳಿಗ್ಗೆ ಸಂಜೆಯವರೆವಿಗೂ ಧರಣಿ ನಡೆಸಿದ ಪತ್ರ ಬರಹಗಾರರು ರಾಜ್ಯ ಸರ್ಕಾರವು ಜಾರಿ ಮಾಡಲು ಉದ್ದೇಶಿಸಿರುವ ಪೇಪರ್‌ಲೆಸ್ ನೊಂದಣೀ ಮಾಡಿಸುವ ಕಾವೇರಿ 3.0 ತಂತ್ರಾಂಶವನ್ನು ರದ್ದು ಮಾಡಬೇಕು. ಪರವಾನಗಿ ಪಡೆದ ದಸ್ತಾವೇಜು ಬರಹಾಗಾರರಿಗೆ ನೊಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ 2.0 ತಂತ್ರಾಂಶದಲ್ಲಿ ಪ್ರತ್ಯೇಕ ಲಾಗಿನ್ ಸೃಜಿಸಿಕೊಡಬೇಕು. ಕಾವೇರಿ 2.0 ತಂತ್ರಾಂಶದ ನೋಂದಣಿ ಪ್ರಕ್ರಿಯೆಯಲ್ಲಿ ಈಗಾಗಲೇ ವಿಭಾಗ ನೋಂದಣಿ ಪ್ರಕ್ರಿಯೆಯಲ್ಲಿ ಈಗಾಗಲೇ ವಿಭಾಗ ಪತ್ರ. ದಾನಪತ್ರ, ಕ್ರಯಪತ್ರ ಹಾಗೂ ಇನ್ನಿತರೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು ಸಹ ಸಾಧ್ಯವಾಗದ ಕಾರಣ ಜನಸಾಮಾನ್ಯರು ತಮ್ಮ ಕುಟುಂಬದ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಕೊಳ್ಳುವುದು ಸಾಧ್ಯವಿಲ್ಲದಂತಾಗಿದೆ. ಸುಧಾರಣೆಯ ನೆಪದಲ್ಲಿ ಪತ್ರ ಬರಹಗಾರರ ಅಸ್ತಿತ್ವಕ್ಕೆ ದಕ್ಕೆ ತರಲು ಹೊರಟಿರುವುದು. ಪತ್ರ ಬರಹಗಾರರಿಗೆ ಮಾತ್ರವಲ್ಲದೇ ಜನಸಾಮಾನ್ಯರಿಗೂ ಪೇಪರ್ ಲೆಸ್ ನೊಂದಣಿ ಯೋಜನೆಯಲ್ಲಿ ಭಾರಿ ತೊಂದರೆಯಾಗುವ ಸಾಧ್ಯತೇಯೇ ಹೆಚ್ಚಾಗಿದೆ ಹಾಗಾಗಿ ಕೂಡಲೇ ಸರ್ಕಾರವು ತರಲು ಉದ್ದೇಶಿಸಿರುವ ಕಾವೇರಿ 3.0 ತಂತ್ರಾಂಶವನ್ನು ರದ್ದು ಮಾಡಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 16ಸಾವಿರ ದಸ್ತಾವೇಜು ಪತ್ರ ಬರಹಗಾರರು ಮತ್ತು ಅವರ ಕುಟುಂಬವನ್ನು ರಕ್ಷಣೆ ಮಾಡಬೇಕು ಎಂದು ಒತ್ತಾಯ ಮಾಡಿದರು.

ತಾಲ್ಲೂಕು ದಸ್ತಾವೇಜು ಪತ್ರ ಬರಹಗಾರರ ಒಕ್ಕೂಟದ ಅಧ್ಯಕ್ಷ ಪಿ.ಎಸ್.ಶಿವಲಿಂಗೇಗೌಡ, ಕಾರ್ಯದರ್ಶಿ ಕೆ.ಆರ್.ಹರೀಶ್‌ಕುಮಾರ್, ಉಪಾಧ್ಯಕ್ಷ ಕೆ.ಎಸ್.ನಾಗರಾಜು, ಖಜಾಂಚಿ ಮುದುಗೆರೆ ಶಂಕರ್‌ನಾಗ್, ಸಹ ಕಾರ್ಯದರ್ಶಿ ಬಿ.ನರಸಿಂಹಮೂರ್ತಿ, ಸಂಘಟನಾ ಕಾರ್ಯದರ್ಶಿ ಮುರುಗೇಶ್, ಕಾರ್ಯಕಾರಿ ಸಮಿತಿ ನಿರ್ದೇಶಕರಾದ ಕೆ.ಸಿ.ವೆಂಕಟರಾಮು, ಎಂ.ಎಸ್.ಮಹಾದೇವು, ಮಂಜುನಾಥ್, ಮತ್ತಿತರರು ಭಾಗವಹಿಸಿದ್ದರು.

## ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಎಸ್.ಸೋಮೇಶ್ವರ್ ಸೂಚನೆ

# ಗೃಹಲಕ್ಷ್ಮೀಯನ್ನು ಸಮರ್ಪಕವಾಗಿ ತಲುಪಿಸಿ

ಚಾಮರಾಜನಗರ. ರಾಜ್ಯಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಪಂಚಗ್ಯಾರಂಟಿಗಳಲ್ಲಿ ಒಂದಾದ 'ಗೃಹಲಕ್ಷ್ಮೀ ಯೋಜನೆಯನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪುವಂತೆ ಮಾಡಲು ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಚಾಮರಾಜನಗರ ತಾಲ್ಲೂಕು ಪಂಚಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ತಿಳಿಸಿದರು.

ತಾಲ್ಲೂಕಿನ ಕಾಡಂಚಿನ ಗ್ರಾಮ ಪುಣಜನೂರು ಗ್ರಾಮಪಂಚಾಯಿತಿ ಕಚೇರಿಯಲ್ಲಿ ನಡೆದ ತಾಲ್ಲೂಕು ಪಂಚಗ್ಯಾರಂಟಿ ಯೋಜನೆಯಡಿ ಹಮ್ಮಿಕೊಂಡಿದ್ದ ಅಟ್ಟುಗೂಳಿಪುರ, ಪುಣಜನೂರು ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯರು, ಅಂಗನವಾಡಿ ಶಿಕ್ಷಿಯರು ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಗಿಡಕ್ಕೆ ನೀರೆರೆಯುವ ಮೂಲಕ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಉದ್ಘಾಟಿಸಿ ಮಾತನಾಡಿದರು.



ಅಟ್ಟುಗೂಳಿಪುರ, ಪುಣಜನೂರು ವ್ಯಾಪ್ತಿಯಲ್ಲಿ 34 ಅಂಗನವಾಡಿ ಕೇಂದ್ರಗಳಿದ್ದು, 1655 ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳಿದ್ದು, ಇವರ ಪೈಕಿ ಪುಣಜನೂರು ಗ್ರಾಮಪಂಚಾಯಿತಿಯ 52, ಅಟ್ಟುಗೂಳಿಪುರ ವ್ಯಾಪ್ತಿಯ -55ಸೇರಿದಂತೆ 107 ಮಂದಿಗೆ ಗೃಹಲಕ್ಷ್ಮೀ ಯೋಜನೆಯ ಹಣಸಮರ್ಪಕವಾಗಿ ತಲುಪಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಹಣಸಮರ್ಪಕವಾಗಿ ತಲುಪದಿರಲು ಪಡಿತರಕಾರ್ಡ್ ಇಕೆವೈಸಿ ಆಗದಿರುವುದು, ಆಧಾರ್ ಕಾರ್ಡ್ ಲಿಂಕ್ ಆಗದಿರುವುದು ಇರುವುದು, ಇಂತಹ ಸಮಸ್ಯೆ ಇರುತ್ತವೆ. ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗಿರಿಜನಹಾಡಿಗಳಿಗೆ ಭೇಟಿನೀಡಿ, ಪಡಿತರಕಾರ್ಡ್ ಇಕೆವೈಸಿ ಆಗದಿರುವುದು, ಆಧಾರ್ ಕಾರ್ಡ್ ಲಿಂಕ್ ಆಗದಿರುವುದು ಇದ್ದಲ್ಲಿ ಲೋಪದೋಷ ಸರಿಪಡಿಸಿಕೊಟ್ಟು, 107 ಫಲಾನು ಭವಿಗಳಿಗೆ ಗೃಹಲಕ್ಷ್ಮೀ ಯೋಜನೆಯ ಹಣಸಮರ್ಪ ಕವಾಗಿ ತಲುಪುವಂತೆ ನೋಡಿಕೊಳ್ಳಬೇಕು ಎಂದು ತಾಕೀತುಮಾಡಿದರು. ತಾಲ್ಲೂಕು ಪಂಚಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಸದಸ್ಯರಾದ ಮರಿಯಾಲಹುಂಡಿಕುಮಾರ್, ಮಾದಾಪುರ ಕುಮಾರ್, ರಮೇಶ್, ಮಾದೇಶ್, ಸುಕು ಮಾರ್, ಸಿಡಿಪಿಓ ನಾಗೇಶ್, ಮಹಿಳಾಮತ್ತು ಮಕ್ಕಳ ಕಲ್ಯಾಣ ಇಳಾಖೆ ವಿಶ್ರುತ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಕಿ ಕಸ್ತೂರಿ, ಸಿಬ್ಬಂದಿ ಪುಣಜನೂರು ಗ್ರಾಮಪಂಚಾಯಿತಿಯ ಪಿಡಿಓ, ಕಾರ್ಯದರ್ಶಿ ಅಂಗನವಾಡಿ ಕಾರ್ಯಕತೆರು ಹಾಜರಿದ್ದರು.

## ಡಿ .20ರಿಂದ ಮೂರು ದಿನ ಪಾಂಡವಪುರದಲ್ಲಿ ಪುಟ್ಟಣ್ಣಯ್ಯ ರಂಗ ನಮನ, ಹೊಂಬಾಳೆ ನಾಟಕೋತ್ಸವ



**ಮಂಡ್ಯ:** ಹಸಿರು ಭೂಮಿ ಟ್ರಸ್ಟ್ ಹಾಗೂ ಮೇಲುಕೋಟೆ ದೃಶ್ಯ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಡಿ.21ರಿಂದ 3 ದಿನಗಳು ಕೆ.ಎಸ್.ಪುಟ್ಟಣ್ಣಯ್ಯ ರಂಗನಮನ, ಹೊಂಬಾಳೆ ನಾಟಕೋತ್ಸವ ಕಾರ್ಯಕ್ರಮವನ್ನು ನಡೆಯಲಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ರೈತ ದಿನಾಚರಣೆ ಹಾಗೂ ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ 77 ಹುಟ್ಟುಹಬ್ಬದ ಅಂಗವಾಗಿ ನಾಟಕೋತ್ಸವ ನಡೆಯಲಿದೆ. ಪ್ರತಿ ದಿನ ಸಂಜೆ 6 ಗಂಟೆ ನಾಟಕ ಪ್ರದರ್ಶನಗೊಳ್ಳಲಿದೆ. ನಂತರ ಮೂರೂ ದಿನವೂ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 3 ಸಾಧಕರಿಗೆ ಸನ್ಮಾನ ಮಾಡಲಾಗುವುದು ಎಂದರು.

ಡಿ.21ರಂದು ಬೆಂಗಳೂರಿನ ಕಲಾಮಾಧ್ಯಮ ರಂಗ ತಂಡದಿಂದ 'ನನ್ನ ತೇಜಸ್ವಿ' ನಾಟಕವನ್ನು ನಾಗತಿಹಳ್ಳಿ ಚಂದ್ರಶೇಖರ್, ಡಿ.22ರಂದು ಚಿತ್ರ ನಟ ಪ್ರಕಾಶ್ ರಾಜ್ ನೇತೃತ್ವದ ನಿರ್ದಿಗಂತ ರಂಗ ತಂಡದಿಂದ 'ಕೊಡಲ್ಲ ಅಂದ್ರೆ ಕೊಡಲ್ಲ' ನಾಟಕವನ್ನು ಪ್ರೊ. ಕೃಷ್ಣೇಗೌಡ, ಡಿ.23ರಂದು ಮೈಸೂರಿನ ನೇಪಥ್ಯ ರಂಗತಂಡದಿಂದ ದೇವನೂರು ಮಹದೇವ ರಚನೆಯ 'ಒಡಲಾಳ' ನಾಟಕವನ್ನು ಟಿ.ಎನ್.ಸೀತಾರಾಮು ಉದ್ಘಾಟಿಸುವರು ಎಂದು ವಿವರಿಸಿದರು.

ಡಿ.23ರಂದು ಪಾಂಡವಪುರ ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಉದ್ಯೋಗ ಮೇಳ ನಡೆಯಲಿದೆ. ಇಲ್ಲಿ 2 ಸ್ಥಳೀಯ ಸಂಸ್ಥೆಗಳು ಸೇರಿ 45 ಸಂಸ್ಥೆಗಳು ಉದ್ಯೋಗಾಕಾಂಕ್ಷಿಗಳ ಆಯ್ಕೆ ಮಾಡಲಿವೆ. ಈ ಬಾರಿ 500ಕ್ಕೂ ಹೆಚ್ಚು ಉದ್ಯೋಗ ಒದಗಿಸುವ ನಿರೀಕ್ಷೆಯಿದೆ ಎಂದು ಇದೇ ವೇಳೆ ತಿಳಿಸಿದರು.

ಗೋಷ್ಠಿಯಲ್ಲಿ ಹಸಿರು ಭೂಮಿ ಟ್ರಸ್ಟ್ ಅಧ್ಯಕ್ಷ ಜ್ಞಾನೇಶ್, ಎನ್.ಸಿ.ಸೋಮೇಗೌಡ, ಕೆ.ಆರ್.ಗಿರೀಶ್, ಕೋಕಿಲ, ಶಿವಣ್ಣ ಇದ್ದರು.

## ಬುದ್ಧಿಮಾಂದ್ಯ ಮಕ್ಕಳಿಗಾಗಿ ಕಿಡ್ಸ್ ಕಾರ್ನಿವಲ್



**ಮೈಸೂರು:** ಮೈಸೂರು ಹೆರಿಟೇಜ್ ರೌಂಡ್ ಟೇಬಲ್-109ರ ವತಿಯಿಂದ ಕುವೆಂಪುನಗರದಲ್ಲಿನ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಬುದ್ಧಿಮಾಂದ್ಯ ಮಕ್ಕಳಿಗಾಗಿ ಕಿಡ್ಸ್ ಕಾರ್ನಿವಲ್ ನೆರವೇರಿತು. ಇದು ಯಾವುದೇ ಸ್ಪರ್ಧೆಯಾಗಿರಲಿಲ್ಲ. ಬದಲಾಗಿ ಬುದ್ಧಿಮಾಂದ್ಯ ಮಕ್ಕಳು ಕಾರ್ಯಕ್ರಮಕ್ಕೆ ಆಗಮಿಸಿ, ಶಿಕ್ಷಕರು, ಪಾಲಕರೊಡನೆ ಹಬ್ಬದ ವಾತಾವರಣದಲ್ಲಿ ಸಂಭ್ರಮಿಸಿದರು. ತಮಗಾಗಿ ಆಯೋಜಿಸಿದ್ದ ನಾನಾ ಪ್ರಕ್ರಿಯೆಗಳಲ್ಲಿ ಭಾಗಿಯಾದರು. ಮೊದಲಿಗೆ ಮಕ್ಕಳನ್ನು ಪಾಪ್‌ಕಾರ್ನ್, ಕಾಟನ್ ಕ್ಯಾಂಡಿ, ಚಾಕಲೇಟ್ ಫೌಂಟೇನ್, ಪೇಸ್ಟ್ರಿ ಮೊದಲಾದವುಗಳೊಡನೆ

ಸ್ವಾಗತ ಕೋರಲಾಯಿತು. ಸುಮಾರು 800ಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಆಯೋಜಕರಾದ ಹರೀಶ್ ಶೆಣೈ, ವಿನಾಯಕ್, ರಜತ್, ಸೂರಜ್, ಕುಶಾಲ್ ಇದ್ದರು.

## 'ಕ್ರೀಡೆಯು ದೈಹಿಕ ಚಟುವಟಿಕೆಗೆ ಪೂರಕ'



**ಮಂಡ್ಯ:** ಕ್ರೀಡೆಯು ದೈಹಿಕ ಚಟುವಟಿಕೆ ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಇ.ಗಂಗಾಧರಸ್ವಾಮಿ ಅಭಿಪ್ರಾಯ ಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿಯ ಹಿನ್ನೆಲೆ ಸಮವಸ್ತ್ರಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಾಧ್ಯಮ ಸಮಾಜದ ಶಕ್ತಿಯ ಅಂಗ. ಪೊಲೀಸ್ ಹಾಗೂ ಮಾಧ್ಯಮಗಳ ವೃತ್ತಿಯಲ್ಲಿ ಭಿನ್ನತೆಯಿಲ್ಲ. ಹಗಲು, ರಾತ್ರಿ, ಮಳೆ-ಬಿಸಿಲೆನ್ನದೇ ದಿನದ 24ಗಂಟೆಯೂ ಕೆಲಸ ಮಾಡಬೇಕು. ದೈಹಿಕ ಚಟುವಟಿಕೆಯಿಲ್ಲದೇ ಜಡಹೊಂದಿದ ದೇಹಕ್ಕೆ ಕ್ರೀಡೆಗಳು ಚೇತೋಹಾರಕದಂತೆ ಕಾರ್ಯ ನಿರ್ವಹಿಸುತ್ತದೆ ಎಂದರು.

ಕ್ರೀಡೆಯಲ್ಲಿ ಪತ್ರಕರ್ತರೂ ಹಿಂದೆ ಉಳಿದಿಲ್ಲ. ಕೆಲ ತಿಂಗಳ ಹಿಂದಷ್ಟೇ ಪೊಲೀಸರೊಂದಿಗೆ ಸೌಹಾರ್ದ ಕ್ರೀಡೆಯಲ್ಲಿ ತೊಡಗಿದ್ದ ಪತ್ರಕರ್ತರು ಸವಾಲಿಗೆ ಪ್ರತಿ ಸವಾಲೆಸೆದರು. ಕ್ರೀಡೆಯಲ್ಲಿ ಸೋಲು, ಗೆಲುವು ಸಮನಾಗಿ ಸ್ವೀಕರಿಸಿ. ಎಲ್ಲರೂ ಪ್ರಶಂಸಿಸುವ ರೀತಿ ಈ ಕ್ರೀಡೆ ಆಯೋಜನೆಗೊಂಡಿದೆ. ಅದರಂತೆ ಯಶಸ್ವಿಯಾಗಿ ನಡೆಯಲಿದೆ ಎಂದು ಆಶಿಸಿದರು.

ಈ ವೇಳೆ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ಪ್ರಧಾನ ಕಾರ್ಯದರ್ಶಿ ಡಿ.ಶಶಿಧರ್ ಕಾಡುಕೊತ್ತನಹಳ್ಳಿ, ಜಿಲ್ಲಾ ಉಪಾಧ್ಯಕ್ಷ ಕೆ.ಸಿ.ಮಂಜುನಾಥ, ಖಜಾಂಚಿ ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಕೆ.ಎನ್.ನವೀನ್‌ಕುಮಾರ್ ಇತರರಿದ್ದರು.

## ಬ್ಲಾಕ್‌ಮೇಲ್ ಪತ್ರಕರ್ತರಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ: ಜೆ.ಆರ್.ಕೆಂಚೇಗೌಡ

**ಹಾಸನ:** ಕನ್ನಡದ ಖ್ಯಾತ ಸಾಹಿತಿ, ಹಿರಿಯ ಪತ್ರಕರ್ತರ ದಿ.ಡಿ.ವಿ. ಗುಂಡಪ್ಪ ಅವರು ಸ್ಥಾಪಿಸಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಂಗ ಸಂಸ್ಥೆಯಾಗಿರುವ ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಇಡೀ ರಾಜ್ಯದಲ್ಲೇ ತನ್ನದೇ ಆದ ಶಿಸ್ತು, ಬದ್ಧತೆ, ಕಾರ್ಯ ತತ್ಪರತೆ ಉಳಿಸಿ ಕೊಂಡು ಬಂದಿದ್ದು, ಸಂಘದ ಸರ್ವ ಸದಸ್ಯರೂ ಅದಕ್ಕೆ ಬದ್ಧರಾಗಿರಬೇಕು ಎಂದು ಸಂಘದ ಜಿಲ್ಲಾಧ್ಯಕ್ಷರಾದ ಜೆ.ಆರ್.ಕೆಂಚೇಗೌಡ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಹೆಸರಿನಲ್ಲಿ ಅಥವಾ ಸದಸ್ಯರು ಎಂದ ಹೇಳಿಕೊಂಡು ಯಾರಾದರೂ ಹಣ ಅಥವಾ ಬೇರಾವುದೋ ಕಾರಣಕ್ಕೆ ಬ್ಲಾಕ್‌ಮೇಲ್ ಮಾಡಿದರೆ ತಕ್ಷಣವೇ ಸಂಘದ ಕಚೇರಿಗೆ, ಸಂಬಂಧಪಟ್ಟ ಪೊಲೀಸರಿಗೆ ದೂರು ನೀಡುವಂತೆ ಮನವಿ ಮಾಡಿದರು.

ಕೆಲವರು ನಾವು ಈ ಸಂಸ್ಥೆಯ ಪ್ರತಿನಿಧಿಗಳು ಅಥವಾ ವರದಿಗಾರರು, ಯೂಟ್ಯೂಬ್ ಚಾನೆಲ್‌ನವರು ಎಂದು ಹೇಳಿಕೊಂಡು ರಾಜಕಾರಣಿಗಳು, ಗುತ್ತಿಗೆದಾರರು ಅಥವಾ ಸಂಘ ಸಂಸ್ಥೆಗಳ ಬಳಿ ಹಣಕ್ಕಾಗಿ ಬೇಡಿಕೆ ಇಟ್ಟರೆ ಇಲ್ಲವೇ ಆಮಿಷ ಅಥವಾ ಬೆದರಿಕೆ ಒಡ್ಡಿದರೆ ಖಂಡಿತಾ ದೂರು ನೀಡಿ ಎಂದರು.

ಇಂತಹ ವಾತಾವರಣದಿಂದ ಪ್ರಾಮಾಣಿಕ ಪತ್ರಕರ್ತರಿಗೆ ಕಿರಿಕಿರಿ ಆಗಲಿದೆ. ಬ್ಲಾಕ್‌ಮೇಲ್ ಪತ್ರಕರ್ತರಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ. ಅಂಥವರ ವಿರುದ್ಧ ಪುರಾವೆ ಸಹಿತ ದೂರು ನೀಡಿದರೆ ಖಂಡಿತಾ ಸಂಘವು ಕ್ರಮ ಕೈಗೊಳ್ಳಲಿದೆ




ಎಂದು ತಿಳಿಸಿದರು.

ಸಂಘಕ್ಕೆ, ಪೊಲೀಸರಿಗೆ ದೂರು ನೀಡಲು ಆಗದಿದ್ದರೆ ನ್ಯಾಯಾಲಯಗಳಲ್ಲೂ ಮಾನನಷ್ಟ ಮೊಕದ್ದಮೆ ಹೂಡಬಹುದು, ಅಡ್ಡದಾರಿ ಹಿಡಿಯುವ ಪತ್ರಕರ್ತರ ಪರವಾಗಿ ನಮ್ಮ ಸಂಘ ಖಂಡಿತಾ ಇಲ್ಲ ಎಂದು ಸ್ಪಷ್ಟಪಡಿಸಿದರು.

ರಾಜಕಾರಣಿಗಳು, ಸಂಘ-ಸಂಸ್ಥೆಗಳ ಮುಖ್ಯಸ್ಥರು ಪತ್ರಕರ್ತರ ಸೋಗಿನಲ್ಲಿ ತಮಗೆ ಯಾರೇ ತೊಂದರೆ ನೀಡಿದರೂ ಸಂಘದ ಗಮನಕ್ಕೆ ತರುವ ಮೂಲಕ ಸಹಕಾರ ನೀಡಬೇಕು ಎಂದು ಕೋರಿದರು. ಹಾಗೆಯೇ ಆರ್‌ಟಿಐ ಆರ್‌ಟಿಐ ಹೆಸರಿನಲ್ಲಿ ವಸೂಲಿ ಕೋರರ ವಿರುದ್ಧವೂ ದೂರು ಕೊಡಬಹುದು ಎಂದು ಇದೇ ವೇಳೆ ತಿಳಿಸಿದರು.

**28ಕ್ಕೆ ಚುನಾವಣೆ:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸೂಚನೆ ಮೇರೆಗೆ ಜಿಲ್ಲೆಯ ಏಳು ತಾಲೂಕುಗಳ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ-ಉಪಾಧ್ಯಕ್ಷ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಇದೇ ತಿಂಗಳ (ಡಿಸೆಂಬರ್) 28 ರಂದು ಏಕ ಕಾಲಕ್ಕೆ ನಿಗದಿಗೊಳಿಸಲಾಗಿದೆ ಎಂದು ಕೆಂಚೇಗೌಡ ತಿಳಿಸಿದರು. ಎಲ್ಲ ಸಂಘದವರು ಯಶಸ್ವಿ ಅಥವಾ ಶಾಂತಿಯುತ ಚುನಾವಣೆಗೆ ಸಹಕಾರ ನೀಡಬೇಕು. ಆದಷ್ಟು ಅವಿರೋಧ ಆಯ್ಕೆಗೆ ಒತ್ತು ನೀಡಬೇಕು ಎಂದು ಅಧ್ಯಕ್ಷರು ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ.ಹರೀಶ್, ಖಜಾಂಚಿ ತ್ಯಾಗರಾಜ್(ಪ್ರಕಾಶ್ ಟಿವಿ-5) ಇದ್ದರು.

## ರಾಷ್ಟ್ರ ಮಟ್ಟದ ಯುವಜನೋತ್ಸವ: ಹಣಮಂತ ಕಾಂಬಳೆ ಆಯ್ಕೆ



**ಬಾಗಲಕೋಟೆ:** ಯಾದಗಿರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ವತಿಯಿಂದ ಯಾದಗಿರಿ ನಗರದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲೆಯ ಪರವಾಗಿ ಕಥಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮುಧೋಳ ತಾಲೂಕಿನ ಶಿರೋಳ ಗ್ರಾಮದ

ಯುವ ಬರಹಗಾರರಾದ ಹಣಮಂತ ಕಾಂಬಳೆ ಅವರು ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ನಂಬಿಕೆ ಮಾರಾಟಕ್ಕಿದೆ? ಎಂಬ ಶೀರ್ಷಿಕೆಯ ಅವರ ಕಥೆಗೆ ರಾಜ್ಯಮಟ್ಟದ ಪ್ರಶಸ್ತಿ ಲಭಿಸಿದ್ದು, 2026 ರ ಜನವರಿ ಮೊದಲ ವಾರದಲ್ಲಿ ನವದೆಹಲಿಯಲ್ಲಿ ನಡೆಯುವ ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಜಿಲ್ಲೆಗೆ ಕೀರ್ತಿ ತಂದ ಯುವ ಬರಹಗಾರ ಹಣಮಂತ ಕಾಂಬಳೆ ಅವರಿಗೆ ಜಿಲ್ಲಾಧಿಕಾರಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅಭಿನಂದಿಸಿದ್ದಾರೆ.

## ಒತ್ತಡ ತಡೆಯಲಾಗದೇ ಕುಸಿದು ಬಿದ್ದು ಬಿಎಲ್‌ಒ ಸಾವು!

ರಾಜಸ್ಥಾನದ ಕೋಟ್‌ಪುಟ್ಲಿ-ಬೆಹ್ರೋರ್ ಜಿಲ್ಲೆಯಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಖಖಖ) ಕಾರ್ಯಕ್ಕಾಗಿ ನಿಯೋಜಿಸಲ್ಪಟ್ಟಿದ್ದ ಬೂತ್ ಮಟ್ಟದ ಅಧಿಕಾರಿ ಮನೆಗೆ ಹೋಗುವಾಗ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವೇ ಸಾವಿಗೆ ಕಾರಣವನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಅಧಿಕಾರಿಗಳ ಪ್ರಕಾರ, ವಿಜಯ್ ಗುರ್ಜರ್ (42) ಬಿಎಲ್‌ಒ ಆಗಿ ನೇಮಕಗೊಂಡಿದ್ದು, ಕೋಟ್‌ಪುಟ್ಲಿಯ ಸರ್ಕಾರಿ ಸರ್ದಾರ್ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ಸಂಜೆ ಮನೆಗೆ ಹಿಂದಿರುಗುವಾಗ ಅವರು ಏಕಾಏಕಿ ರಸ್ತೆಯಲ್ಲಿ ಬಿದ್ದು ಗಾಯಗೊಂಡರು. ಅವರ ಕುಟುಂಬ ಅವರನ್ನು ಸರ್ಕಾರಿ ಬಿಡಿಎಂ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದರು, ಅಲ್ಲಿ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು.

## ಕಾಂಗ್ರೆಸ್ ಸಭೆಗೆ ಶಶಿ ತರೂರ್ ಗೈರು

**ನವದೆಹಲಿ:** ಶುಕ್ರವಾರ ಸಂಸತ್ ಭವನದಲ್ಲಿ ಕಾಂಗ್ರೆಸ್ ಲೋಕಸಭಾ ಸಂಸದರ ಸಭೆ ನಡೆದಿದ್ದು ರಾಹುಲ್ ಗಾಂಧಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಸದೀಯ ಕಾರ್ಯತಂತ್ರದ ಮೇಲೆ ಕೇಂದ್ರೀಕರಿಸಿದ ಈ ಸಭೆಗೆ ಎಲ್ಲಾ ಸಂಸದರನ್ನು ಆಹ್ವಾನಿಸಲಾಗಿತ್ತು. ಆದರೆ, ಶಶಿ ತರೂರ್ ಸಭೆಗೆ ಹಾಜರಾಗಿರಲಿಲ್ಲ.

ವರದಿಗಳ ಪ್ರಕಾರ, ತರೂರ್ ಅವರ ಗೈರುಹಾಜರಿಯು ಪಕ್ಷದಿಂದ ಹೆಚ್ಚುತ್ತಿರುವ ಅಂತರವನ್ನು ಸೂಚಿಸುತ್ತದೆ. ಅವರು ಈ ಹಿಂದೆ ಸರ್ಕಾರಿ ಸಭೆಗಳು ಮತ್ತು ಅಧಿಕೃತ ಆಹ್ವಾನಗಳಲ್ಲಿ ಭಾಗವಹಿಸಿದ್ದು, ಇದನ್ನು ಕಾಂಗ್ರೆಸ್ ನಾಯಕರು ಪ್ರಶ್ನಿಸಿದ್ದಾರೆ. ಇದು ಅವರು ಪಕ್ಷದ ಗಡಿ ರೇಖೆ ದಾಟುತ್ತಿರುವುದನ್ನು ತೋರುತ್ತಿದೆ. ಆದರೆ, ಸಭೆಗೆ ಅವರ ಗೈರುಹಾಜರಿಯ ಬಗ್ಗೆ ಪಕ್ಷಕ್ಕೆ ಮುಂಚಿತವಾಗಿ ತಿಳಿಸಲಾಗಿತ್ತು ಎಂದು ಶಶಿ ತರೂರ್ ಹೇಳಿದ್ದಾರೆ., ಪಕ್ಷದ ಮುಖ್ಯಸ್ಥ ವಿವಿ ಸುರೇಶ್ ಈ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳಿದ್ದಾರೆ.

ಇತ್ತೀಚೆಗೆ, ರಷ್ಯಾ ಅಧ್ಯಕ್ಷ ಪುಟಿನ್ ಅವರ ಭಾರತ ಭೇಟಿಯ ಸಮಯದಲ್ಲಿ, ರಾಷ್ಟ್ರಪತಿ ಭವನದಲ್ಲಿ ನಡೆದ ಭೋಜನ ಕೂಟದಲ್ಲಿ ಅವರು ಭಾಗವಹಿಸಿದ್ದರು. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿಲ್ಲ. ಇದು ಕಾಂಗ್ರೆಸ್‌ನೊಳಗೆ ಅಸಮಾಧಾನ ಹೆಚ್ಚಲು ಕಾರಣವಾಗಿದೆ.

ತರೂರ್ ಅವರನ್ನು ಗುರಿಯಾಗಿಸಿಕೊಂಡು ಕಾಂಗ್ರೆಸ್ ನಾಯಕ ಪವನ್ ಖೇರಾ, ?ನಮ್ಮ ನಾಯಕನನ್ನು ಆಹ್ವಾನಿಸಲಾಗಿಲ್ಲ, ಆದರೆ ಪಕ್ಷದ ಸದಸ್ಯರನ್ನು ಆಹ್ವಾನಿಸಲಾಗಿತ್ತು ಮತ್ತು ಅವರು ಅದನ್ನು ಸ್ವೀಕರಿಸಿದರು? ಎಂದು ಹೇಳಿದ್ದಾರೆ. ರಾಹುಲ್ ಗಾಂಧಿ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ಸಭೆಯಲ್ಲಿ ತರೂರ್ ಅವರ ಅನುಪಸ್ಥಿತಿಯು ಅವರ ರಾಜಕೀಯ ಅಂತರವನ್ನು ಎತ್ತಿ ತೋರಿಸುತ್ತದೆ. ತರೂರ್ ಪಕ್ಷದ ರೇಖೆಯಿಂದ ವಿಮುಖರಾಗುತ್ತಿದ್ದಾರೆ ಎಂದು ಅನೇಕ ಸಂಸದರು ನಂಬಿದ್ದಾರೆ ಮತ್ತು ಮುಂಬರುವ ದಿನಗಳಲ್ಲಿ ಈ ವಿವಾದ ಇನ್ನಷ್ಟು ಹೆಚ್ಚಾಗಬಹುದು ಎನ್ನಲಾಗಿದೆ.

## ಎರಡು ದಿನಗಳ ಕೈಗಾರಿಕಾ ತರಬೇತಿಗೆ ಚಾಲನೆ




**ಮೈಸೂರು:** ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆವತಿಯಿಂದ ಏರ್ಪಡಿಸುತ್ತಿರುವ ತರಬೇತಿ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಉದ್ದಿಮೆದಾರರು ಭಾಗವಹಿಸಿ ಮಾಹಿತಿಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ರ್ಯಾಂಪ್ ಯೋಜನೆಯಡಿ ವ್ಯಾಪಾರ ಸ್ವೀಕಾರಾರ್ಹ ರಿಯಾಯಿತಿ ವ್ಯವಸ್ಥೆ(ಟ್ರೇಡ್) ಹಾಗೂ ಪರಿಸರ ಮತ್ತು ಸಾಮಾಜಿಕ ನಿರ್ವಹಣೆ(ಇಎಸ್‌ಎಂ) 2ದಿನದ ತರಬೇತಿ ಕಾರ್ಯಕ್ರಮವನ್ನು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಚಾಲನೆ ನೀಡಿದರು. ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಆಯೋಜಿಸಿರುವ ತರಬೇತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಉದ್ದಿಮೆದಾರರು ಭಾಗವಹಿಸಬೇಕು. ಆಗ ಮಾತ್ರವೇ ಇಲಾಖೆಯಲ್ಲಿನ ಎಲ್ಲಾ ಅಂಶಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಆಗ ಮಾತ್ರವೇ ಯಶಸ್ವಿ ಉದ್ಯಮಿ ಆಗಲು ಸಾಧ್ಯವಾಗುತ್ತದೆ. ಇಲ್ಲಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಬೆಂಗಳೂರು ಟೆಕ್ಸಾಕ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದರಾಜು ಮಾತನಾಡಿ, ಕೈಗಾರಿಕಾ ಘಟಕಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅವಶ್ಯವಿರುವ ಮಾಹಿತಿಗಳನ್ನು ಸದರಿ ತರಬೇತಿಗಳಲ್ಲಿ ಪಡೆದು ಉದ್ದಿಮೆದಾರರು ಲಾಭ ಗಳಿಸುವತ್ತಾ ಗಮನ ಹರಿಸಲು ತಿಳಿಸಿದರು. ಸಂಪನ್ಮೂಲ ವ್ಯಕ್ತಿಯಾದ ಕೃಷ್ಣಮೂರ್ತಿ ಟ್ರೇಡ್ಸ್ ಕುರಿತು ಹಾಗೂ ಕಣ್ಣನ್ ಅವರು ಇಎಸ್‌ಎಂ ವಿಷಯದ ಕುರಿತು ಉದ್ದಿಮರದಾರರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ.ಜಾತಿ/ಪಂಗಡಗಳ ಉದ್ದಿಮೆದಾರರ ಸಂಘ ಅಧ್ಯಕ್ಷ ವಿಜಯಶಂಕರ್, ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕ ದಿನೇಶ್ ಇನ್ನಿತರರು ಉಪಸ್ಥಿತರಿದ್ದರು.

## 'ಏನೋ ತಪ್ಪಾಗಿದೆ...': ಕರೂರ್ ಕಾಲ್ತುಳಿತ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಪ್ರಶ್ನೆ!

**ನವದೆಹಲಿ:** ಕರೂರ್ ಕಾಲ್ತುಳಿತ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮದ್ರಾಸ್ ಹೈಕೋರ್ಟ್‌ನ ಕಾರ್ಯನಿರ್ವಹಣೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಹೈಕೋರ್ಟ್‌ನಲ್ಲಿ ಪ್ರಕರಣಗಳನ್ನು ಪಟ್ಟಿ ಮಾಡುವ ಮತ್ತು ವಿಚಾರಣೆ ಮಾಡುವ ವಿಧಾನದಲ್ಲಿ ಏನೋ ತಪ್ಪಾಗಿದ್ದು ಉತ್ತರದ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಕೆ ಮಹೇಶ್ವರಿ ಮತ್ತು ವಿಜಯ್ ವಿಷ್ಣೋಯ್ ಅವರ ಸುಪ್ರೀಂ ಕೋರ್ಟ್ ಪೀಠವು ಮದ್ರಾಸ್ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರಿಂದ ವರದಿಯನ್ನು ಸ್ವೀಕರಿಸಿದ ನಂತರ ಈ ಹೇಳಿಕೆ ನೀಡಿದೆ. ನ್ಯಾಯಾಲಯವು ನೋಟಿಸ್ ಜಾರಿಗೊಳಿಸಿದ್ದು ಮದ್ರಾಸ್ ಹೈಕೋರ್ಟ್ ರಿಜಿಸ್ಟ್ರಾರ್ ಅವರನ್ನು ಪ್ರಕರಣಕ್ಕೆ ಪಕ್ಷವನ್ನಾಗಿ ಮಾಡಿತು. ಹೈಕೋರ್ಟ್‌ನಲ್ಲಿ ಏನೋ ತಪ್ಪಾಗುತ್ತಿದೆ; ನಾವು ಅದನ್ನು ಪರಿಶೀಲಿಸಬೇಕಾಗಿದೆ ಎಂದು ನ್ಯಾಯಮೂರ್ತಿ ಮಹೇಶ್ವರಿ ಹೇಳಿದ್ದಾರೆ.

ಟಿವಿಕೆ ಅರ್ಜಿಯ ವಿಚಾರಣೆಯ ಸಮಯದಲ್ಲಿ ಸುಪ್ರೀಂ ಕೋರ್ಟ್ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿದೆ. ಟಿವಿಕೆ ಅರ್ಜಿಯು ರೋಡ್ ಶೋಗೆ ಮಾರ್ಗಸೂಚಿಗಳನ್ನು ಮಾತ್ರ ಕೋರಿತು. ಆದರೆ ಮದ್ರಾಸ್ ಪೀಠವು ನೇರವಾಗಿ ಎಸ್‌ಐಟಿ ತನಿಖೆಗೆ ಆದೇಶಿಸಿತು. ಈ ಆದೇಶವು ಸಿಬಿಐ ತನಿಖೆಯನ್ನು ನಿಷೇಧಿಸಿದ್ದ ಮಧುರೈ ಪೀಠದ ಹಿಂದಿನ ಆದೇಶಕ್ಕೆ ವಿರುದ್ಧವಾಗಿತ್ತು. ಎರಡು ಪ್ರತ್ಯೇಕ ಆದೇಶಗಳು ಸುಪ್ರೀಂ ಕೋರ್ಟ್‌ಗೆ ಸಂಬಂಧಿಸಿದ್ದಾಗಿದ್ದು, ಹೈಕೋರ್ಟ್‌ನಿಂದ ವಿವರವಾದ ವರದಿಯನ್ನು ಕೋರಿದೆ.

ಸೆಪ್ಟೆಂಬರ್ 27ರಂದು ನಡೆದ ಟಿವಿಕೆ ರ್ಯಾಲಿಯಲ್ಲಿ 41 ಜನರು ಸಾವನ್ನಪ್ಪಿದ್ದು 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿದೆ.

ತಮಿಳುನಾಡು ಸರ್ಕಾರವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಎನ್‌ಕೆ ಕೌಲ್, ಸರ್ಕಾರವು ತನ್ನ ಪ್ರತಿಕ್ರಿಯೆಯನ್ನು ಸಲ್ಲಿಸಿದ್ದು ವಿಚಾರಣೆಗೆ ಅರ್ಹವಾಗಿದೆ ಎಂದು ಹೇಳಿದರು.

ಸುಪ್ರೀಂ ಕೋರ್ಟ್ ವಿಧಿಸಿರುವ ಸಿಬಿಐ ತನಿಖೆಯ ಮೇಲಿನ ತಡೆಯಾಜ್ಞೆಯನ್ನು ತೆಗೆದುಹಾಕಬೇಕು ಮತ್ತು (ನ್ಯಾಯಾಧೀಶ ಅರುಣಾ ಜಗದೀಶನ್ ನೇತೃತ್ವದ) ಏಕಸದಸ್ಯ ತನಿಖಾ ಆಯೋಗವು ತನ್ನ ಕೆಲಸವನ್ನು ಮುಂದುವರಿಸಲು ಅನುಮತಿಸಬೇಕು ಎಂದು ರಾಜ್ಯ ಸರ್ಕಾರವೂ ಒತ್ತಾಯಿಸಿತು. ಆಯೋಗವು ಮೊದಲು ಏನು ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಬಯಸುತ್ತದೆ. ನಂತರ ಈ ವಿಷಯದ ಬಗ್ಗೆ ನಿರ್ಧರಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪ್ರಸ್ತುತ, ನ್ಯಾಯಾಲಯವು ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಕರಣಗಳನ್ನು ಹೇಗೆ ಪಟ್ಟಿ ಮಾಡಲಾಗುತ್ತಿದೆ ಮತ್ತು ವಿಚಾರಣೆ ನಡೆಸಲಾಗುತ್ತಿದೆ ಎಂಬುದನ್ನು ಗಮನಿಸಲು ಮಾತ್ರ ಬಯಸಿದೆ.

## ಗ್ರಾಹಕರ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಕ್ರಮ

**ಹನೂರು:** ಪಟ್ಟಣದ ಸೆಸ್ಕಾಂ ಕಚೇರಿ ಮುಂಭಾಗದ ಆವರಣದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಹನೂರು ಉಪ ವಿಭಾಗದ ಕಚೇರಿ ಆವರಣದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿಭಾಗ ಕಚೇರಿ ಕೊಳ್ಳೇಗಾಲ ರವರ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆ ಆಯೋಜಿಸಲಾಗಿತ್ತು.

ಸಭೆಗೆ ಆಗಮಿಸಿದ್ದ ರೈತ ಮುಖಂಡರುಗಳು ಹಾಗೂ ಗ್ರಾಹಕರು ಹಲವಾರು ಸಮಸ್ಯೆಗಳನ್ನು ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿ ಆದಷ್ಟು ಬೇಗನೆ ಸಭೆಯಲ್ಲಿ ತಿಳಿಸಿರುವ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.

ಕಾರ್ಯನಿರ್ವಾಹಕ ಇಂಜಿನಿಯರ್ ತಬಸ್ಸುಮ್ ಅವರು ಮಾತನಾಡಿ ಇಂದಿನ ಸಭೆಯಲ್ಲಿ ರೈತರು ವಿವಿಧ ಸಮಸ್ಯೆಗಳನ್ನು ಒಳಗೊಂಡ ಸುಮಾರು 18 ಅರ್ಜಿಗಳು ಬಂದಿದ್ದು ಸ್ಥಳದಲ್ಲೇ ಆ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಎಂದು ತಿಳಿಸಿ




ಕೇಂದ್ರ ಸರಕಾರದ ಯೋಜನೆಯಾಗಿರುವ ಪಿ ಎಂ ಕುಸುಮ್ ಬಿ ಯೋಜನೆಯಡಿಯಲ್ಲಿ ರೈತರು ತಮ್ಮ ಜಮೀನುಗಳಿಗೆ ಸೋಲಾರ್ ಪಂಪ್ ಸೆಟ್ ಗಳನ್ನು ಅಳವಡಿಸಕೊಳ್ಳಲು ಅರ್ಜಿ ಸಲ್ಲಿಕೆ ಪ್ರಾರಂಭವಾಗಿದೆ. ರೈತರಿಗೆ ತುಂಬಾ ಕಡಿಮೆ ಹಣ ಖರ್ಚಿನಲ್ಲಿ ಇದೊಂದು ಉತ್ತಮ ಯೋಜನೆಯಗಿದ್ದು ಕೇಂದ್ರ ಸರ್ಕಾರ ಶೇಕಡಾ 30 ರಷ್ಟು ಸಹಾಯ ಧನ ನೀಡುತ್ತದೆ, ರಾಜ್ಯ ಸರ್ಕಾರ ಶೇಕಡಾ 50 ರಷ್ಟು ಸಹಾಯ ಧನ ನೀಡುತ್ತದೆ. ತಾವುಗಳು ಕೇವಲ 20 ರಷ್ಟು ಹಣ ವ್ಯಯ ಮಾಡಬೇಕು ಆಗಾಗಿ ತುಂಬಾ ಒಳ್ಳೆಯ ಯೋಜನೆ ಇದನ್ನು ಜಮೀನು ಇರುವ ರೈತರುಗಳೂ ಸದುಪಯೋಗ ಪಡೆದುಕೊಳ್ಳಿ ಜೊತೆಗೆ ಹಲವಾರು ಏಜೇನ್ಸಿ ಗಳ ದೂರವಾಣಿ ಸಂಖ್ಯೆ ಇರುವ ಬಿತ್ತಿ ಪತ್ರವನ್ನು ತಮಗೆ ನೀಡಿದ್ದೇವೆ ಹೆಚ್ಚಿನ ಮಾಹಿತಿಗಾಗಿ ಅರ್ಜಿ ಸಲ್ಲಿಸಿದ ನಂತರ ದೂರವಾಣಿ ಮೂಲಕ ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎ ಇ ಇ ರಂಗಸ್ವಾಮಿ, ಎ ಇ ಆನಂದ್, ಜೆ ಇ ನವೀನ್, ಜೆ ಇ ಅರ್ಜುನ್, ಎಸ್ ಎ, ರಿಯಾಜ್, ಹಾಗೂ ಗ್ರಾಹಕರು ರೈತ ಮುಖಂಡರುಗಳೂ ಇನ್ನಿತರರಿದ್ದರು.

## ಸಿಲಿಂಡರ್ ಸ್ಫೋಟ; 7 ಮಂದಿ ಗಂಭೀರ ಗಾಯ

**ಕೊಪ್ಪಳ:** ಜಿಲ್ಲೆಯ ಗಂಗಾವತಿ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ಭೀಕರ ಸಿಲಿಂಡರ್ ಸ್ಫೋಟ ಸಂಭವಿಸಿ ಏಳು ಜನರಿಗೆ ಗಂಭೀರ ಗಾಯಗಳಾಗಿವೆ. ಹೊಸ ಗ್ಯಾಸ್ ಸಿಲಿಂಡರ್ ಅಳವಡಿಕೆ ಮಾಡುತ್ತಿದ್ದ ವೇಳೆ ಇರಿಸಿದ್ದ ಸಿಲಿಂಡರ್ ಸ್ಫೋಟಗೊಂಡಿದ್ದು, ಮನೆಯಲ್ಲಿದ್ದವರೆಲ್ಲರೂ ತೀವ್ರ ಗಾಯಗೊಂಡ ದುರ್ಘಟನೆ ನಡೆದಿದೆ.

ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ನಡೆದ ಘಟನೆಯೇನು?

ಹೆಬ್ಬಾಳ ಗ್ರಾಮದ ಒಂದು ಮನೆಯಲ್ಲಿ ಹಳೆ ಸಿಲಿಂಡರ್ ಖಾಲಿಯಾಗಿ ಹೊಸ ಸಿಲಿಂಡರ್ ನ್ನು ಫಿಕ್ಸ್ ಮಾಡುತ್ತಿದ್ದರು. ಹೊಸ ಸಿಲಿಂಡರ್ ಅಳವಡಿಸುತ್ತಿದ್ದಾಗ ಅಚಾನಕಾಗಿ ಸ್ಫೋಟ ಸಂಭವಿಸಿ, ಮನೆಯ ಗೋಡೆಗಳು ಕುಸಿದುಬಿದ್ದಿದೆ.

ಅವಘಡದಲ್ಲಿ ಗಾಯಗೊಂಡವರನ್ನು ರಾಜ (38), ಸುರೇಶ್ (35), ದುರುಗಪ್ಪ (27), ಹುಸೇನಮ್ಮ (40), ನಾಗರಾಜ (18), ದುರುಗಮ್ಮ (17), ವಿಷ್ಣು (16), ಶ್ರೀಕಾಂತ್ (22) ಎಂದು ಗುರುತಿಸಲಾಗಿದೆ. ಎಲ್ಲರನ್ನೂ ಗಂಗಾವತಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳ ಸ್ಥಿತಿ ಕಂಡು ಕುಟುಂಬಸ್ಥರು ಕಣ್ಣೀರು ಹಾಕುತ್ತಿದ್ದಾರೆ.

ಪ್ರಾಥಮಿಕ ವರದಿಯ ಪ್ರಕಾರ, ಹೊಸ ಸಿಲಿಂಡರ್ ಅಳವಡಿಸುತ್ತಿರುವಾಗ ಗ್ಯಾಸ್ ಲೀಕ್ ಆಗಿ ಸ್ಫೋಟ ಸಂಭವಿಸಿದಂತೆ ತೋರುತ್ತದೆ.

ಸಿಲಿಂಡರ್ ಅಳವಡಿಕೆಯಲ್ಲಿ ಸುರಕ್ಷತಾ ನಿಯಮಗಳನ್ನು ಪಾಲಿಸದೆ ಇರುವುದು ಕಾರಣವಾಗಿರಬಹುದು ಎಂದು ಪೊಲೀಸರು ತನಿಖೆಯಲ್ಲಿ ಸೂಚಿಸಿದ್ದಾರೆ. ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖಾ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆ ನಡೆಸಿದ್ದಾರೆ.

## ಭಾರತದಲ್ಲಿ 11,718 ಕೋಟಿ ರೂ ವೆಚ್ಚದಲ್ಲಿ 'ಡಿಜಿಟಲ್ ಜನಗಣತಿ': ಕೇಂದ್ರ ಸಂಪುಟ ಅನುಮೋದನೆ!


**ನವದೆಹಲಿ:** ಭಾರತದಲ್ಲಿ ಇದೇ ಮೊದಲ ಬಾರಿಗೆ 11,718 ಕೋಟಿ ರೂ ವೆಚ್ಚದಲ್ಲಿ 2027ರಲ್ಲಿ ಡಿಜಿಟಲ್ ಜನಗಣತಿ ಕೈಗೊಳ್ಳುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಸಭೆ ಶುಕ್ರವಾರ ಅನುಮೋದನೆ ನೀಡಿದೆ. ವಿಶ್ವದ ಅತಿದೊಡ್ಡ ಜನಗಣತಿ ಎಂದೇ ಹೇಳಲಾದ ಭಾರತದ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ.


ಕ್ಯಾಬಿನೆಟ್ ನಿರ್ಧಾರದ ವಿವರಗಳನ್ನು ಹಂಚಿಕೊಂಡ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, 2026ರ ಏಪ್ರಿಲ್ ಮತ್ತು ಸೆಪ್ಟೆಂಬರ್ ನಡುವೆ ಮೊದಲ ಹಂತದಲ್ಲಿ ಮನೆ ಪಟ್ಟಿ ಮತ್ತು ವಸತಿ ಗಣತಿಯನ್ನು ನಡೆಸಲಾಗುವುದು. ಫೆಬ್ರವರಿ 2027ರಲ್ಲಿ ನಡೆಯಲಿರುವ ಎರಡನೇ ಹಂತದಲ್ಲಿ ಜನಸಂಖ್ಯೆ ಗಣತಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಕೇಂದ್ರಾಡಳಿತ ಪ್ರದೇಶವಾದ ಲಡಾಖ್ ಮತ್ತು ಜಮ್ಮು ಮತ್ತು ಕಾಶ್ಮೀರದ ಹಿಮದಿಂದ ಆವೃತವಾಗಿರುವ ಪ್ರದೇಶಗಳು, ಹಾಗೆಯೇ ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಿಗೆ ಜನಗಣತಿಯನ್ನು ಸೆಪ್ಟೆಂಬರ್ 2026 ರಲ್ಲಿ ನಡೆಸಲಾಗುವುದು ಎಂದರು. ಸುಮಾರು 30 ಲಕ್ಷ ಕ್ಷೇತ್ರ ಕಾರ್ಯಕರ್ತರು ಜನಗಣತಿಯಲ್ಲಿ ತೊಡಗಿದ್ದು, 1.5 ಕೋಟಿಗೂ ಹೆಚ್ಚು ಮಾನವ ದಿನದ ಉದ್ಯೋಗವನ್ನು ಸೃಷ್ಟಿಸಲಿದ್ದಾರೆ ಎಂದು ಸಚಿವರು ತಿಳಿಸಿದರು.

**ಪೋರ್ಟಲ್ ಅಭಿವೃದ್ಧಿ:** 2027 ರ ಜನಗಣತಿಯು ಭಾರತದ ಮೊಟ್ಟಮೊದಲ ಡಿಜಿಟಲ್ ಜನಗಣತಿಯಾಗಿದೆ. "ಡೇಟಾ ನೀಡುವುದು ಅತ್ಯುತ್ತಮವಾಗಿದ್ದು, ಬಳಕೆದಾರ ಸ್ನೇಹಿಯಾಗಿದೆ. ಅದರಿಂದ ನೀತಿ ನಿರೂಪಣೆಗೆ ಅಗತ್ಯವಿರುವ ಎಲ್ಲಾ ಪ್ರಶ್ನೆಗಳು ಬಟನ್ ಕ್ಲಿಕ್‌ನಲ್ಲಿ ಲಭ್ಯವಿರುತ್ತವೆ. ಸಂಪೂರ್ಣ ಜನಗಣತಿ ಪ್ರಕ್ರಿಯೆಯನ್ನು ಸೂಕ್ತ ಸಮಯದಲ್ಲಿ ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು 'ಜನಗಣತಿ ನಿರ್ವಹಣೆ ಮತ್ತು ಮಾನಿಟರಿಂಗ್ ಸಿಸ್ಟಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಈ ದೊಡ್ಡ ಪ್ರಮಾಣದ ಡಿಜಿಟಲ್ ಕಾರ್ಯಾಚರಣೆಗೆ ಸೂಕ್ತ ಭದ್ರತಾ ವೈಶಿಷ್ಟ್ಯಗಳೊಂದಿಗೆ ಸಾರ್ವಜನಿಕರಿಗೆ ಸ್ವಯಂ-ಎಣಿಕೆಗೆ ಆಯ್ಕೆಯನ್ನು ಒದಗಿಸಲಾಗುವುದು ಎಂದು ಅವರು ಹೇಳಿದರು.

**ಜನಗಣತಿ ವೇಳೆ ಜಾತಿ ಗಣತಿ:** 2025 ರ ಏಪ್ರಿಲ್ 30 ರಂದು ನಡೆದ ರಾಜಕೀಯ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯು 2027 ರ ಜನಗಣತಿಯಲ್ಲಿ ಜಾತಿ ಗಣತಿ ಸೇರಿಸಲು ನಿರ್ಧರಿಸಿತ್ತು. "ನಮ್ಮ ದೇಶದಲ್ಲಿನ ವಿಶಾಲವಾದ ಸಾಮಾಜಿಕ ಮತ್ತು ಜನಸಂಖ್ಯಾ ವೈವಿಧ್ಯತೆ ಮತ್ತು ಸಂಬಂಧಿತ ಸವಾಲುಗಳನ್ನು ಗಮನಿಸಿದರೆ, ಎರಡನೇ ಹಂತದಲ್ಲಿನ ಜನಗಣತಿ ವೇಳೆ ಜಾತಿ ಡೇಟಾವನ್ನು ವಿದ್ಯುನ್ಮಾನವಾಗಿ ಸಂಗ್ರಹಿಸಲಾಗುವುದು ಎಂದು ಸಚಿವರು ತಿಳಿಸಿದರು.

# ಮನ್ ಕಿ ಬಾತ್‌ನಲ್ಲಿ ಮೋದಿಜೀ ತಿಳಿಸಿದ ಕಮಲ ಬೀಜಗಳ ಆರೋಗ್ಯ ಗುಟ್ಟು





ಇತ್ತೀಚಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಬೊಜ್ಜಿನ ಸಮಸ್ಯೆ ಹೆಚ್ಚುತ್ತಿರುವ ಕುರಿತಂತೆ ಕಳವಳ ವ್ಯಕ್ತಪಡಿಸಿ ಹಾಗೆ ಬೊಜ್ಜು ಕಡಿಮೆ ಮಾಡಲು ಕರೆ ನೀಡಿದ್ದರು. ಇದಕ್ಕಾಗಿ ಕಡಿಮೆ ಅಡುಗೆ ಎಣ್ಣೆ ಬಳಸುವಂತೆಯೂ ಹಾಗೂ ಪ್ರೋಟಿನ್ ಆಹಾರ ಸೇವಿಸುವಂತೆ ಅವರು ಕಿವಿ ಮಾತು ಹೇಳಿದ್ದನ್ನು ನಾವು ನೀವೆಲ್ಲರೂ ಕೇಳಿದ್ದೇವೆ .

'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಆಹಾರದಲ್ಲಿ ಕಡಿಮೆ ಎಣ್ಣೆ ಬಳಸುವುದು ಮತ್ತು ಸ್ಥೂಲಕಾಯತೆ ನಿಭಾಯಿಸುವುದರ ಜೊತೆಗೆ ದೇಹಕ್ಕೆ ಉತ್ತಮ ಆಹಾರ ಸೇವನೆ ನಮ್ಮ ನಿತ್ಯದ ಚಟುವಟಿಕೆ ಯಾಗಬೇಕೆಂಬುನ್ನು ತಿಳಿಸುತ್ತಾ, ನಾನು 365 ದಿನದಲ್ಲಿ ಕನಿಷ್ಠ 300 ದಿನವಾದರು ಕಮಲದ ಬೀಜ ಅಥವಾ ತಾವರೆಯ ಬೀಜ ಸೇವಿಸುತ್ತೇನೆ ಎಂದಿದ್ದರು. ಫಾಕ್ಸ್‌ನಟ್ ಎಂದು ಕರೆಯಲ್ಪಡುವ ಈ ಬೀಜಗಳ ಸೇವನೆ ನಮ್ಮ ದೇಹಕ್ಕೆ ಯಾವ ರೀತಿಯ ಉಪಯೋಗಕ್ಕೆ ಕಾರಣವಾಗಿವೆ. ಇದರಲ್ಲಿ ಯಾವ ಅಂಶವಿದೆ ಅನ್ನೋದನ್ನು ನಾವಿಂದು ತಿಳಿಯೋಣ.

ಹುರಿದಾಗ ಮೆಕ್ಕೆಜೋಳದಂತೆಯೇ ಹೂವಿನಂತೆ ಅರಳುವ ಮಖನಾ ನಮ್ಮ ಹಿರಿಯರ ಪಾಲಿನ ಪಾಪ್ ಕಾರ್ನ್ ಆಗಿತ್ತು ಎಂದರೆ ತಪ್ಪಾಗಲಾರದು. ಡ್ರೈ ಫ್ರೂಟ್ಸ್ ನಮ್ಮ ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನಕಾರಿ ಆಗಿದೆ ಎಂದು ಎಲ್ಲರಿಗೂ ತಿಳಿದಿರುವ ವಿಚಾರ. ಅದರಲ್ಲೂ ಗೋಡಂಬಿ, ಬಾದಾಮಿ ಮತ್ತು ಪಿಸ್ತಾಗಳಂತಹ ಬೀಜಗಳ ಸೇವನೆ ಅನೇಕ ರೋಗಗಳಿಂದ ನಮ್ಮನ್ನು ರಕ್ಷಿಸುತ್ತದೆ. ಅದೇ ರೀತಿ ಕಮಲದ ಹೂವಿನ ಬೀಜಗಳನ್ನು ತಿನ್ನುವುದು ನಮಗೆ ಅಸಂಖ್ಯಾತ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ.

ಈ ಬೀಜದ ಕರಿ, ಸಿಹಿತಿಂಡಿ ಸೇರಿ ಹಲವು ಖಾದ್ಯಗಳ ತಯಾರಿಕೆಗೆ ಬಳಸಲಾಗುತ್ತಿದೆ. ಅಷ್ಟೇ ಅಲ್ಲದೇ ಕಮಲದ ಬೇರನ್ನು ಔಷಧಿಗಾಗಿ ಬಳಸಲಾಗುತ್ತದೆ ಎನ್ನುವುದು ಹೆಚ್ಚಿನ ಜನರಿಗೆ ಗೊತ್ತೇ ಇಲ್ಲ. ತಾವರೆ ಗಿಡದ ಬೇರು ಫೈಬರ್ ಮತ್ತು ಪ್ರೋಟೀನ್, ವಿಟಮಿನ್ ಮತ್ತು ಮಿನರಲ್ ಗಳಿಂದ ಕೂಡಿದೆ. ಇದು ರಕ್ತಹೀನತೆಯಿಂದ ರಕ್ತದೊತ್ತಡಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ದೂರವಿಡಲು ಸಹಕಾರಿಯಾಗಿದೆ. ಮಾತ್ರವಲ್ಲ, ಲೋಟಸ್ ರೂಟ್ ನಿಂದ ಚಿಪ್ಸ್, ಸೂಪ್, ಟೀ ಕೂಡಾ ತಯಾರಿಸಬಹುದು.

ಮಖನಾ ಅಥವಾ ಈಂಥ ಓಣಾ ಅಥವಾ ಕಮಲದ ಬೀಜ ಎಂದೂ ಕರೆಯುವ ಈ ಬೀಜಗಳು ಪಾಪ್ ಕಾರ್ನ್ ನಂತೆಯೇ ಹುರಿದಾಗ ಅರಳಿನಂತೆ ಅರಳುವ ಕಾಳುಗಳಾಗಿವೆ. ಆದರೆ ಪಾಪ್ ಕಾರ್ನ್ ನಂತೆ ಬಿರಿಯದೇ ಪುಟ್ಟ ಟೆನ್ನಿಸ್ ಬಾಲ್ ಗಳಂತೆ ಉಬ್ಬುತ್ತವೆ. ಇದೇ ಕಾರಣಕ್ಕೆ ಈ ಕಾಳುಗಳಿಗೆ ಹಿಂದಿಯಲ್ಲಿ ಫೂಲ್ ಮಖನಾ ಎಂದೂ ಕರೆಯುತ್ತಾರೆ. ಲೋಟಸ್ ಬೀಜಗಳನ್ನು ನೇರವಾಗಿ ತಿನ್ನಬಹುದು ಅಥವಾ ಹುರಿದು ಮತ್ತು ಸಿಹಿ ಖಾದ್ಯ ತಯಾರಿಸಿ ಸಹ ತಿನ್ನಬಹುದು.

ಕಮಲದ ಬೀಜವನ್ನು ಬಿಹಾರದಲ್ಲಿ ಅತೀ ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲಿ ಇದೊಂದು ಸಾಂಪ್ರದಾಯಿಕ ಬೆಳೆಯಾಗಿದೆ.ಇದು ನಾವು ಈಗ ಜಾಗತಿಕ ಮಾರುಕಟ್ಟೆಗಳಿಗೆ ತೆಗೆದುಕೊಳ್ಳಬೇಕಾದ ಸೂಪರ್‌ಫುಡ್ ಆಗಿದೆ. ಅದಕ್ಕಾಗಿಯೇ ಈ ವರ್ಷದ ಬಜೆಟ್‌ನಲ್ಲಿ ಈ ಕಮಲದ ಬೀಜ ಬೆಳೆಯುವ ರೈತರ ಪ್ರಯೋಜನಕ್ಕಾಗಿ ಮಖಾನಾ ಮಂಡಳಿಯನ್ನು ರಚಿಸುವುದಾಗಿ ಸರ್ಕಾರ ಘೋಷಿಸಿದೆ ಎಂದು ಭಾಗಲ್ಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರಧಾನಿ ಮೋದಿ ಹೇಳಿದ್ದರು.

**ಕಮಲದ ಬೀಜಗಳಲ್ಲಿ ಎಷ್ಟೆಲ್ಲಾ ಆರೋಗ್ಯ ಅಡಗಿದೆ ಗೊತ್ತೇ!:** ಲೋಟಸ್ ಬೀಜಗಳು ಪೌಷ್ಟಿಕಾಂಶದ ಅಂಶಗಳಿಂದ ತುಂಬಿದ್ದು, ಇದು ಆರೋಗ್ಯಕರ ಆಹಾರಕ್ಕಾಗಿ ಅತ್ಯುತ್ತಮ ಆಯ್ಕೆಯಾಗಿದೆ. ವಿಟಮಿನ್ ಬಿ, ವಿಟಮಿನ್ ಸಿ, ವಿಟಮಿನ್ ಎ ಮತ್ತು ವಿಟಮಿನ್






ಇ ಮತ್ತು ಪೊಟ್ಯಾಸಿಯಮ್ ಮತ್ತು ಸೋಡಿಯಂನಂತಹ ಅಗತ್ಯ ಖನಿಜಗಳೊಂದಿಗೆ ಪ್ರೋಟೀನ್, ಕಾರ್ಬೋಹೈಡ್ರೇಟ್ಗಳು ಮತ್ತು ವಿಟಮಿನ್ಗಳನ್ನು ಹೊಂದಿದೆ. ಹೀಗಾಗಿ ಪ್ರಧಾನಿ ಮೋದಿ ಅವರು ಆಹಾರದಲ್ಲಿ ಈ ಬೀಜದ ಸೇವನೆಯನ್ನು ಹೆಚ್ಚಿಸುವಂತೆ ಕರೆ ನೀಡಿದರು.


## ಆರೋಗ್ಯ ಭಾಗ್ಯ

- ಸಾಮಾನ್ಯವಾಗಿ ನಾವು ಕ್ಯಾಲ್ಸಿಯಂ ಪಡೆಯಲು ಹಾಲು, ಮೊಸರು, ಬೆಣ್ಣೆ ಇತ್ಯಾದಿಗಳನ್ನು ತೆಗೆದುಕೊಳ್ಳುತ್ತೇವೆ. ಆದರೆ ಇದರ ಬದಲಿಗೆ ಕ್ಯಾಲ್ಸಿಯಂ ಪೋಷಕಾಂಶವು ಕಮಲದ ಬೀಜಗಳಲ್ಲಿಯೂ ಲಭ್ಯವಿದೆ. ಈ ಕ್ಯಾಲ್ಸಿಯಂ ಮೂಳೆಗಳನ್ನು ಆರೋಗ್ಯವಾಗಿಡಲು ಸಹಾಯ ಮಾಡುತ್ತದೆ. ಹಾಗಾಗಿ ಕೀಲು ನೋವಿನ ಸಮಸ್ಯೆಯಿಂದ ಬಳಲುತ್ತಿರುವವರು ಇದನ್ನು ತಿನ್ನುವುದರಿಂದ ಪ್ರಯೋಜನ ಪಡೆಯಬಹುದು.
- ಕಮಲದ ಬೀಜಗಳನ್ನು ದಿನಕ್ಕೆ 2 ಅಥವಾ 4 ಬಾರಿ ಸೇವಿಸುವುದರಿಂದ ವ್ಯಕ್ತಿಯು ಕುದುರೆಯಷ್ಟು ಬಲ ಬರುತ್ತದೆ ಎಂಬುದು ತಜ್ಞರ ಅಭಿಪ್ರಾಯ.
- ಕಮಲದ ಬೀಜಗಳು ದೇಹದಲ್ಲಿ ಕೊಬ್ಬು ಶೇಖರಣೆಯಾಗುವುದನ್ನು ತಡೆಯುತ್ತವೆ
- ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಮಂದಿ ಅತಿಯಾದ ಒತ್ತಡದಿಂದ ನಿದ್ರಾಹೀನತೆಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದರೆ ಕಮಲದ ಬೀಜಗಳ ಸೇವನೆಯಿಂದ ನಿದ್ರೆ ಸಮಸ್ಯೆಯಿಂದ ಪಾರಾಗಬಹುದು.
- ತಾವರೆ ಬೇರು ಫೈಬರ್ ಅಂಶದಿಂದ ಸಮೃದ್ಧವಾಗಿದೆ. ಇದು ಮಲ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ನೀಡಲು ಸಹಕಾರಿಯಾಗಿದೆ. ಇದರ ಕಾಂಡಗಳಲ್ಲಿರುವ ಪೋಷಕಾಂಶಗಳು ಮಲಬದ್ಧತೆ, ಜೀರ್ಣಕಾರಿ ಅಸ್ವಸ್ಥತೆಗಳನ್ನು ಗುಣಪಡಿಸಲು ಸಹಾಯ ಮಾಡುತ್ತದೆ.
- ಕಮಲದ ಬೀಜಗಳಲ್ಲಿರುವ ಒಂದು ನಿರ್ದಿಷ್ಟ ಕಿಣ್ವವು ದೇಹದಲ್ಲಿ ಕಂಡುಬರುವ ಪ್ರೋಟೀನ್‌ಗಳ ಆರೋಗ್ಯವನ್ನು ಹೆಚ್ಚಿಸುವಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತದೆ. ಇದಲ್ಲದೆ, ದೇಹದ ಹಾನಿಗೊಳಗಾದ ಪ್ರೋಟೀನ್‌ಗಳನ್ನು ಸರಿಪಡಿಸಲು ಅವು ತುಂಬಾ ಪರಿಣಾಮಕಾರಿಯಾಗಿರುತ್ತವೆ.
- ಸ್ನಾಯು ಸೆಳೆತ ಅಥವಾ ಸ್ನಾಯು ನೋವಿನಂತಹ ಸಮಸ್ಯೆಗಳನ್ನು ಎದುರಿಸುತ್ತಿರುವವರು ಕಮಲದ ಬೀಜಗಳನ್ನು ಸೇವಿಸಬಹುದು. ಅದರಲ್ಲೂ ಮಕ್ಕಳಿಗೆ ಕಮಲದ ಬೀಜಗಳನ್ನು ನೀಡಿದರೆ ಅವರ ಸ್ನಾಯುಗಳು ವೇಗವಾಗಿ ಬೆಳೆಯುತ್ತವೆ.
- ಕಬ್ಬಿಣ ಮತ್ತು ತಾಮ್ರದ ಪ್ರಮುಖ ಅಂಶಗಳು ಕಮಲದ ಬೇರುಗಳಲ್ಲಿ ಇರುತ್ತವೆ. ಕೆಂಪು ರಕ್ತ ಕಣಗಳ ಉತ್ಪಾದನೆಯಲ್ಲಿ ಇದು ಪ್ರಮುಖ ಪಾತ್ರವಹಿಸುತ್ತವೆ. ಹಾಗಾಗಿ ರಕ್ತಹೀನತೆಯ ಸಮಸ್ಯೆಗೆ ಮುಕ್ತಿ ನೀಡಲು ಸಹಕಾರಿಯಾಗಿದೆ. ಅಷ್ಟೇ ಅಲ್ಲ, ರಕ್ತದ ಹರಿವನ್ನು ಹೆಚ್ಚಿಸುತ್ತದೆ. ಜೊತೆಗೆ, ಇದು ರಕ್ತ ಪರಿಚಲನೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.
- ಮಧುಮೇಹದಿಂದ ಬಳಲುತ್ತಿರುವವರು ನಾರಿನಂಶವನ್ನು ಹೊಂದಿರುವ ಕಮಲದ ಬೀಜಗಳನ್ನು ಸೇವಿಸಬಹುದು. ಇದರಲ್ಲಿರುವ ಆ?ಯಂಟಿಆಕ್ಸಿಡೆಂಟ್ಗಳು ಮಧುಮೇಹದ ಪರಿಣಾಮಗಳನ್ನು ನಿಯಂತ್ರಿಸಬಹುದು.
- ಈ ಬೀಜದ ಸೇವನೆಯು ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಮತ್ತು ಆರೋಗ್ಯಕರ ರಕ್ತದೊತ್ತಡವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ.
- ತೂಕ ಇಳಿಸಿಕೊಳ್ಳಲು ಬಯಸುವವರು ಕಮಲದ ಬೀಜಗಳನ್ನು ತೆಗೆದುಕೊಳ್ಳಬಹುದು. ಏಕೆಂದರೆ ಇದರಲ್ಲಿ ಕ್ಯಾಲೋರಿಗಳು ತುಂಬಾ ಕಡಿಮೆಯಾಗಿದೆದ್ದು ತೆಗೆ ನಮ್ಮ ದೇಹಕ್ಕೆ ಅಗತ್ಯವಿರುವ ಎಲ್ಲಾ ಪೋಷಕಾಂಶಗಳನ್ನು ನಾವು ಪಡೆಯುತ್ತೇವೆ.
- ಇಂದು ಹೆಚ್ಚಿನ ಜನರು ಅತಿಯಾದ ಒತ್ತಡದಿಂದ ನಿದ್ರಾಹೀನತೆಯಂತಹ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಂತಹವರು ಮಲಗುವ ಮುನ್ನ ಒಂದು ಲೋಟ ಹಾಲಿನಲ್ಲಿ ಕೆಲವು ಕಮಲದ ಬೀಜದ ಪುಡಿ ಅಥವಾ ಬೀಜವನ್ನು ಹಾಕಿ ಚೆನ್ನಾಗಿ ಕುದಿಸಿ ಸೇವಿಸಬೇಕು. ಇದರಿಂದ ಅವರಿಗೆ ಉತ್ತಮ ಮತ್ತು ಶಾಂತ ನಿದ್ರೆ ಬರುತ್ತದೆ.
- 13.ಕಮಲದ ಬೇರನ್ನು ಸೇವಿಸುವ ಮೂಲಕ ನಾವು ನಮ್ಮ ದೇಹವನ್ನು ವಿವಿಧ ಸೋಂಕುಗಳು, ಸಿಡುಬು, ಕುಷ್ಠರೋಗ ಮತ್ತು ರಿಂಗ್‌ವರ್ಮ್‌ನಂತಹ ಶಿಲೀಂಧ್ರ ರೋಗಗಳನ್ನು ತಡೆಯಬಹುದಾಗಿದೆ.



ಸೌಮ್ಯಸನತ್

## ಪದಬಂಧ



### ಎಡದಿಂದ ಬಲಕ್ಕೆ.....

2. ಒತ್ತೆ ಇಟ್ಟಿದ್ದರಲ್ಲಿ ಈ ಜಲಚರಕ್ಕೇನು ಕೆಲಸ....(3)
5. ಇವು ಉತ್ಸಾಹದಿಂದ ಮಾಡುವ ದೈಹಿಕ ಚಟುವಟಿಕೆಗಳು......(4)
7. ಲಾಲಾರಸವನ್ನು ಆಡು ಮಾತಿನಲ್ಲಿ ಹೀಗನ್ನಿ....(2)
8. ಇಲ್ಲಿ ಲತೆಗಳು 'ಹೇರಳವಾಗಿವೆ'.......(4)
9. ಮಲಿನವಾಗುವುದು ಅಥವಾ ಬಣ್ಣ ಕಳೆದುಕೊಳ್ಳುವುದು.....(2)
11. 'ಮುದ್ರೆ' ಹಾಕಿಸಿಕೊಳ್ಳುವ ಮೋಹವೇಕೆ....?(3)
12. ವಿದೇಶಗಳಿಗೂ ಮಾಡುವ ಸರಕು ಸಾಗಾಣಿಕೆ....(2)
14. ಅಕ್ಕನ ಪತಿ ಹಾಡಿದ್ದು...ಈ ಮಧುರ ಗೀತೆ.....(4)
17. ಜಾತಕದಲ್ಲಿರುವ ಜನಿಸಿದ್ದು........(2)
18. ಜತನ ಮಾಡಿದ ಬುದ್ಧಿವಂತಿಕೆ.......(4)
19. ಗಲಗಲನೆ ನಡೆದ ಗಲಾಟೆ...... .(3)

### ಮೇಲಿನಿಂದ ಕೆಳಕ್ಕೆ.....

1. ಈ ಹಬ್ಬದಲ್ಲಿ ಹಿಂದಿಯ ಕುರಿ ಇದೆಯೆ?.....(3)
2. ಇದು ಹಳತಾಗಿ ಸಡಿಲವಾದ ಅವಶೇಷ......(2)
3. ನಯವಾದದ್ದನ್ನು ಹೀಗೆನ್ನಿ.....(3)
4. ಎರೆಡಕ್ಷರದ ಕೋಲಾಹಲ.....ಗಲಭೆ......(2)
6. ದರದರ ಎಳೆದಿದ್ದಕ್ಕೆ ಮಾಡಿದ ಜೋರು......(3)
7. ಇವನು ಒಟ್ಟಿಗೆ ಇರುವ ಒಡನಾಡಿ....... .(4)
8. ........ಇದು ನಿಮಗಾಗಿ ಬಿಟ್ಟ ಪದ........(5)
10. ಪ್ರಭಾವ ಬೀರಿದ ಸುಂದರವಾದ ಬೆಳಗು.....(4)
13. ಕಣದಲ್ಲಿ ಮಾಡಿಸಿದ ವಿವಾಹ......(3)
15. ಕುಶಲತೆಯಿಂದ ನೇಯ್ದು, ಗೂಡು ಕಟ್ಟಿ ಪ್ರಸಿದ್ಧವಾದ ಹಕ್ಕಿ.....(3)
16. ಮನಸಿನಿಂದ ಮಾಡಿದ ಕೋರಿಕೆ......(3)
17. ಇದು ಕಳ್ಳನ 'ಹೆಜ್ಜೆಯ ಗುರುತೆ?'....
18. ಇದು ಮಾರ್ಜಾಲವೇ ಬೀಸಿದ ಬಲೆಯೆ.....(2)



ಜ್ಯೋತಿ ರಾಜೇಶ್

# ಜನರ ಅಸಹಾಯಕತೆಯಲ್ಲೂ ದುಡ್ಡು ಮಾಡುವ ದಗಲ್‌ಬಾಜಿಗಳು....!!



ಮೊನ್ನೆ ಕೆಲವು ಆಂತರಿಕ ಕಾರಣಗಳಿಂದಾಗಿ ಇಂಡಿಗೋ ವಿಮಾನದ ನೂರಾರು ವಿಮಾನಗಳು ಧಿಡೀರ್ ಎಂದು ರದ್ದಾಗಿದ್ದಕ್ಕೇ ದೇಶದ ಎಲ್ಲಾ ವಿಮಾನನಿಲ್ದಾಣಗಳಲ್ಲೂ ಪ್ರಯಾಣಿಕರು ಸಿಕ್ಕಾಪಟ್ಟೆ ಪರದಾಡುವಂತಾಗಿತ್ತು. ಅವರ ಪರಿಸ್ಥಿತಿ, ಸಾಲು ಸಾಲು ಹಬ್ಬಗಳ ರಜೆ ಸಿಕ್ಕಾಗ ಮೆಜೆಸ್ಟಿಕ್ ಬಸ್ ಸ್ಟಾಂಡಿನಲ್ಲಿ ತುಂಬಿರುವ ಪ್ರಯಾಣಿಕರಿಗಿಂತಲೂ ಕಡೆಯಾಗಿತ್ತು. ಏರ್‌ಪೋರ್ಟ್ ಗಳಂತೂ ಥೇಟು ಸಿಟಿ ಬಸ್ ಸ್ಟಾಂಡಿಗಿಂತಲೂ ಗಿಜಿಗಿಜಿ ಎನ್ನುತ್ತಾ ರಣರಗಳೆಯಾಗಿದ್ದ ದೃಶ್ಯ ಕಂಡುಬಂದಿತ್ತು. !!

ಆದರೆ ತಮ್ಮವೇ ಆದ ಹತ್ತಾರು ಅವಸರದ ಕಾರಣಗಳಿಂದಾಗಿ ತಮ್ಮ ತಮ್ಮ ಗಮ್ಯ ತಲುಪಬೇಕಾಗಿದ್ದ ಪ್ರಯಾಣಿಕರ ಇಂಥಾ ಅಸಹಾಯಕ ಪರಿಸ್ಥಿತಿಗೆ ಹಾಗೂ ಇಂಡಿಗೋ ವಿಮಾನದ ಬದಲು ಬೇರೆ ವಿಮಾನ ಹಿಡಿದಾದರೂ ಜರ್ನಿ ಮಾಡಬೇಕಾಗಿದ್ದ ಪ್ರಯಾಣಿಕರ ಒತ್ತಡದ ಆ ಸನ್ನಿವೇಶಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾಗಿದ್ದ ವಿಮಾನ ಸಂಸ್ಥೆಗಳು_ ಜನರ ಈ ದಿಕೆಟ್ಟ ಸ್ಥಿತಿಯಲ್ಲೂ ಇನ್ನಷ್ಟು ದುಡ್ಡು ಮಾಡಿಕೊಳ್ಳುವ ಮೂರೂಬಿಟ್ಟ ಹೆಜ್ಜೆ ಇಟ್ಟಿರುವುದು ಅಪ್ಪಟ ನಾಚಿಕೆಗೇಡು.

ಮನುಷ್ಯನ ಸನ್ನಿವೇಶದ ಅಸಹಾಯಕತೆ, ಅವಸರ , ಅವಶ್ಯಕತೆ, ಅತಂತ್ರತೆ ಅಥವಾ ದೌರ್ಬಲ್ಯದ ಲಾಭ ಪಡೆಯುವಲ್ಲಿ ಎಲ್ಲಾ ಸೇವಾ ಕ್ಷೇತ್ರಗಳೂ ತಾಮುಂದು ನಾ ಮುಂದು ಎನ್ನುವ ಕಾಂಪಿಟೇಷನ್ನು ಇರುವುದು ನಿಜವಾದರೂ ಅದು ಈ ರೀತಿ ಅಮಾನವೀಯ ಮಟ್ಟಕ್ಕೆ ಮುಟ್ಟಬಾರದಿತ್ತು.

ಇದೇ ಉದಾಹರಣೆಯಲ್ಲಿ, ಇಂಡಿಗೋ ವಿಮಾನಗಳ ಸಂಚಾರ ರದ್ದಾಗಿದ್ದಕ್ಕೆ ಇದರ ಲಾಭ ಪಡೆದ ಇತರೆ ಸಂಸ್ಥೆಗಳು ದೆಹಲಿಯಿಂದ ಕೊಚ್ಚಿಗೆ ಇರುವ ನಾರ್ಮಲ್ ಪ್ರಯಾಣ ದರ ?. 5000 ಕ್ಕೆ ಬದಲು ಸುಮಾರು ಎಂಟರಿಂದ ಹತ್ತುಪಟ್ಟು ಹೆಚ್ಚಿಸಿದ್ದಾರೆ. ಅಂದರೆ ಅದನ್ನು ಧಿಡೀರ್ ಎಂದು ?. 40000 ದಿಂದ ? 50000/– ಕ್ಕೆ ಹೆಚ್ಚಿಸಿ ಜನರನ್ನು ಸುಲಿಗೆ ಮಾಡಿದ್ದಾರೆ. ಈ ವಿಮಾನ ಸಂಸ್ಥೆಗಳಿಗೆ " ಮಾನ " ಇದ್ದಿದ್ದರೆ ಹೀಗೆ ಶೋಷಿಸುತ್ತಿರಲಿಲ್ಲ....!

ಈಗ ಹೇಳಿ...ಇದನ್ನು ಹಗಲು ದರೋಡೆ ಅಂತೀರೋ ಸುಲಿಗೆ ಅಂತೀರೋ ಅಥವಾ ಮನುಷ್ಯನ ಅಸಹಾಯಕತೆಯನ್ನು ಹೀಗೂ ದುರುಪಯೋಗ ಮಾಡಿಕೊಳ್ಳಬಹುದೆಂಬುದಕ್ಕೆ ನಿದರ್ಶನ ಅಂತೀರೋ..! ಮತ್ತೆ ನೋಡಿದರೆ ಇವು ಹೇಳಿಕೇಳಿ ಸೇವಾಕ್ಷೇತ್ರಗಳು.!

ನನಗನಿಸಿದ ಮಟ್ಟಿಗೆ ಜನರ ಅಸಹಾಯಕತೆಯ ದಿಕ್ಕೆಟ್ಟ ಪರಿಸ್ಥಿತಿಯ ಲಾಭ ಪಡೆದು ಅವರಿಗೆ ಇನ್ನಷ್ಟು ತೊಂದರೆ ಕೊಟ್ಟು ದುಡ್ಡು ಮಾಡುವ ವಿಧಾನ ಇದೆಯಲ್ಲಾ.. ಅದು ಯಾವ ಭ್ರಷ್ಟಾಚಾರಕ್ಕೂ ಡಕಾಯಿತಿ ಅಥವಾ ಲೂಟಿಗೂ ಕಡಿಮೆಯೇನಿಲ್ಲ.!

ನಮ್ಮನ್ನಾಳುವ ಸರ್ಕಾರಗಳಿಗೆ ಇಂಥಾ ಸಾಮಾನ್ಯ ಸಂಗತಿಗಳು, ಜನರ ಸಂಕಷ್ಟಗಳು ಅರ್ಥವೇ ಆಗೋಲ್ಲ. ಅರ್ಥವಾದ್ರೂ ಅವುಗಳದ್ದು ಜಾಣಕಿವುಡು. ಏಕೆಂದರೆ ಸರ್ಕಾರಗಳಿರುವುದು ಕಾರ್ಪೊರೇಟ್ ಖೂಳರ ಋಣದಲ್ಲೇ ಆಗಿರುವುದರಿಂದ ಅವರ ಋಣ ತೀರಿಸುವ ಯಾವ ಅವಕಾಶವನ್ನೂ ಅದು ವ್ಯರ್ಥವಾಗಿಸೋಲ್ಲ. ಅವರಿಗೆ ಜನ ನೆನಪಾಗೋದು ಎಲೆಕ್ಷನ್ ಟೈಮಲ್ಲಿ ಮಾತ್ರ !ಇದೇ ದಂಧೆಯನ್ನು ಇವರು ಕುಂಭಮೇಳದ ಸಂದರ್ಭದಲ್ಲಿಯೂ ಮಾಡಿ ದುಡ್ಡು ಮಾಡಿದ್ದರು. ನಮ್ಮ ಜನರ ಧಾರ್ಮಿಕ ದೌರ್ಬಲ್ಯ ಗೊತ್ತಿದ್ದೇ ಪ್ರಯಾಗ್ ರಾಜ್ ಗೆ ಹೋಗುವ ವಿಮಾನ ದರವನ್ನು ಹತ್ತು ಪಟ್ಟು ಹೆಚ್ಚಿಸಿದ್ದರು. ಅವರಿಗೆ ಜನ ಎಷ್ಟು ದುಡ್ಡಾದರೂ ಕೊಟ್ಟು ಪಯಣಿಸುತ್ತಾರೆಂದು ಗೊತ್ತು.! ಅಲ್ಲದೇ ಹಲವು ವಿಶೇಷ ಸಂದರ್ಭಗಳಲ್ಲಿ ಜನರ ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡೇ ಈ ಸಂಸ್ಥೆಗಳು ತಮ್ಮ ಅಸ್ತಿತ್ವ ಕಂಡುಕೊಂಡಿವೆ.

ಬಹುಶಃ ಕೇಂದ್ರ ಸರ್ಕಾರದ ಭಾಗವಾಗಿ ನಾಗರಿಕ ವಿಮಾನಯಾನ ಸಚಿವಾಲಯ ಎಂಬುದೊಂದು ಮಿನಿಸ್ಟ್ರಿ ಇದೆ ಅದಕ್ಕೊಬ್ಬ ಮಂತ್ರಿಯೂ ಇದ್ದಿರಬಹುದು. ಅದಕ್ಕೆ ಇರುವ ಪವರ್ ಗಳೇನು ಎಂಬುದು ಮಾತ್ರ ಜನಸಾಮಾನ್ಯರಿಗೆ ಅರ್ಥವಾಗಿಲ್ಲ. ವಿಮಾನಗಳು ರದ್ದಾಗಿ ಪ್ರಯಾಣಿಕರು ಪರದಾಡುವಂತಹ ದುಸ್ತರ ಸನ್ನಿವೇಶಗಳಲ್ಲಿ ಜನರ ಹಿತ ಕಾಪಾಡಿ ಅನಗತ್ಯ ದರ ಹೆಚ್ಚಳಕ್ಕೆ ಅವಕಾಶ ಮಾಡಿಕೊಡದೇ ಇರುವುದು ವಿಮಾನ ಸಚಿವಾಲಯದ ಆ ಹೊತ್ತಿನ ಕರ್ತವ್ಯವಾಗಬೇಕಿತ್ತು. ಆದರೆ ಇದನ್ನೆಲ್ಲಾ ನೋಡಿಯೂ ನಮ್ಮ ವಿಮಾನಯಾನ ಸಚಿವಾಲಯ ತೆಪ್ಪಗೇ ಇತ್ತು.

ವಿಮಾನ ಪ್ರಯಾಣದರಗಳು ಪ್ರತೀ ಕ್ಷಣಕ್ಕೂ ಷೇರುಮಾರುಕಟ್ಟೆಯ ದರದಂತೆ ಬದಲಾಗುತ್ತಲೇ ಇರುತ್ತದೆ. ಹೀಗೆ ಮನಬಂದಂತೆ ಪ್ರಯಾಣದರಗಳನ್ನು ಹೆಚ್ಚಿಸುವ ವಿಮಾನ ಸಂಸ್ಥೆಗಳ ಮೇಲೆ ಸಚಿವಾಲಯಕ್ಕೆ ಯಾವುದೇ ನಿಯಂತ್ರಣವಿರುವುದಿಲ್ಲವೇ...? ಕಣ್ಣೆದುರೇ ಹೀಗೆ ಪ್ರಯಾಣಿಕರನ್ನು ಅವರ ಅಸಹಾಯಕತೆಯ ಲಾಭ ಪಡೆದು ಲೂಟಿ ಮಾಡುವ ಭಂಡತನವನ್ನು ನಿಯಂತ್ರಿಸಬೇಕೆಂಬ ಕನಿಷ್ಠ ಯೋಚನೆಯೂ ವಿಮಾನಯಾನಖಾತೆಯ ಮಂತ್ರಿಗೆ ಬಂದಿಲ್ಲವೇ..? ಅಥವಾ ದರ ಏರಿಕೆಗೂ ತಮಗೂ ಕೊನೇಪಕ್ಷ ಒಂದು ನೈತಿಕ ಸಂಬಂಧವೂ ಇಲ್ಲವೇ..?

ಜನರನ್ನು ಹಗಲುದರೋಡೆ ಮಾಡುವ, ಲೂಟಿ ಮಾಡುವ ಇಂಥಾ ಸನ್ನಿವೇಶಗಳನ್ನು ನಿಯಂತ್ರಿಸುವ ತಾಕತ್ತಿಲ್ಲವೆಂದ ಮೇಲೆ ಅಂಥಾದ್ದೊಂದು ಇಲಾಖೆಯಾದರೂ ಏಕೆ ಬೇಕು. ಇದೇ ಮಾತು ಸಾಲು ಸಾಲು ಹಬ್ಬಗಳ ರಜೆಗಳಿದ್ದಾಗ ನಮ್ಮ ಖಾಸಗಿಬಸ್ ನವರು ಹುಚ್ಚಾಪಟ್ಟೆ ಏರಿಸುವ ಬಸ್ ಪ್ರಯಾಣದರಕ್ಕೂ ಮತ್ತು ಅವರನ್ನು ನಿಯಂತ್ರಿಸದ ರಾಜ್ಯದ ಸಾರಿಗೆ ಸಚಿವಾಲಯಕ್ಕೂ ಅನ್ವಯಿಸುತ್ತದೆ.

ಅಂತೂ ಜನರಿರುವುದೇ ಶೋಷಣೆಗೆ ಒಳಗಾಗಲು ಎನ್ನುವಂತಾಗಿರುವ ಈ ಹೊತ್ತಿನ ದುರಂತವೆಂದರೆ ಜನರೂ ಕೂಡಾ ಅವರು ಬಸ್ ಪ್ರಯಾಣಿಕರೇ ಆಗಿರಲೀ, ವಿಮಾನ ಪ್ರಯಾಣಿಕರೇ ಆಗಿರಲೀ ಇಂತಹ ಅಪಸವ್ಯಗಳಿಗೆ, ಅನ್ಯಾಯಗಳಿಗೆ , ಸುಲಿಗೆಗೆ, ಅಕ್ರಮಗಳಿಗೆ, ಲಂಚಬಾಕರಿಗೆ ಹಾಗೂ ಎಲ್ಲಾ ರೀತಿಯ ಶೋಷಕರ ಅಟ್ಟಹಾಸಗಳ ಕೃತ್ಯಕ್ಕೆ ಈಗಾಗಲೇ ಒಗ್ಗಿಹೋಗಿ ಅದನ್ನೇ ನಾರ್ಮಲ್‌ಲೈಫು ಅಂದುಕೊಂಡಿರೋದರಿಂದ ಇಂತಹ ದೌರ್ಜನ್ಯದ ವಿರುದ್ಧ ದನಿ ಎತ್ತುವ ಚಲನೆಯನ್ನೇ ಕಳೆದುಕೊಂಡಿದ್ದಾರೆ.

ವಿಪರ್ಯಾಸವೆಂದರೆ ಜನರೂ ಸಹಾ ಪುರಾಣ, ಇತಿಹಾಸ ಪ್ರತಿಮೆ_ ದೇವರು ,ಧರ್ಮ ಜಾತಿ ಈ ವಿಚಾರಗಳಿಗೆ ಸಡನ್ ಆಗಿ ಸ್ಪಾರ್ಕ್ ಆಗುವಷ್ಟು ಚುರುಕಾಗಿ ನಾನಾ ಇಲಾಖೆಗಳ ಹಗಲು ದರೋಡೆಯ ವಿರುದ್ಧ , ಭ್ರಷ್ಟಾಚಾರದ ವಿರುದ್ಧ ಕಣ್ಣೆದುರಿನ ನಿತ್ಯ ಬವಣೆಗಳ ವಿರುದ್ಧ ಉಸಿರೆತ್ತುವ ಉಸಿರನ್ನೇ ಕಳೆದುಕೊಂಡಿದ್ದಾರೆ. ಬಹುಶಃ ಜನರ ಈ ವೀಕ್‌ನೆಸೇ ಆಳುವವರ ಸ್ಟ್ರೆಂತು.!

* ಮರೆಯುವ ಮುನ್ನ *

ಜನರ ಸನ್ನಿವೇಶದ ಅಸಹಾಯಕತೆಯ ಲಾಭ ಪಡೆಯುವುದು ಕೇವಲ ಕಾರ್ಪೊರೇಟ್ ಕುಳಗಳು ಮಾತ್ರವಲ್ಲ, ನಮ್ಮ ನಡುವೆಯೇ ಅಂಥಾ ಧೀಮಂತರಿದ್ದಾರೆ.! ಹಾಗೇ ಗಮನಿಸಿ.. ನಿಮ್ಮ ಮಗನ ಶಾಲೆಗೆ ಹತ್ತಿರವೇ ಇರುವ ಬಾಡಿಗೆ ಮನೆ ಹುಡುಕಿದರೆ ಅದಕ್ಕೆ ಹೆಚ್ಚು ಬಾಡಿಗೆ ಪೀಕುತ್ತಾರೆ, ಈಗಾಗಲೇ ಇರುವ ನಿಮ್ಮ ಪ್ರಾಪರ್ಟಿ ಪಕ್ಕದ ಜಾಗ ಖರೀದಿಸಲು ಹೊರಟಾಗ ಅದಕ್ಕೆ ಇನ್ನೂ ಹೆಚ್ಚಿನ ದರ ಡಿಮ್ಯಾಂಡ್ ಮಾಡುತ್ತಾರೆ, ಸಾರಿಗೆ ಮುಷ್ಕರದ ಸಮಯದಲ್ಲಿ ಸಿಗುವ ಇತರೆ ವಾಹನಗಳಿಗೆ ಸಿಕ್ಕಾಪಟ್ಟೆ ಹೆಚ್ಚಿನ ಪ್ರಯಾಣ ದರ ಕೀಳುತ್ತಾರೆ, ಪ್ರವಾಸಿ ತಾಣಗಳಲ್ಲಿ ಸೀಸನ್ ಗಳಲ್ಲಿ ಒಂದಕ್ಕೆ ನಾಲ್ಕರಷ್ಟು ಊಟ ತಿಂಡಿ ರೇಟು ಕಕ್ಕಲೇ ಬೇಕು, ಸ್ವಲ್ಪ ಫಲಿತಾಂಶ ಹೆಚ್ಚಿಗೆ ಬಂದ ಶಾಲಾ ಕಾಲೇಜು ಕೋಚಿಂಗ್ ಸೆಂಟರ್ ಗಳು ಪೋಷಕರ ದೌರ್ಬಲ್ಯ ಅರಿತು ಅಮಾನವೀಯವಾಗಿ ಪೋಷಕರಿಂದ ಹಣದ ಸುಲಿಗೆಗೆ ಇಳಿಯುತ್ತವೆ, ನಿಮ್ಮ ಪೇಷೆಂಟ್ ಯಾವ ಕ್ಷಣದಲ್ಲಾದರೂ ಸಾಯುವನೆಂದು ಗೊತ್ತಿದ್ದರೂ, ನೀವು ಹಣ ಖರ್ಚು ಮಾಡುವ ತಾಕತ್ತಿರುವವರಾಗಿದ್ದಲ್ಲಿ ಏನೇನೋ ಹೇಳಿ ಒಂದಕ್ಕೆ ಹತ್ತರಷ್ಟು ಹಣ ಲಪಟಾಯಿಸುವ ಕಾರ್ಪೊರೇಟ್ ಆಸ್ಪತ್ರೆಗಳ ಹಗಲುದರೋಡೆಗಳದ್ದೇ ದೊಡ್ಡ ಕತೆಗಳಿವೆ, ಹಾಗೆಯೇ ಸರ್ಕಾರಿ ಇಲಾಖೆ ಅಥವಾ ಇನ್ನಾವುದೇ ಇಲಾಖೆಯಲ್ಲಿ ನಿಮ್ಮದಲ್ಲದ ತಪ್ಪಿಗೆ ನೀವು ಕೊಡಲೇ ಬೇಕಾದ ದಂಡ, ಹೆಚ್ಚಿನ ಹಣ ಶ್ರಮ....ಇವೆಲ್ಲಾ ಹೇಳುತ್ತಾ ಹೋದಂತೆಲ್ಲಾ ಅನಿಸೋದು....

ಇವೆಲ್ಲಾ ಯಾವ ಲೂಟಿಗೆ ಕಡಿಮೆಯಿವೆ..?

ಇದು ಬಿಟ್ಹಾಕಿ. ಆನ್‌ಲೈನ್‌ನಲ್ಲಿ ಷಾಪಿಂಗ್ ನಲ್ಲಿ ನೀವು ಬ್ರೌಸ್ ಮಾಡೋ ಪ್ರಾಡಕ್ಟ್ ನಿಂದಲೇ ನಿಮ್ಮ ಅಭಿರುಚಿ ಏನೂ ಅಂತ ತಿಳಿದು, ಆ ವಸ್ತುವಿಗೆ , ನೀವು ಹುಡುಕುವ ಆ ಸೈಟಿಗೇ ಮಾತ್ರ ಬೇಕಾಗಿಯೇ ಇದ್ದಕ್ಕಿದ್ದಂತೆ ರೇಟು ಜಾಸ್ತಿಮಾಡ್ತಾರೆ ಅಂದ ಮೇಲೆ ಇವೆಲ್ಲವೂ ಜನರ ಅಸಹಾಯಕತೆಯ ದುರ್ಲಾಭ ಪಡೆಯುವ ಡಕಾಯಿತರ ಮನೋಭಾವದಂತಲ್ಲವೇ..?

ನೆನಪಿಡಿ ! ದರೋಡೆ ಡಕಾಯಿತಿ ಭ್ರಷ್ಟಾಚಾರ ಕಳ್ಳತನ ಎಂದರೆ ಅದು ಗೌಪ್ಯವಾಗಿ ಕರಾಳದಲ್ಲಿ ಕೆಟ್ಟವರೇ ಮಾಡಬೇಕೆಂದೇನಿಲ್ಲ. ಒಳ್ಳೆಯ ಮುಖವಾಡದ ಸೋಗಿನವರೂ ರಾಜಾರೋಷವಾಗಿ ಮಾಡುತ್ತಾರೆ. ಆದರೆ ಯಾಮಾರಿಸುವ ರೀತಿ ಸ್ವಲ್ಪ ಡಿಫರೆಂಟು ಅಷ್ಟೇ. ! ರಿಯಾಲಿಟಿ ಅಂದ್ರೆ, ನಮ್ಮ ಜನ ಕೂಡಾ, ದುಡಿಮೆ–ದುಡ್ಡು ಹೆಚ್ಚಾಗಿರುವುದರಿಂದಲೋ ಏನೋ, ಈ ರೀತಿಯ ಸನ್ನಿವೇಶಗಳಿಗೆಲ್ಲಾ ಕೊನೇಪಕ್ಷ ಒಂದು ಸಣ್ಣ ಪ್ರತಿಭಟನೆಯೂ ಇಲ್ಲದಂತೆ ಮೂಕರಾಗಿಯೇ ಸ್ಪಂದಿಸುತ್ತಲೇ ಬಂದಿದ್ದಾರೆ....!! ಯಾರಿಗೆ ಹೇಳೋದು....ಏನನ್ನು ಕೇಳೋದು..??



ಹಿರಿಯೂರು ಪ್ರಕಾಶ್

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,